ಸರ್ವಜ್ಞನ ವಚನಗಳು

ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ
ಬೆಂಗಳೂರು-೧೯

ಸರ್ವಜ್ಞ ವಚನಗಳು

ಕಿಟೆಲ್ ಕೋಶದ ಸರ್ವಜ್ಞ ವಚನಗಳು

ಮತ್ತು

ಕೆಳದಿ ವಸ್ತುಸಂಗ್ರಹಾಲಯದ ಹಸ್ತಪ್ರತಿಯ ಸರ್ವಜ್ಞ ವಚನಗಳು

ಪ್ರಧಾನ ಸಂಪಾದಕ

ಪ್ರೊ|| ಎಂ. ವಿ. ಸೀತಾರಾಮಯ್ಯ

ಸಂಪಾದಕರು

ವಿ. ವೆಂಕಟರಾವ್

ಕೆ. ಆರ್. ಗಣೇಶ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

೫೪, ೩ನೆಯ ಅಡ್ಡಬೀದಿ

ಗವಿಪುರಂ ವಿಸ್ತರಣ

ಬೆಂಗಳೂರು–೫೬೦ ೦೧೯

೧೯೮೨

[ಬೆಲೆ : ರೂ. ೧೫–೦೦

SARVAJNA VACHANAGALU : A Collection of Tripadi Verses by Sarvajna (C. 1500), gleaned from 'A Kannada-English Dictionary' by Rev. F. Kittel (Mangalore, 1894), together with those contained in a single palm-leaf Ms. belonging to Keladi Museum Library, Keladi. Demy 8vo pp. 8 + 28 + 138 ; 1982.

Published with the FINANCIAL ASSISTANCE FROM THE GOVERNMENT OF INDIA, DEPARTMENT OF EDUCATION AND CULTURE.

Price : Rs. 15-00

Printed by : Sri Lakshmi Printers, 91/9, I Block, Nethaji Road, Thyagaraja Nagar, Bangalore 560 028.

ಸರ್ವಜ್ಞೋಪಾಸಕ

ದಿವಂಗತ

ರೆವರೆಂಡ್ ಚನ್ನಪ್ಪ ಉತ್ತಂಗಿ

ಅವರ

ಶತಮಾನೋತ್ಸವ ಸಂದರ್ಭದಲ್ಲಿ

ಅವರ ಸಂಸ್ಮರಣೆಗಾಗಿ

ಅರ್ಪಿತ

ಮುನ್ನುಡಿ

ಶಿಲಾಶಾಸನಗಳು, ನಾಣ್ಯಗಳು, ಮಾಸ್ತಿಗಲ್ಲು – ವೀರಗಲ್ಲುಗಳು ಮತ್ತು ತಾಡವೋಲೆ, ಭೂರ್ಜಪತ್ರ ಮತ್ತು ಕಾಗದದ ಮೇಲೆ ಬರೆದ ಪ್ರಾಚೀನ ಹಸ್ತಪ್ರತಿಗಳು, ಬಖೈರುಗಳು, ಕಡತಗಳು ಮುಂತಾದವು ದೇಶದ ಅಮೂಲ್ಯವಾದ ಸಾಂಸ್ಕೃತಿಕ ಆಸ್ತಿ. ದೇಶದ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸರಚನೆಯಲ್ಲಿ ಇವುಗಳ ಪಾತ್ರ ಹಿರಿದು. ಇವುಗಳ ಸಂರಕ್ಷಣೆ ಸರ್ಕಾರದ ಮತ್ತು ಎಲ್ಲ ಜನರ ಪವಿತ್ರ ಕರ್ತವ್ಯ.

ಹಸ್ತಪ್ರತಿಗಳಲ್ಲಿ ಸಾಹಿತ್ಯಕೃತಿಗಳಲ್ಲದೆ ವೈದ್ಯ, ಜ್ಯೋತಿಷ್ಯ, ಅಶ್ವಶಾಸ್ತ್ರ, ಗಜಶಾಸ್ತ್ರ, ಪಶುವೈದ್ಯ, ಮುಂತಾದ ಶಾಸ್ತ್ರವಿವರಗಳೂ ಲಿಖಿತವಾಗಿರುತ್ತವೆ. ಈ ಶಾಸ್ತ್ರಗಳಲ್ಲಿ ನಿಪುಣರಾದವರು ಅನೇಕ ಸಂದರ್ಭಗಳಲ್ಲಿ ಅವುಗಳನ್ನು ಕಾವ್ಯ ರಚನೆಯ ಧಾಟಿಯಲ್ಲಿಯೇ ಬರೆದಿರುವುದು ಒಂದು ವೈಶಿಷ್ಟ್ಯ. ಆದ್ದರಿಂದ, ಸಾಹಿತ್ಯ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ಎಲ್ಲ ಹಸ್ತಪ್ರತಿಗಳೂ ಸಂಗ್ರಹಣವಾಗಬೇಕಾದವು. 1911ರಷ್ಟು ಹಿಂದೆಯೇ ದಿವಂಗತ ಬಿ.ಎಂ.ಶ್ರೀ.ಯವರು ಧಾರವಾಡದಲ್ಲಿ "ಕನ್ನಡ ಮಾತು ತಲೆಯೆತ್ತುವ ಬಗೆ" ಎಂಬ ತಮ್ಮ ಹೊಸಗನ್ನಡ ಯುಗ ಪ್ರವರ್ತಕ ಭಾಷಣದಲ್ಲಿ, "ದೇಶದಲ್ಲಿ ಹುಳು ತಿಂದುಹೋಗದೆ ಉಳಿದಿರುವ ಗ್ರಂಥಗಳನ್ನೆಲ್ಲಾ ಶೇಖರಿಸಿ ಒಂದನ್ನೂ ಬಿಡದಂತೆ ಅಚ್ಚುಹಾಕುವುದು" ಎಂದು ಘೋಷಿಸಿದ್ದರು. ಅದಕ್ಕೂ ಮೊದಲೇ ಬಿ. ಎಲ್. ರೈಸ್ ಸಾಹೇಬರೂ ಆರ್. ನರಸಿಂಹಾಚಾರ್ಯರೂ ಹಸ್ತಪ್ರತಿ ಸಂಗ್ರಹಣ ಕಾರ್ಯವನ್ನು ಪ್ರಾಕ್ತನ ವಸ್ತ್ವನ್ವೇಷಣ ಕಾರ್ಯದ ಅಂಗವಾಗಿ ನಡಸಿಕೊಂಡು ಬಂದರು. ಹಸ್ತಪ್ರತಿಗಳ ಸಂಗ್ರಹಣ ಕಾರ್ಯದಷ್ಟೇ ಮುಖ್ಯವಾದ ಕಾರ್ಯ ಅವುಗಳನ್ನು ಬೆಳಕಿಗೆ ತರುವುದು. ಈ ಕಾರ್ಯವನ್ನು ರೈಸ್ ಅವರು Bibliotheca Carnatica ದ (ಕರ್ನಾಟಕ ಗ್ರಂಥಾವಳಿ) ಮೂಲಕ ಮಾಡಿ ಕನ್ನಡ ಭಾಷೆ ಮತ್ತು ಸಾಹಿತ್ಯಗಳ ಏಳಿಗೆಗೆ ಹೆದ್ದಾರಿಯನ್ನು ನಿರ್ಮಾಣ ಮಾಡಿದರು. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಸೇರಿದಂತೆ ಆ ಕಾಲದಲ್ಲಿ ಮೈಸೂರಿನ ಓರಿಯಂಟಲ್ ಲೈಬ್ರರಿ ಜನ್ಮತಳೆಯಿತು; ಅದರಲ್ಲಿ ಅಮೂಲ್ಯವಾದ ಕನ್ನಡ ಮತ್ತು ಸಂಸ್ಕೃತದ ಹಸ್ತಪ್ರತಿಗಳು ಶೇಖರವಾದವು. ಮೈಸೂರು ವಿಶ್ವವಿದ್ಯಾನಿಲಯವು ಕನ್ನಡ ಅಧ್ಯಯನ ಸಂಸ್ಥೆಯನ್ನು ಸ್ಥಾಪಿಸಿದಮೇಲೆ ಕನ್ನಡ ಭಾಷೆಯ ಹಸ್ತಪ್ರತಿಗಳೆಲ್ಲವೂ ಅಲ್ಲಿಗೆ ಸ್ಥಳಾಂತರಗೊಂಡು ಅಲ್ಲಿ ಕನ್ನಡ ಹಸ್ತಪ್ರತಿಗಳ ಭಂಡಾರವೂ ಅವುಗಳ ಪ್ರಕಟನ ಕಾರ್ಯವೂ ನಿರಂತರವಾಗಿ ಸಾಗಿಬರುತ್ತಿರುವುದು ಸಂತೋಷದ, ಶ್ಲಾಘ್ಯವಾದ ವಿಚಾರ. ಇತರ ವಿಶ್ವವಿದ್ಯಾಲಯಗಳೂ ಈ ಸಂಸ್ಕೃತಿ ಸಂಗೋಪನ ಕಾರ್ಯವನ್ನು ಕೈಗೊಂಡು ನಡಸುತ್ತಿವೆ. ಈ ಮಹತ್ವದ ಕಾರ್ಯವನ್ನು ಬಿ.ಎಂ.ಶ್ರೀ. ಪ್ರತಿಷ್ಠಾನ ಸದ್ಯಕ್ಕೆ ತನ್ನ ಪ್ರಧಾನ ಕರ್ತವ್ಯ ಕಾರ್ಯವಾಗಿ ಕೈಗೆತ್ತಿಕೊಂಡಿದೆ.

ಈ ಮಹತ್ವದ ಕಾರ್ಯವು ಒಬ್ಬಿಬ್ಬರು ಅಥವಾ ಒಂದೆರಡು ಸಂಸ್ಥೆಗಳು ಮಾಡಿ ಮುಗಿಯುವಂಥದಲ್ಲ. ಆಗಬೇಕಾದ ಕಾರ್ಯ ಅಪಾರವಾಗಿದೆ. ಸಹಸ್ರ ಸಂಖ್ಯೆಯಲ್ಲಿ ಹಸ್ತಪ್ರತಿಗಳು ಇನ್ನೂ ನಾಡಿನ ಮೂಲೆಮೂಲೆಗಳಲ್ಲಿ ಮನೆತನದ ಆಸ್ತಿಯಾಗಿ ಕತ್ತಲಲ್ಲಿ ಕೊಳೆಯುತ್ತ ಹಳುತುಹೋಗುವ ಸ್ಥಿತಿಯಲ್ಲಿ ಬಿದ್ದಿವೆ. ಇವುಗಳ ಸಂಗ್ರಹಣಕಾರ್ಯ ಅತ್ಯಗತ್ಯವಾಗಿ ತ್ವರಿತವಾಗಿ ಆಗಬೇಕಾಗಿದೆ. ಈ ಕಾರ್ಯದ ಮಹತ್ವವನ್ನು ಕಂಡುಕೊಂಡು ಕೇಂದ್ರಸರ್ಕಾರವು ಹಸ್ತಪ್ರತಿಗಳ ಸಂಗ್ರಹಣ ಮತ್ತು ಪ್ರಕಟನ ಕಾರ್ಯಗಳ ಯೋಜನೆಯನ್ನು ರೂಪಿಸಿ, ಅದರಂತೆ ಸ್ವಯಂನಿಯೋಜಿತ ಸಂಸ್ಥೆಗಳಿಗೆ ಧನಸಹಾಯ ಮಾಡಲು ಮುಂದೆಬಂದಿದೆ. ಕೇಂದ್ರ ಸರ್ಕಾರವು ನೀಡಿದ ಧನಸಹಾಯದಿಂದ ಈ ವರ್ಷ ಪ್ರತಿಷ್ಠಾನ ಮೂರು ನಾಲ್ಕು ಹಸ್ತಪ್ರತಿಗಳನ್ನು ಪ್ರಕಟಿಸಲು ಸಾಧ್ಯವಾಗಿದೆ. ಈ ಉದಾರ ಸಹಾಯಕ್ಕಾಗಿ ಪ್ರತಿಷ್ಠಾನ ಕೇಂದ್ರಸರ್ಕಾರಕ್ಕೆ ಕೃತಜ್ಞವಾಗಿದೆ. ಕೇಂದ್ರಸರ್ಕಾರದ ಧನಸಹಾಯ ಯೋಜನೆಯ ಅನ್ವಯ ಪ್ರಕಟವಾಗುತ್ತಿರುವ ಗ್ರಂಥಗಳಲ್ಲಿ ಈ "ಕಿಟೆಲ್ ಕೋಶದ ಸರ್ವಜ್ಞ ವಚನಸಂಗ್ರಹ"ವೂ ಸೇರಿದೆ. ದೀರ್ಘಕಾಲ ಹಿಡಿಯುವ ಹಾಗೂ ಬಹು ಶ್ರಮಸಾಧ್ಯವಾದ ಗ್ರಂಥಸಂಪಾದನ ಕಾರ್ಯವನ್ನೂ, ಮುದ್ರಣ ಕಾರ್ಯವನ್ನೂ ಒಂದು ವರ್ಷದ ಕಾಲಪರಿಮಿತಿಯಲ್ಲಿ ಮುಗಿಸಿಕೊಟ್ಟು ಕೃತಕೃತ್ಯರಾದ ಸಂಪಾದಕ ವರ್ಗಕ್ಕೆ ಪ್ರತಿಷ್ಠಾನದ ವಂದನೆಗಳು ಸಲ್ಲುತ್ತವೆ.

ನಿಟ್ಟೂರು ಶ್ರೀನಿವಾಸರಾವ್
ಅಧ್ಯಕ್ಷ

ಉಪಕಾರ ಸ್ಮರಣೆ

ಹಸ್ತಪ್ರತಿಗಳ ಸಂರಕ್ಷಣೆ ಮತ್ತು ಪ್ರಕಟನೆಗಳ ಯೋಜನೆಯ ಅನ್ವಯ ಉದಾರವಾಗಿ ಧನಸಹಾಯ ನೀಡಿದ ಭಾರತ ಸರ್ಕಾರದ ವಿದ್ಯಾ ಮತ್ತು ಸಂಸ್ಕೃತಿ ವಿಭಾಗದ ಸಚಿವರಿಗೂ, ಕಾರ್ಯದರ್ಶಿ–ಉಪಕಾರ್ಯದರ್ಶಿಗಳಿಗೂ, ಈ ಸಂಬಂಧದಲ್ಲಿ ನೆರವಾದ ಮಹನೀಯರಿಗೂ ಪ್ರತಿಷ್ಠಾನ ಅತ್ಯಂತ ಕೃತಜ್ಞವಾಗಿದೆ.

ಕೆಳದಿ ಮ್ಯೂಸಿಯಮ್ಮಿನಲ್ಲಿರುವ ಸರ್ವಜ್ಞ ವಚನಗಳನ್ನುಳ್ಳ ಓಲೆಗರಿಯ ಹಸ್ತಪ್ರತಿಯನ್ನು ಎರವಲು ಕೊಟ್ಟ ಮ್ಯೂಸಿಯಮ್ಮಿನ ಅಧಿಕಾರಿಗಳಿಗೆ ಪ್ರತಿಷ್ಠಾನ ಋಣಿಯಾಗಿದೆ.

'ಕನ್ನಡ ಸಾಹಿತ್ಯ ಚರಿತ್ರೆ'ಯ 1978ರ ಮುದ್ರಣದಲ್ಲಿ ಪ್ರಕಟವಾಗಿರುವ 'ಅಭ್ಯಾಸಸೂಚಿ'ಯಲ್ಲಿ ಸರ್ವಜ್ಞ ವಿಷಯಕ ಭಾಗವನ್ನು (ಪು. ೫೪೯–೫೫೪) ಪುನರ್ ಮುದ್ರಣ ಮಾಡಿಕೊಳ್ಳಲು ಅನುಮತಿ ನೀಡಿದ ಡಾ|| ರಂ. ಶ್ರೀ. ಮುಗಳಿ ಅವರಿಗೆ ನಾವು ವಿಶೇಷವಾಗಿ ಕೃತಜ್ಞರು.

ಸಂಪಾದನ ಕಾರ್ಯದಲ್ಲಿ ಉದ್ದಕ್ಕೂ ನನ್ನೊಂದಿಗೆ ಶ್ರಮಿಸಿ ಬಹುವಿಧಗಳಲ್ಲಿ ನೆರವಾದ ನನ್ನ ವಿದ್ಯಾರ್ಥಿ ಮಿತ್ರರು ಶ್ರೀ ವಿ. ವೆಂಕಟರಾವ್ ಅವರ ಸಹಾಯ ಸಹಕಾರಗಳು ನೆನೆಯತಕ್ಕವು. ಅಂತೆಯೆ ಶ್ರೀ ಕೆ. ಆರ್. ಗಣೇಶ ಅವರ ಸಹಕಾರವೂ ನೆನೆಯತಕ್ಕದ್ದು.

ಪುಸ್ತಕವನ್ನು ಒಪ್ಪವಾಗಿ ಓರಣವಾಗಿ ಅಚ್ಚುಮಾಡಿಕೊಟ್ಟ ಶ್ರೀ ಲಕ್ಷ್ಮೀ ಮುದ್ರಕರಿಗೆ ನಮ್ಮ ವಂದನೆ.

ಎಂ. ವಿ. ಸೀತಾರಾಮಯ್ಯ
ಸಂಸ್ಥಾಪಕ ಕಾರ್ಯದರ್ಶಿ
ಮತ್ತು
ಅಧ್ಯಯನ ನಿರ್ದೇಶಕ

ಪರಿವಿಡಿ

ಪುಟ

ಅನುಬಂಧಗಳು

ಸಂಕ್ಷಿಪ್ತಗಳು

ಉ — ಉತ್ತಂಗಿ ಚನ್ನಪ್ಪನವರ ೧೯೫೭ರ ಮುದ್ರಣ

ಉ$_a$ — ,, ೧೯೩೫ರ ಮುದ್ರಣ

ಕಿ — ಕಿಟೆಲ್ ಕೋಶ

ಕೆ — ಕೆಳದಿ ಮ್ಯೂಸಿಯಮ್ಮಿನ ಹಸ್ತಪ್ರತಿ

ಸಂ.ಸೇ. — ಸಂಪಾದಕ ಸೇರಿಸಿದ್ದು

ಸೂ.ಪಾ.— ಸೂಚಿತ ಪಾಠ

ಸ್ವೀ.ಪಾ.— ಸ್ವೀಕೃತ ಪಾಠ

ಪ್ರಸ್ತಾವನೆ

ಸರ್ವಜ್ಞ ಮತ್ತು ಆತನ ತ್ರಿಪದಿಗಳು

೧

ಸರ್ವಜ್ಞ ಜನತೆಯ ಕವಿ; ಆದರೆ ಜಾನಪದ ಕವಿಯಲ್ಲ. ಅವನ ಪದ್ಯಗಳು ಜಾನಪದ ಸತ್ವದಿಂದ ತುಂಬಿವೆ. ಅವನು ಜನತೆಗಾಗಿ ಜನ ಬಳಸುವ ಭಾಷೆಯಲ್ಲಿ, ಜಾನಪದ ಮಟ್ಟಿನ ತ್ರಿಪದಿಯಲ್ಲಿ ಸಮಯ ಸ್ಫೂರ್ತಿಯಿಂದ ಪದ್ಯಗಳನ್ನು ಕಟ್ಟಿಕೊಂಡು ಹೋದ. ಅವನು ಸಹಜ ಕವಿ; ಆಶುಕವಿ. ಸತತಾಭ್ಯಾಸ ಪ್ರಯತ್ನದಿಂದ, ಪೂರ್ವಕವಿ ಪರಿಚಯದಿಂದ, ಲಕ್ಷಣಕ್ಕೆ ಕಟ್ಟುಬಿದ್ದು, ತಾನು ಕವಿಯಾಗಬೇಕೆಂದು ಬಯಸಿ ಬರೆಯಲಿಲ್ಲ. ಪಂಡಿತರಿರಲಿ, ಪಾಮರರನ್ನು ಮೆಚ್ಚಿಸುವುದು ಕೂಡ ಅವನ ಗುರಿಯಲ್ಲ. ಕವಿಗಜಾರಣ್ಯದಲ್ಲಿ ಅವನು ಹಿಂಡಗಲಿದ ಒಂಟಿ ಸಲಗ; ಅವನು ನಡೆದದ್ದೇ ದಾರಿ. ಲೋಕ ಅವನ ಶಿಕ್ಷಣ ಶಾಲೆ; ಲೋಕಾನುಭವ ಅವನ ಪದ್ಯಗಳ ವಿಷಯ; ಲೋಕಶಿಕ್ಷಣ ಅವನ ಧ್ಯೇಯ. ರಸಾನುಭೂತಿಯಲ್ಲಿ ಸರ್ವಜ್ಞನನ್ನು ಯಾವುದೇ ದೃಷ್ಟಿಯಿಂದ ವಿವೇಚಿಸುವಾಗ, ಈ ಅಂಶಗಳನ್ನು ನೆನಪಿನಲ್ಲಿಡಬೇಕು.

ಸರ್ವಜ್ಞ ಪದ್ಯಗಳನ್ನು ಬರೆಯಲಿಲ್ಲ, ಕಟ್ಟಿಕೊಂಡುಹೋದ ಎಂದರೆ, ಅವನು ಬರಹ ಬಾರದ ಶುದ್ಧ ಶುಂಠಿಕಾಯಿ ಎಂದು ಅರ್ಥವಲ್ಲ. ಬರೆದಿಡುವುದರಲ್ಲಿ ಅವನಿಗೆ ನಂಬಿಕೆಯಿಲ್ಲ; ಬರೆಯುವ ಗೋಜಿಗೆ ಅವನು ಹೋಗಿರಲಾರ; "ಬರೆವವರ ಕೂಡೆ ಹಗೆ ಬೇಡ" ಎಂನು ಬಹುಶಃ ವ್ಯಂಗ್ಯವಾಗಿ ಬರೆಯಬಲ್ಲವರ ಶಕ್ತಿಯನ್ನು ಎತ್ತಿ ಆಡಿರುವ ಅವನು ಬರೆಯುವ ಹವ್ಯಾಸದಿಂದ ದೂರವಾದವನೆ.

ಹೇಳಲರಿಯೆ ನಾನು ಹೇಳಿನೆ ಹೇಳಿದೆ
ಭಾಳಲೋಚನನಾ ಶರಣರ–ಆಳಾಗಿ
ಹೇಳಿದೆ ನೋಡ ಸರ್ವಜ್ಞ.

—ಎಂದಿರುವುದರಿಂದ, ಊರೂರು ಕೇರಿಕೇರಿ ತಿರುಗುತ್ತ ಸರ್ವಜ್ಞ ಪದ್ಯಗಳನ್ನು ಹೇಳಿಕೊಂಡು—ಅಥವಾ ಹಾಡಿಕೊಂಡು—ಹೋಗಿರಬೇಕು. ಸರ್ವಜ್ಞನ ವ್ಯಕ್ತಿತ್ವಕ್ಕೆ ಮಾರುಹೋಗಿ ಶಿಷ್ಯರಂತೆ ಅವನನ್ನು ಅನುವರ್ತಿಸಿದವರು ಒಬ್ಬಿಬ್ಬರು ಅವನು ಮತ್ತೆ ಮತ್ತೆ ಹೇಳಿದ ಪದ್ಯಗಳನ್ನು ಬರೆದಿಟ್ಟಿರಬೇಕು; ಇಲ್ಲವೆ ಹೃದ್ಗತ ಮಾಡಿಕೊಂಡು ಮುಖಸ್ಥವಾಗಿ ಸಂರಕ್ಷಿಸಿರಬಹುದು. ಈ ಪದ್ಯಗಳ ಸೊಬಗನ್ನೂ ಬೆಲೆಯನ್ನೂ ಅರಿತವರು ಸರ್ವಜ್ಞನ ಅನುವರ್ತಿಗಳಿಂದ ಹೇಳಿಸಿ ಗ್ರಂಥಸ್ಥವಾಗಿ ಮಾಡಿರಬೇಕು. ಹೀಗೆ ಮುಖಸ್ಥವಾಗಿ ಜನ್ಮಧಾರಣೆ ಮಾಡಿದ ಸರ್ವಜ್ಞನ ಪದಗಳು ಬಾಯಿಂದ

ಬರಹಕ್ಕೂ ಮತ್ತೆ ಬರಹದಿಂದ ಬಾಯಿಗೂ, ಒಂದು ಗ್ರಂಥದಿಂದ ಮತ್ತೊಂದು ಗ್ರಂಥಕ್ಕೂ ಪರ್ಯಟನ ಮಾಡಿ, ಅನೇಕ ಹಸ್ತಪ್ರತಿಗಳು ಹುಟ್ಟಿಕೊಂಡಿವೆ. ಪಂಪಾದಿ ಪ್ರತಿಷ್ಠಿತ ಕವಿಗಳ ಸ್ವಹಸ್ತಾಕ್ಷರ ಪ್ರತಿಗಳೇ ಅನ್ಯ ಲಿಪಿಕಾರರ ಕೈವಾಡ ದಿಂದ ಪಾಠವ್ಯತ್ಯಾಸಗಳಿಗೆ ಎಡೆಗೊಟ್ಟಿರುವಲ್ಲಿ, ಮುಖಸ್ಥವಾಗಿ, ಗ್ರಂಥಸ್ಥವಾಗಿ, ಎರಡೂ ವಿಧಾನಗಳಲ್ಲಿ ಸಾಗಿಬಂದಿರುವ ಸರ್ವಜ್ಞನ ಪದ್ಯಗಳಲ್ಲಿ ಹೇರಳವಾದ ಪಾಠ ವ್ಯತ್ಯಾಸಗಳಿದ್ದರೆ ಆಶ್ಚರ್ಯಪಡಬೇಕಾಗಿಲ್ಲ. ಜೊತೆಗೆ ಸರ್ವಜ್ಞನೇ ತಾನು ಒಮ್ಮೆ ಹೇಳಿದ ಪದ್ಯವನ್ನು ಮತ್ತೆ ಹೇಳಿದಾಗ ಅಲ್ಪಸ್ವಲ್ಪವೋ ಗಮನಾರ್ಹವೋ ಆದ ವ್ಯತ್ಯಾಸಗಳಾಗಿ, ಒಂದೇ ಪದ್ಯದ ಎರಡು ಮೂರು ಪಾಠಭೇದಗಳು ಇರುವ ಸಂದರ್ಭ ಗಳೂ ಉಂಟು. ಈ ನಿದರ್ಶನಗಳನ್ನು ನೋಡಿ:

ಕಂಡುವನು ನುಡಿದೊಡನೆ ಕೆಂಡವಾಗುವುದೇಕೆ
ಮಂಡಲದ ಒಳಗೆ ಜಾರದಿಹ–ಮನುಜರನು
ಕಂಡಿರುವದುಂಟೆ ಸರ್ವಜ್ಞ

ಕಂಡಂತೆ ಹೇಳಿದರೆ ಕೆಂಡ ಉರಿಯುವುದು ಭೂ-
ಮಂಡಲದ ಒಳಗೆ ಖಂಡಿತವ–ನಾಡುವರ
ಕಂಡಿಹುದೆ ಕಷ್ಟ ಸರ್ವಜ್ಞ

ಸಾಲವನು ತರುವಾಗ ಹಾಲುಬೋನುಂಡಂತೆ
ಸಾಲಿಗನು ಬಂದು ಕೇಳಿದರೆ–ಕುಂಡಿಗಂ
ಚೇಳು ಕಡಿದಂತೆ ಸರ್ವಜ್ಞ (ಚಉ. ೧೩೯೦–೧೨೬೪)

ಸಾಲವನು ಕೊಂಬಾಗ ಹಾಲುಹಣ್ಣುಂಡಂತೆ
ಸಾಲಿಗನು ಬಂದು ಎಳೆವಾಗ–ಕಿಬ್ಬದಿಯ
ಕೀಲು ಮುರಿದಂತೆ ಸರ್ವಜ್ಞ (ಚಉ. ೧೩೯೧–೧೨೬೫)

ಸಾಲವನು ಕೊಂಬಾಗ ಹಾಲೋಗರುಂಡಂತೆ
ಸಾಲಿಗನು ಬಂದು ಎಟಿವಾಗ–ಕಿಬ್ಬದಿಯ
ಕೀಲು ಮುರಿದಂತೆ ಸರ್ವಜ್ಞ (ಕಿ. ಕೋಶ, ಪು. ೧೫೪೮)

ಸಾಲವ ಕೊಂಬಾಗ ಹಾಲುಕೂಳುಂಬಂತೆ
ಸಾಲವ ಮರಳಿ ಕೊಡುವಾಗ–ಕಿಬ್ಬರಿಯ
ಕೀ(ಕೋ?)ಲು ಕೊಂಡಂತೆ ಪರಮಾರ್ಥ ('ಪರಮಾರ್ಥ', ೪೯೮)

ಇಂಥ ಸಂದರ್ಭಗಳಲ್ಲಿ ಯಾವ ಪದ್ಯವನ್ನು ಸ್ವೀಕರಿಸಬೇಕು, ಅಥವಾ ಎಲ್ಲ ಪದ್ಯಗಳನ್ನೂ ಇಟ್ಟುಕೊಳ್ಳಬೇಕೆ, ಯಾವುದು ಪ್ರಕ್ಷಿಪ್ತ ಯಾವುದು ಅಲ್ಲ, ಸಂದೇಹ

ಬಂದ ಕಡೆ ಯಾವ ಸೂತ್ರವನ್ನು ಅನುಸರಿಸಿ ಪಾಠಪರಿಷ್ಕರಣ ಮಾಡಬೇಕು, ಎಂಬ ಸಮಸ್ಯೆಗಳು ಗ್ರಂಥಸಂಪಾದಕನ ಮುಂದೆ ಪೆಡಂಭೂತವಾಗಿ ನಿಲ್ಲುತ್ತವೆ.

೨

ವಿರ್ತ್ ಮತ್ತು ಕಿಟೆಲ್ಲರ ತರುವಾಯ ಸರ್ವಜ್ಞವಚನಗಳ ಸಂಗ್ರಹಣ, ಪರಿಷ್ಕರಣ ಮತ್ತು ಪ್ರಕಾಶನಕ್ಕೆ ಮೊತ್ತಮೊದಲಿಗೆ ಕೈಹಾಕಿ ಅನೇಕ ವರ್ಷಗಳ ಸರ್ವಜ್ಞೋಪಾಸನೆಯ ಬಳಿಕ ಸವಿಸ್ತಾರವಾದ ಪೀಠಿಕೆಯೊಂದಿಗೆ ರೆವರೆಂಡ್ ಚನ್ನಪ್ಪ ಉತ್ತಂಗಿಯವರು ತಮ್ಮ ಪರಿಷ್ಕೃತ ಮುದ್ರಣವನ್ನು 1923ರಲ್ಲಿ ಹೊರ ತಂದರು. ಮೂಲ ಹಸ್ತಪ್ರತಿಗಳ ಸ್ವರೂಪದ ಬಗೆಗೆ ಅವರ ಅಭಿಪ್ರಾಯಗಳು ಗಮನಾರ್ಹ; ಅವನ್ನು ಸಂಗ್ರಹಿಸಿ ಕೆಳಗೆ ಕೊಟ್ಟಿದೆ:

ಸರ್ವಜ್ಞನು ಜೀವಂತನಿರುವಾಗ ಬರೆಯಲ್ಪಟ್ಟ ಓಲೆಯ ಪ್ರತಿಗಳು ದೊರೆತಿಲ್ಲ. ಇದುವರೆಗೂ ಲಿಖಿತವಾದ ಸರ್ವಜ್ಞನ ಕೈಬರಹದ ಪ್ರತಿಗಳನ್ನು ಮೂಲ ಸಂಗ್ರಹ ಗಳೆಂತಲೂ ನೂತನ ಸಂಗ್ರಹಗಳೆಂತಲೂ ಎರಡು ಭಾಗಗಳಾಗಿ ವಿಭಾಗಿಸಬಹುದು. ಮೊದಲನೆಯ ತರದ ಪ್ರತಿಗಳು ಅಲ್ಲಲ್ಲಿ ವ್ಯತ್ಯಾಸವುಳ್ಳವುಗಳಾಗಿದ್ದರೂ ಬಹುಶಃ ಎಲ್ಲಾ ಪದ್ಯಗಳೂ ಒಂದೇ ಕ್ರಮವನ್ನನುಸರಿಸಿ ಬರೆಯಲ್ಪಟ್ಟಿರುವುದರಿಂದ ಒಂದ ನ್ನೊಂದು ಹೋಲುತ್ತಿರುವುವು. ಆದರೆ ಎರಡನೆಯ ತರದ ಪ್ರತಿಗಳು ಹಾಗಲ್ಲ. ಇವು ಸ್ವತಂತ್ರ ಕ್ರಮದಿಂದ ಬರೆಯಲ್ಪಟ್ಟದ್ದು ಪ್ರತಿ ಒಂದರಲ್ಲಿಯೂ ಹೊಸ ಪದ್ಯ ಗಳು ದೊರೆಯುತ್ತಾ ಹೋಗುವುವು. ಇದರಿಂದ ಸರ್ವಜ್ಞನು ಕಾಲವಾದ ಕೆಲವು ವರ್ಷಗಳಲ್ಲಿ ಆಗ್ಗೆ ರೂಢಿಯಲ್ಲಿದ್ದ ಪದ್ಯಗಳ ಹೊರ್ತು ಅನೇಕ ಹೊಸ ಪದ್ಯಗಳುಂಟಾ ದವೆಂದೂ ಇವುಗಳನ್ನು ಸಂಗ್ರಹಿಸುವ ಅವಶ್ಯತೆಯು ಬಿದ್ದು ಆರಂಭದಿಂದಲೇ ಸರ್ವಜ್ಞನ ಪದ್ಯಸಂಗ್ರಹವಲ್ಲಿ ಎರಡು ತರದ ಆವೃತ್ತಿಗಳು ಉದ್ಭವವಾದವೆಂದೂ ತಿಳಿದುಬರುತ್ತದೆ. ನಮಗೆ ದೊರೆತ ಮೈಸೂರು, ಮದ್ರಾಸ್ ಪ್ರಾಚ್ಯ ಕೋಶಾಲಯ ಗಳ ಪ್ರತಿಗಳಲ್ಲಿಯೂ ಇದೇ ತರದ ಭೇದವು ಒಡೆದು ಕಾಣುತ್ತದೆ. ಬಹುಶಃ ಈಗ ಅಚ್ಚಾದ ಗ್ರಂಥಗಳೆಲ್ಲ ಈ ಎರಡು ತರದ ಕೈಬರಹದ ಪ್ರತಿಗಳ ಮಿಶ್ರಮುದ್ರಣ ಗಳಿರುವವಷ್ಟೆ.

ಇವನ ಹಸ್ತಲಿಖಿತಗಳಲ್ಲಿ ಹಳಗನ್ನಡ 'ಱ' ಎಂಬ ಅಕ್ಷರವು ಆಗಾಗ್ಗೆ ದೊರೆಯುವುದರಿಂದ ಅವನ ಕಾಲವನ್ನು ತಿಳಿಯುವದಕ್ಕೆ ಸಹಾಯವಾಗುವದು. ಕನ್ನಡದ ಹಳೇ ಬರಹ ಪದ್ಧತಿಯಂತೆ ಇವನ ಪ್ರತಿಗಳಲ್ಲಿ ಸೊನ್ನೆಯ ಬದಲಾಗಿ ಆಯಾ ವರ್ಗದ ಅನುನಾಸಿಕಗಳು ಬರುವುವಲ್ಲದೆ ಅ, ಆ ಎಂಬ ಸ್ವರಗಳನ್ನು ಬಿಟ್ಟು ಉಳಿದ ಎಲ್ಲ ಸ್ವರಗಳು ವ್ಯಂಜನಗಳಿಂದಲೇ ಬರೆಯಲ್ಪಟ್ಟಿವೆ.

ಮುದ್ರಣ ಪ್ರತಿಗಳ ವಿಚಾರ: ಸರ್ವಜ್ಞನ ಪದ್ಯಗಳ ಮೊದಲ ಮುದ್ರಣ ವಾದದ್ದು 1866ರಲ್ಲಿ. ಧಾರವಾಡದ ಹುಚ್ಚಯ್ಯ ಹೊನ್ನಾಪುರಮಠ ಇವರಿಂದ.

ಶಿಲಾಮುದ್ರಣದ ಇದರಲ್ಲಿ 225 ಪದ್ಯಗಳು ಇವೆ. 1867ರಲ್ಲಿ ಬೆಂಗಳೂರಿನ ವೆಸ್ಲಿಯನ್ ಮಿಷನ್ನಿನವರು 105 ಪದ್ಯಗಳನ್ನು ಮುದ್ರಿಸಿರುವರು. 1920ರಲ್ಲಿ ಬೆಂಗಳೂರು ಪ್ರಿಂಟಿಂಗ್ ಪಬ್ಲಿಷಿಂಗ್ ಹೌಸಿನವರು 'ನೀತಿಸಾರ' ಎಂಬ ಹೆಸರಿನಿಂದ ಒಂದು ಮುದ್ರಣ ಹೊರತಂದಿದ್ದರು.[1] ಈ ಎಲ್ಲಾ ಮುದ್ರಣಗಳೂ ತುಂಬಾ ದೋಷಪೂರ್ಣವಾಗಿವೆ. "ಸರ್ವಜ್ಞನ ಗ್ರಂಥವು ಗೋಡೆ ಬಿದ್ದು ಹೆಂಟೆಗಳು ಚೂರುಚೂರಾಗಿ ಒಡೆದುಹೋಗಿರುವ ಒಂದು ಹಾಳುಮನೆಗೆ ಸರಿಯಾಗಿದೆ ಎಂದು ಹೇಳಬೇಕು. ಇಂಥ ಸ್ಥಿತಿಯಲ್ಲಿ ವಚನಗಳ ಮೂಲವನ್ನು ಗೊತ್ತುಹಚ್ಚಿ ಅವುಗಳನ್ನು ಮುಂಚಿನ ಸ್ಥಿತಿಗೆ ತರುವಂಥದ್ದು ಕಷ್ಟಕರ. ಎಷ್ಟು ಶ್ರಮಿಸಿದರೂ ಕೆಲಸವು ಅತೃಪ್ತಿಕರ."

ಕೈಬರಹದ ಪ್ರತಿಗಳನ್ನು ಚೆನ್ನಾಗಿ ಶೋಧಿಸದೆಹೋದರೆ ಬರಹದ ದೋಷದಿಂದ ತಪ್ಪುಗಳು ಹೇಗೆ ಒಳನುಗ್ಗುವವೆಂದೂ ಕೇವಲ ಕಲ್ಪನೆಯಿಂದ ತಿದ್ದಲು ಯತ್ನಿಸಿದರೆ ಪದ್ಯಗಳು ಹೇಗೆ ಕೆಡುವವೆಂದೂ ತೋರಿಸುವುದಕ್ಕಾಗಿ ಉತ್ತಂಗಿಯವರು ಕೆಲವು ಉದಾಹರಣೆಗಳನ್ನು ಕೊಟ್ಟಿದ್ದಾರೆ:

ಬಳ್ಳಾರಿ ಗ್ರಂಥ:	ಬೆಂಗಳೂರು ನೀತಿಸಾರ:
ಅಂದಿನಾ ಪುಷ್ಪದತ್ತ ಒಂದೇ ವರುಷಿಯಾಗಿ ಮುಂದೇವ ಸಾಲೆ ಸರ್ವಜ್ಞನೆಂದೆನಿಸಿ ನಿಂದವನು ನಾನೆ ಸರ್ವಜ್ಞ	ಅಂದಿನ ಪುಷ್ಪದತ್ತ ಮುಂದೆ ವರುಷಿಯಾಗಿ ಸಂದೇಹವುಳಿದು ಸರ್ವಜ್ಞನೆಂದೆನಿಸಿ ನಿಂದವನು ನಾನೆ ಸರ್ವಜ್ಞ

ಇಲ್ಲಿ ಟೀಕಾಕಾರರು 'ಒಂದೇ ವರುಷಿಯಾಗಿ' ಎಂಬುದಕ್ಕೆ ಒಮ್ಮೆ ದೇವಸಭೆಯಲ್ಲಿ ಋಷಿಯಾಗಿದ್ದವನೆಂದು ಅರ್ಥಮಾಡಿದರೂ 'ಸಾಲೆ ಸರ್ವಜ್ಞ' ಎಂಬುದಕ್ಕೆ ಅರ್ಥಮಾಡದೆ ಹೋಗಿದ್ದಾರೆ. ಸಾಲೆ ಸರ್ವಜ್ಞನೆಂಬುದಕ್ಕೆ ಕಿಟೆಲ್ ಪಂಡಿತರು ಸಾಲೆಯಲ್ಲಿ ಕಲಿತವನೆಂದು ಅರ್ಥಮಾಡಿದ್ದಾರೆ. ಆದರೆ ಮೂಲಪ್ರತಿ ನೋಡಿದರೆ 'ಕುಂಬಾರ ಸಾಲೆ'ಯಲ್ಲಿ ಸರ್ವಜ್ಞನು ಬಾಲ್ಯವನ್ನು ಕಳೆದದ್ದರಿಂದ ಬಂದ ಹೆಸರೆಂದು ಸ್ಪಷ್ಟವಾಗುತ್ತದೆ. ಪದ್ಯದ ಮೂಲರೂಪ:

ಅಂದಿನ ಪುಷ್ಪದತ್ತ ಬಂದ ವರರುಚಿಯಾಗಿ
ಮುಂದವ ಸಾಲೆ ಸರ್ವಜ್ಞನೆಂದೆನಿಸಿ
ನಿಂದವನು ನಾನೆ ಸರ್ವಜ್ಞ

ಇಂತಹ ದೋಷಗಳು 500ಕ್ಕೂ ಮಿಗಿಲಾಗಿವೆ ಎಂದು ಉತ್ತಂಗಿ ತಿಳಿಸಿದ್ದಾರೆ.

---

1 ಜಿ. ಎ. ವಿರ್ತ್ ಎಂಬ ಜರ್ಮನ್ ಪಾದ್ರಿ 1868ರಲ್ಲಿ ಹಲವು ನೂರು ಪದ್ಯಗಳನ್ನು ತನ್ನ 'ಪ್ರಾಕ್ಕಾವ್ಯಮಾಲಿಕೆ'ಯಲ್ಲಿ ಪ್ರಕಟಿಸಿದನು. ಚನ್ನಪ್ಪ ಉತ್ತಂಗಿಯವರೇ ಹಲವು ಮುದ್ರಣಗಳನ್ನು ಹೊರತಂದಿದ್ದಾರೆ.

ಕಲ್ಪನೆಯಿಂದ ತಿದ್ದಿವರೆ ಪದ್ಯಗಳು ಹೇಗೆ ಕೆಟ್ಟುಹೋಗುತ್ತವೆ ಎಂಬುದಕ್ಕೆ:

ಮುದ್ರಣ ಗ್ರಂಥ:	ಮೂಲಪ್ರತಿ:
ಆನೆ ಮುಕುರದೊಳಡಗೆ ಭಾನುವೊಳು ಶಶಿಯಡಗ ಲೇನು ಮೊಣೆಯುವು ಜಗದೊಳಗೆ ಶಿವಯೋಗಿ ಮೌನದಿಂದಿರುವ ಸರ್ವಜ್ಞ	ಆನೆ ಮುಕುರದೊಳಡಗಿ ಭಾನು ಸರಸಿಯೊಳಡಗಿ ಆನೆನ್ನ ಗುರುವಿನೊಳಡಗಿ ಸಂಸಾರ ತಾನೆತ್ತಣದು ಸರ್ವಜ್ಞ
[ಆನೆಯು ಕನ್ನಡಿಯೊಳಗೆ, ಸೂರ್ಯನ ಬೆಳಕಿನಲ್ಲಿ ಚಂದ್ರನು ಅಡಗಲಾಗಿ ಜಗದೊಳಗೆ ಏನು ಶೂನ್ಯತೆಯುಂಟಾಗುವುದು?]	[ಆನೆಯು ಕನ್ನಡಿಯಲ್ಲಿಯೂ ಸೂರ್ಯನು ಸರೋವರದಲ್ಲಿಯೂ ಅಡಗಿರುವಂತೆ ನಾನು ನನ್ನ ಗುರುವಾದ ಪರಮಾತ್ಮನಲ್ಲಿ ಕೂಡಿಕೊಂಡಿರಲು ಸಂಸಾರವು ಹೇಗೆ ಅಂಟಿಕೊಳ್ಳುವುದು]

೩

ಸರ್ವಜ್ಞನ ತ್ರಿಪದಿಗಳ ಮೂಲಪಾಠದ ನಿಷ್ಕರ್ಷೆಯ ಸಂಬಂಧವಾಗಿ ಇಂಥ ಹಲವಾರು ಸಮಸ್ಯೆಗಳು ಪರಿಹಾರಕ್ಕಾಗಿ ಕಾದಿವೆ. ಸರ್ವಜ್ಞನ ತ್ರಿಪದಿಗಳ ಸಂಗ್ರಹ ಮತ್ತು ಸಂಪಾದನ ಕಾರ್ಯಗಳನ್ನು ಒಂದು ತಪಸ್ಸು ಎಂಬಂತೆ ಸಾಧಿಸಿ ಕೃತಕೃತ್ಯರಾದ ದಿ॥ರೆ॥ ಚನ್ನಪ್ಪ ಉತ್ತಂಗಿಯವರು ಸರ್ವಜ್ಞನ ಭಕ್ತರಾದರೂ ಸರ್ವಜ್ಞಾಂಕಿತ ಪದ್ಯಗಳೆಲ್ಲವೂ ಅವನವೆಂದು ನಂಬಿಲ್ಲ. ಸರ್ವಜ್ಞನ ಪದ್ಯಗಳನ್ನು ಅನುಸರಿಸಿರುವ ಅನ್ಯಕರ್ತೃಕ ಪದ್ಯಗಳು ಹೇರಳವಾಗಿ ಪ್ರಕ್ಷೇಪವಾಗಿವೆ ಎಂದು ಹೇಳಿ, ಸರ್ವಜ್ಞನವು ಯಾವುವು, ಯಾವುವು ಅಲ್ಲ, ಯಾವುವು ಸಂದೇಹಾಸ್ಪದ ಎಂಬುದನ್ನು ಮೊದಲೆರಡು ಮುದ್ರಣಗಳಲ್ಲಿ ಗುರುತಿಸುವ ಪ್ರಯತ್ನವನ್ನೂ ಮಾಡಿದ್ದಾರೆ ಅವರು. ಈ ದಿಕ್ಕಿನಲ್ಲಿ ಪುನಃಪರಿಶೀಲನೆಯ ಅಗತ್ಯವೂ ಇದೆ. ಅವರಾಗಲಿ, ಈಚೆಗೆ ಪ್ರಕಟವಾಗಿರುವ ಬೇರೆಬೇರೆ ಪರಿಷ್ಕೃತ ಮುದ್ರಣಗಳ ಸಂಪಾದಕರುಗಳಾಗಲಿ ಖಚಿತವೂ ಶಾಸ್ತ್ರೀಯವೂ ಆದ ಎಲ್ಲ ವಿಧಾನಗಳನ್ನೂ ಅನುಸರಿಸಿ ಮೂಲಪಾಠದ ನಿಷ್ಕರ್ಷೆಗೆ ಸರ್ವಪ್ರಯತ್ನ ಮಾಡಿದಂತೆ ಕಂಡುಬರುವುದಿಲ್ಲ; ಹಸ್ತಪ್ರತಿಗಳ ಪಾಠಾಂತರಗಳನ್ನು ಪರಿಶೀಲಿಸಿ, ತಮಗೆ ಸರಿಕಂಡ ಪಾಠವನ್ನು ಒಪ್ಪಿಕೊಂಡಂತೆ ತೋರುತ್ತದೆ. ಯಾವುದೇ ಒಂದು ಕವಿಕೃತಿಯ ಸಂಪಾದನಕಾರ್ಯದಲ್ಲಿ ದೊರೆತಷ್ಟು ಸಾಕ್ಷ್ಯಾಧಾರಗಳೆಲ್ಲವನ್ನೂ ಉಪಯೋಗಿಸಿಕೊಂಡಮೇಲೂ ಕವಿಪಾಠದ ನಿಷ್ಕರ್ಷೆ ಸಮರ್ಪಕವಾಗಿ ಆಗಿಲ್ಲ ಎಂಬ ಅನುಮಾನ ಉಳಿದಾಗ, ಸಂಪಾದಕ ತನ್ನ ಪ್ರತಿಭೆಯ ಬಲದಿಂದ ಕವಿಪಾಠವನ್ನು ಊಹಿಸಬೇಕಾದ ಸಾಹಸವನ್ನು ಕೈಗೊಳ್ಳಬೇಕಾಗುತ್ತದೆ; ಈ ಸಂದರ್ಭದಲ್ಲಿ ಕೂಡ ಅವನು ತನ್ನ ಇಚ್ಛಾನುಸಾರ ಪಾಠವನ್ನು ತಿದ್ದಹೋಗದೆ, ಶಾಸ್ತ್ರಸಿದ್ಧವಾದ ನಿಯಮಗಳನ್ನು ಅನುಸರಿಸಿಯೋ, ಇಲ್ಲವೆ ಶಾಸ್ತ್ರೀಯವೆನ್ನಬಹುದಾದ ಹೊಸ ನಿಯಮವನ್ನು ಕಲ್ಪಿಸಿಕೊಂಡೋ ಪರಿಷ್ಕರಣಕಾರ್ಯವನ್ನು ಮಾಡಬೇಕಾಗುತ್ತದೆ. ಸರ್ವಜ್ಞನ ತ್ರಿಪದಿಗಳ ವಿಷಯದಲ್ಲಿ ಇಂಥ ಕಾರ್ಯ ಆಗಬೇಕಾಗಿದೆ.

೪

ಸರ್ವಜ್ಞನ ತ್ರಿಪದಿಗಳ ಅಂಕಿತದ ಸಂಬಂಧವಾಗಿಯೇ ಎರಡು ಪಾಠಸಂಪ್ರದಾಯಗಳಿವೆ. ಒಂದರ ಪ್ರಕಾರ 'ಸರ್ವಜ್ಞ' ಎಂಬುದು ಅಂಕಿತ; ಇನ್ನೊಂದರ ಪ್ರಕಾರ 'ಪರಮಾರ್ಥ'. ಈಚೆಗೆ (1972ರಲ್ಲಿ) ಡಾ|| ಎಲ್.ಬಸವರಾಜು ಅವರು ಅತ್ಯಂತ ಪ್ರಾಚೀನವಾದ ಒಂದು ಓಲೆಗರಿಯ ಹಸ್ತಪ್ರತಿಯ ಆಧಾರದ ಮೇಲೆ 'ಪರಮಾರ್ಥ' ಎಂಬ ಅಂಕಿತವನ್ನೇ ಸ್ವೀಕರಿಸಿ, ತಮ್ಮ ಪರಿಷ್ಕೃತ ಮುದ್ರಣವನ್ನು 'ಪರಮಾರ್ಥ' ಎಂದೇ ಹೆಸರಿಸಿದ್ದಾರೆ.[2] ಆದರೆ 'ಪರಮಾರ್ಥ'ದ ಹಸ್ತಪ್ರತಿಯನ್ನು ಬಿಟ್ಟು ಉಳಿದ ಎಲ್ಲ ಹಸ್ತಪ್ರತಿಗಳಲ್ಲಿ "ಸರ್ವಜ್ಞ" ಎಂಬ ಅಂಕಿತವಿರುವುದು ನಮಗೆ ತಿಳಿದುಬಂದಿರುವ ಸಂಗತಿ. ಈ 'ಬಹುಸಂಖ್ಯೆ' ಇಂದಿನ ಪ್ರಜಾಪ್ರಭುತ್ವದ ರಾಜಕೀಯದಲ್ಲಿ ನಿರ್ಣಾಯಕಪಾತ್ರವನ್ನು ವಹಿಸಬಹುದೇ ಹೊರತು ಗ್ರಂಥ ಸಂಪಾದನೆಯಂಥ ಶಾಸ್ತ್ರಪ್ರಪಂಚದಲ್ಲಿ ಅಲ್ಲ. ಒಂದೇ ಒಂದು ಹಸ್ತಪ್ರತಿ ಕವಿ ಪಾಠವನ್ನು ಉಳಿಸಿಕೊಂಡು, ಇತರ ಹಲವು ಹಸ್ತಪ್ರತಿಗಳು ಅಪಪಾಠವನ್ನೇ ಮುಂದುವರಿಸಿಕೊಂಡು ಬಂದಿರುವ ಸಾಧ್ಯತೆ ಉಂಟು. ಹೀಗಿರುವಲ್ಲಿ, ಯಾವ ಅಂಕಿತ ಸರಿ ಎಂದು ನಿರ್ಣಯಿಸುವಾಗ ವಿಚಾರದ ಒರೆಗಲ್ಲನ್ನು ಉಪಯೋಗಿಸಬೇಕು.

ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ವಚನಕಾರರೂ ಹರಿದಾಸರೂ ಬಳಸಿರುವ ಅಂಕಿತಗಳನ್ನು ಪರಿಶೀಲಿಸಿದರೆ ಅಂಕಿತ ಸಾಧಾರಣವಾಗಿ ಕೃತಿಕಾರನ ಇಷ್ಟದೈವದ ಹೆಸರಾಗಿರುವುದು ಕಂಡುಬರುತ್ತದೆ. 'ಪರಮಾರ್ಥ' ಎಂದರೆ ಪರಮಪುರುಷಾರ್ಥವಾದ 'ಮೋಕ್ಷ' ಎಂದು ಅರ್ಥವಾದೀತೇ ಹೊರತು ಯಾವ ದೈವದ ನಾಮಾಂತರವೂ ಆಗದು. ಕೆಲವು ಹಸ್ತಪ್ರತಿಗಳಲ್ಲಿ 'ಪರಮಾರ್ಥ' ಎಂಬ ಅಂಕಿತ ಏಕೆ ಪ್ರಯೋಗವಾಗಿದೆ ಎಂಬುದನ್ನು ಪರಿಶೋಧಿಸಿ ತಿಳಿಯಬೇಕಾಗಿದೆ.[3] 'ಪರಮಾರ್ಥ' ಎಂಬ ಪಾಠವನ್ನು ಆರ್. ನರಸಿಂಹಾಚಾರ್ಯರೇ ಗಮನಿಸಿ, "ನಮಗೆ ದೊರೆತ ಒಂದು

---

2 ಎಲ್ಲ ಹಸ್ತಪ್ರತಿಗಳ, ಕೆಲವು ಮುದ್ರಿತ ಪ್ರತಿಗಳ, ಪಾಠಾಂತರಗಳನ್ನೂ ಒಳಗೊಂಡಂತೆ 1980ರಲ್ಲಿ ಪ್ರಕಟವಾಗಿರುವ 'ಪರಮಾರ್ಥ' ಸಂಶೋಧಕರಿಗೆ ತುಂಬ ಉಪಯುಕ್ತವಾದ ಮುದ್ರಣ.

3 "ಪರಮಾರ್ಥ" ಪಾಠಸಂಪ್ರದಾಯಕ್ಕೆ ಮೂಲವಾದ ಮಾತೃಕೆಯಲ್ಲಿ ಉದ್ದಕ್ಕೂ 'ಪರಮಾತ್ಮ' ಎಂಬುದು ಲಿಪಿಕಾರನ ಬರಹದಲ್ಲಿ 'ಪರಮಾರ್ತ' ಎಂಬ ಭ್ರಮೆಗೆ ಕಾರಣವಾಗುವಂತೆ ಲಿಖಿತವಾಗಿದ್ದು, ತರುವಾಯದ ಸಂಪ್ರತಿಕಾರರು ಹಾಗೆಯೇ ಭ್ರಮಿಸಿ, ಅಲ್ಪಪ್ರಾಣ 'ತ' ಕಾರವನ್ನು ಮಹಾಪ್ರಾಣವಾಗಿಸಿ, 'ಪರಮಾರ್ಥ' ಎಂದು ತಿದ್ದಿರಬಹುದು. ಈ ಸಂದರ್ಭದಲ್ಲಿ "ಸರ್ವಜ್ಞ" ಪದದಂತೆ "ಪರಮಾತ್ಮ"ವೂ ದೇವರ ವಿಶೇಷಣವಾಗುತ್ತದೆ. ಸರ್ವಜ್ಞನು ತನ್ನ ಇಷ್ಟಾನುಸಾರ ಎರಡು ಪದಗಳನ್ನೂ ಪ್ರಯೋಗಿಸಿರಬಹುದು. ಏಕರೂಪತೆಯ ದೃಷ್ಟಿಯಿಂದ ಸಂಪ್ರತಿಕಾರರು ಒಂದನ್ನು ಇಷ್ಟಾನುಸಾರ ಸ್ವೀಕರಿಸಿ, ಎರಡು ಪಾಠಸಂಪ್ರದಾಯಗಳಿಗೆ ಕಾರಣವಾಗಿರಬಹುದು.

ಓಲೆಯ ಪ್ರತಿಯಲ್ಲಿ ಪ್ರತಿಪದ್ಯವೂ ಪರಮಾರ್ಥ ಎಂದು ಮುಗಿವುದಲ್ಲದೆ ಗ್ರಂಥಕ್ಕೆ 'ಪರಮಾರ್ಥಿಕೆ' ಎಂಬ ಹೆಸರೂ ಹೇಳಿದೆ" ಎಂದಿದ್ದಾರೆ. (ಕರ್ಣಾಟಕ ಕವಿಚರಿತೆ, ಸಂಪುಟ ೨, ಕ.ಸಾ.ಪರಿಷತ್ತಿನ ತಿದ್ದಿದ ಮುದ್ರಣ, 1973 ; ಪು. ೪೯೯). ಚನ್ನಪ್ಪ ಉತ್ತಂಗಿಯವರ ಜನಪದಾವೃತ್ತಿಯ ಮುದ್ರಣದಲ್ಲೂ "ಪರಮಾರ್ಥ" ಅಂಕಿತವುಳ್ಳ ಕೆಲವು ಪದ್ಯಗಳಿವೆ (೪೦೬–೪೧೧).[4] "ಪರಮಾರ್ಥ" ಯಾವ ದೈವದ ಅಂಕಿತವೂ ಅಲ್ಲ. "ಸರ್ವಜ್ಞ" (omniscient) ಭಗವಂತ ಅಥವಾ ಪರಮಾತ್ಮನಿಗೆ ಮಾತ್ರ ಸಲ್ಲುವ ವಿಶೇಷಣ. ಆದ್ದರಿಂದ, ವಚನಕಾರರ ಮೇಲ್ಪಂಕ್ತಿಯನ್ನು ಅನುಸರಿಸಿ ಸರ್ವಜ್ಞನು ಪದ್ಯಗಳ ಕೊನೆಯಲ್ಲಿ ಪರಮಾತ್ಮನ ವಿಶೇಷಣವಾದ "ಸರ್ವಜ್ಞ" ಪದವನ್ನೇ ತನ್ನ ಕೃತಿಮುದ್ರಿಕೆಯಾಗಿ ಇಟ್ಟುಕೊಂಡಿದ್ದಾನೆ ಎಂದು ತಿಳಿಯುವುದು ಸಾಧು. ಸ್ವವಿಚಾರವನ್ನು ತಿಳಿಸುವ ಪದ್ಯಗಳಲ್ಲಿ ಕವಿ ಹೇಗೆ ಸರ್ವಜ್ಞನೆನಿಸಿದನು ಎಂಬುವರ ವಿವರಣೆಯಿದೆ. "ಸರ್ವಜ್ಞನೆಂಬುವನು ಗರ್ವದಿಂದಾದವನೆ? ಸರ್ವರೊಳು ಒಂದೊಂದು ನುಡಿಗಲಿತು ಪರ್ವತವೆ ಆದವನು" ಎಂಬ ಅವನ ಮಾತಿನಲ್ಲಿ ಹೆಸರಿನ ಸೂಚನೆ ಸ್ಪಷ್ಟವಾಗಿದೆ. ಸರ್ವಜ್ಞನ ಮುಂಚಿನ ಹೆಸರು ಯಾವುದು ಎಂಬುದು ಖಚಿತವಾಗಿ ತಿಳಿದುಬಂದಿಲ್ಲ. ಎ.ಆರ್.ಕೃ. ಹೇಳುವಂತೆ "ತಾಯಿತಂದೆಗಳು ಹುಟ್ಟಿದ ಮಗುವಿಗೆ ಎಲ್ಲಿಯೂ ಈ ಹೆಸರನ್ನು ಇಟ್ಟಿರುವುದು ತಿಳಿದುಬಂದಿಲ್ಲ. ಸರ್ವಜ್ಞ, ಸುಗತ ಮುಂತಾದ ಹೆಸರುಗಳು ಬುದ್ಧನಿಗೆ ಉಂಟು ; ಆದರೆ ಅವು ಅವನಿಗೆ ಅವನ ತಾಯಿ ತಂದೆಗಳು ಇಟ್ಟ ಹೆಸರಲ್ಲ." ('ಸರ್ವಜ್ಞ ಕವಿ', ಪು. 6). (ಜನ್ಮವೃತ್ತಾಂತ ಪ್ರಕರಣ ದಲ್ಲಿ ಈ ಬಗ್ಗೆ ವಿಚಾರ ಮಾಡಿದೆ.) ಅವನ ಪ್ರಸಿದ್ಧವಾದ ಹೆಸರು ಸರ್ವಜ್ಞ ಎಂದಿರುವುದರಿಂದಲೂ,

ಒಬ್ಬನಲ್ಲದೆ ಜಗಕೆ ಇಬ್ಬರುಂಟೇ ಮತ್ತೆ
ಒಬ್ಬ ಸರ್ವಜ್ಞ ಕರ್ತನು–ಜಗಕೆಲ್ಲ
ಒಬ್ಬನೇ ದೈವ ಸರ್ವಜ್ಞ

ಎಂದು ದೈವವನ್ನು "ಸರ್ವಜ್ಞ" ಎಂದು ನಿರ್ದೇಶಿಸಿರುವುದರಿಂದಲೂ ಒಂದು ವೇಳೆ ಕೆಲವೊಮ್ಮೆ ಸರ್ವಜ್ಞನು ತನ್ನ ಪದ್ಯಗಳನ್ನು 'ಪರಮಾರ್ಥ' (ಅಥವಾ 'ಪರಮಾತ್ಮ') ನಾಮಾಂಕಿತದಿಂದ ಹೇಳಿದ್ದರೂ ಕೂಡ 'ಸರ್ವಜ್ಞ' ಎಂಬ ನಾಮಾಂಕಿತವನ್ನೇ ಅವನ ಪದ್ಯಗಳ ನಾಮಾಂಕಿತ ಎಂದು ಸ್ವೀಕರಿಸುವುದು ಹೆಚ್ಚು ಸಮರ್ಥನೀಯವಾಗಿದೆ. ಕೆಲವರು ಊಹಿಸುವಂತೆ, 'ಸರ್ವಜ್ಞ' ಅವನ ಬಿರುದಂತೂ ಖಂಡಿತ ಅಲ್ಲ.

ಡಾ|| ಬಸವರಾಜು ಅವರು 'ಪರಮಾರ್ಥ' ಅಂಕಿತವನ್ನು ಸಮರ್ಥಿಸುವ ಸಂಬಂಧದಲ್ಲಿ "'ಸರ್ವಜ್ಞ' ಎಂಬುದು ತ್ರಿಪದಿಯ ಕೊನೆಯ ಗಣಸ್ಥಾನದಲ್ಲಿ ಛಂದಸ್ಸಿನ

---

4 'ಪರಮಾರ್ಥ' ಹಸ್ತಪ್ರತಿ ಒಂದನ್ನು ಉತ್ತಂಗಿಯವರೂ ನೋಡಿದ್ದಾರೆ. ಆದರಿಂದ ಈ ಪದ್ಯಗಳನ್ನು ಸ್ವೀಕರಿಸಬಹುದು.

ದೃಷ್ಟಿಯಿಂದ ("ಸರುವಜ್ಞ" ಎಂದಾದ ಹೊರತು) ಹೊಂದುವುದಿಲ್ಲವೆಂಬುದನ್ನು ವಿದ್ವಾಂಸರು ಗಮನಿಸಿದಂತಿಲ್ಲ" ಎಂದು ಹೇಳಿ, ತಾವು ಗುರುತಿಸಿದ ಛಂದಸ್ಸಿನ ಒಗೆಗೆ ನಮ್ಮ ಗಮನ ಸೆಳೆದಿದ್ದಾರೆ. ಪರಮಾರ್ಥ (∪ ∪ – ∪), ಸರ್ವಜ್ಞ (– – ∪), ಇನೆರಡೂ ಅಂಕಿತಗಳು ಪಂಚಮಾತ್ರಾಗಣಗಳೂ ಆಗಬಲ್ಲವು, ಮೂರು ಅಂಶಗಳ ವಿಷ್ಣುಗಣಗಳೂ ಆಗಬಲ್ಲವು. 'ಸರ್ವಜ್ಞ', 'ಸರುವಜ್ಞ' (∪ ∪ – ∪) ಎರಡರ ಛಂದಃಪ್ರಮಾಣವೂ ಒಂದೇ ಅಲ್ಲವೆ? 'ಸರ್ವಜ್ಞ' ಛಂದಸ್ಸಿಗೆ ಕೂಡಿಬರುವುದಿಲ್ಲ ಎಂದು ಅವರು ಏಕೆ ಹೇಳಿದರೋ ನಮಗೆ ಅರ್ಥವಾಗುವುದಿಲ್ಲ.

೫

ಸರ್ವಜ್ಞವಚನಗಳ ಮೂಲಪಾಠವನ್ನು ನಿಷ್ಕರ್ಷೆಮಾಡುವಲ್ಲಿ ಲಿಖಿತ ಕವಿಕೃತಿಗಳ ವಿಷಯದಲ್ಲಿ ಅನ್ವಯಿಸುವ ಗ್ರಂಥಸಂಪಾದನಶಾಸ್ತ್ರದ ನಿಯಮಗಳನ್ನು ಸಂಪೂರ್ಣವಾಗಿ ಅನ್ವಯಿಸುವುದು ಕಷ್ಟವೆಂದು ತೋರುತ್ತದೆ. ಕೃತಿ ಪದ್ಯಕಾವ್ಯವಾಗಿದ್ದರೆ, ನಿರ್ದಿಷ್ಟ ಪದ್ಯದ ಒಂದು ಸಂದರ್ಭದಲ್ಲಿ ಉಪಲಬ್ಧವಾಗಿರುವ ಎಲ್ಲ ಪಾಠಾಂತರಗಳಲ್ಲಿಯೂ ಛಂದೋದೋಷ ಕಂಡುಬಂದರೆ, ಆ ಪದ್ಯದ ಛಂದಸ್ಸನ್ನು ಸರಿಪಡಿಸುವುದರಿಂದ ಕವಿಪಾಠ ದೊರಕುವ ಸಾಧ್ಯತೆಯಿದೆ. ಸರ್ವಜ್ಞನ ತ್ರಿಪದಿಗಳನ್ನು ಪರಿಷ್ಕರಿಸುವ ಸಂದರ್ಭದಲ್ಲಿ ಅವನು ಬಳಸಿರುವ ಛಂದಸ್ಸನ್ನು ಆಧಾರವಾಗಿಟ್ಟುಕೊಂಡು ಪರಿಷ್ಕಾರ ಮಾಡಬೇಕಾದ ಅಗತ್ಯ ಬಹಳವಾಗಿದೆ. ಸರ್ವಜ್ಞನ ಪದ್ಯಗಳ ಛಂದಸ್ಸಿನ ವಿಷಯದಲ್ಲಿ ಭಿನ್ನಾಭಿಪ್ರಾಯವೂ ಇದೆ.

ನಾಗವರ್ಮನ ಛಂದೋಂಬುಧಿ, ಜಯಕೀರ್ತಿಯ ಛಂದೋನುಶಾಸನ, ಮುಂತಾದ ಪ್ರಾಚೀನ ಕನ್ನಡ ಮತ್ತು ಸಂಸ್ಕೃತ ಲಕ್ಷಣ ಗ್ರಂಥಗಳಿಂದಲೂ ಪ್ರಾಚೀನ ಶಾಸನಗಳಲ್ಲಿ ದೊರಕುವ ತ್ರಿಪದಿಗಳಿಂದಲೂ ಪಂಪ ಮೊದಲ್ಗೊಂಡು ಷಡಕ್ಷರದೇವನವರೆಗಿನ ಕಾವ್ಯಗಳಲ್ಲಿಯ ತ್ರಿಪದಿಗಳಿಂದಲೂ ಇಂದಿಗೂ ಜನತೆಯ ಬಾಯಲ್ಲಿ ಜೀವಂತವಾಗಿರುವ ತ್ರಿಪದಿಗಳಿಂದಲೂ ತ್ರಿಪದಿಯ ಛಂದಸ್ಸು (ತ್ರಿಮೂರ್ತಿ) ದೇವಗಣಾತ್ಮಕ (ಅಥವಾ ಈಗ ಕರೆಯುವಂತೆ ಅಂಶಗಣಾತ್ಮಕ) ಎಂಬುದು ಸ್ಪಷ್ಟ. ಮೂಲ ಷಟ್ಪದಿಯೂ ಅಂಶಗಣಾತ್ಮಕವಾಗಿದ್ದು ಕಾಲಕ್ರಮದಲ್ಲಿ ಮಾತ್ರಾಗಣಾತ್ಮಕವಾಗಿ ಪರಿಣಮಿಸಿದ್ದು ಕನ್ನಡ ಛಂದಸ್ಸಿನ ಚರಿತ್ರೆಯನ್ನು ಅರಿತವರಿಗೆ ಗೊತ್ತಿರುವ ವಿಷಯ. ಅದೇ ರೀತಿಯಲ್ಲಿ, ಅಂಶಲಯದ ತ್ರಿಪದಿ ಮಾತ್ರಾಲಯಕ್ಕೆ ತಿರುಗಿರುವುದಕ್ಕೆ ಕನ್ನಡ ಕಾವ್ಯಪ್ರಪಂಚದಲ್ಲಿ ಸಾಕಷ್ಟು ನಿದರ್ಶನಗಳು ದೊರಕುತ್ತವೆ. ಈ ಬೆಳವಣಿಗೆ ವಚನಕಾರರ ಕಾಲದಲ್ಲಿಯೆ (ಎಂದರೆ ೧೨ನೆಯ ಶತಮಾನದಲ್ಲಿ) ಪ್ರಾರಂಭವಾಯಿತು. ಇದಕ್ಕೆ ಮುಖ್ಯ ಕಾರಣ, ಅಕ್ಕರ ತ್ರಿಪದಿ ಸಾಂಗತ್ಯ ಮುಂತಾದ ಅಚ್ಚ ಕನ್ನಡ ಪಟ್ಟುಗಳಲ್ಲಿ ಬ್ರಹ್ಮ ವಿಷ್ಣು ರುದ್ರ ಎಂಬ ತ್ರಿಮೂರ್ತಿಗಣಗಳ ಪೈಕಿ ಮೂರು ಅಂಶಗಳ ವಿಷ್ಣುಗಣಕ್ಕಿರುವ ಸಾರ್ವಪ್ರಾಧಾನ್ಯ; ಹಾಗೂ ವಿಷ್ಣುಗಣ ವಿನ್ಯಾಸವಲ್ಲಿ

ಪಂಚಮಾತ್ರಾಗಣಗಳ ಪ್ರಾಮುಖ್ಯ. ವಿಷ್ಣುಗಣದ ಎಂಟು ಬಗೆಯ ಪ್ರಸ್ತಾರಗಳಲ್ಲಿ ಎರಡು ಷಣ್ಮಾತ್ರಾಪ್ರಸ್ತಾರ, ನಾಲ್ಕು ಪಂಚಮಾತ್ರಾಪ್ರಸ್ತಾರ, ಎರಡು ಚತುರ್ಮಾತ್ರಾಪ್ರಸ್ತಾರ ಕಂಡುಬರುತ್ತವೆ. ಹೀಗಿರುವುದರಿಂದ, ಅಂಶಗಣಾತ್ಮಕವಾದ ಯಾವುದೇ ಪದ್ಯರಚನೆಯಲ್ಲಿ ಪಂಚಮಾತ್ರಾಗಣಗಳ ಪ್ರಾಚುರ್ಯವಿರುವುದು ಸಹಜ. ಸರ್ವಜ್ಞನ ತ್ರಿಪದಿಗಳಲ್ಲೂ ಈ ಲಕ್ಷಣವಿರುವುದು ಕೇವಲ ಸಹಜ. ಅಂಶಲಯದ ರಹಸ್ಯವನ್ನರಿಯದ ಪ್ರಾಚೀನ ಸಂಪ್ರತಿಕಾರರೇ ಸರ್ವಜ್ಞನ ತ್ರಿಪದಿಗಳಲ್ಲಿ ಚತುರ್ಮಾತ್ರಾಗಣಗಳು ಕಂಡುಬಂದಲ್ಲೆಲ್ಲಾ ಪ್ರಾಯಶಃ ಅವನ್ನು ಪಂಚಮಾತ್ರಾಗಣಗಳಾಗಿ ಮಾರ್ಪಡಿಸುವ ಪ್ರಯತ್ನ ಮಾಡಿದ್ದಾರೆ; ಇದರಿಂದಾಗಿ, ಸರ್ವಜ್ಞನ ತ್ರಿಪದಿಗಳನ್ನು ಮೊದಲ ಬಾರಿಗೆ ಒತ್ತಟ್ಟಿಗೆ ಕಲೆಹಾಕಿ ಪ್ರಕಟಿಸಿದ ಚನ್ನಪ್ಪ ಉತ್ತಂಗಿಯವರು ಅವು ಪಂಚಮಾತ್ರಾಗಣಘಟಿತ ಎಂಬ ಭ್ರಮೆಗೆ ಒಳಗಾಗಿ, ಅವನ್ನು ಸಂಪೂರ್ಣವಾಗಿ ಪಂಚಮಾತ್ರಾಗಣಾತ್ಮಕವಾಗಿ ಮಾಡಿಬಿಟ್ಟಂತೆ ತೋರುತ್ತದೆ. ಅವರು ತಮ್ಮ ಪ್ರಸ್ತಾವನೆಯಲ್ಲಿ ಸರ್ವಜ್ಞನ ತ್ರಿಪದಿಗಳ ಛಂದಸ್ಸನ್ನು ಪಂಚಮಾತ್ರಾಗಣಾತ್ಮಕವಾಗಿಯೇ ಲಕ್ಷಣಿಸಿದ್ದಾರೆ. ಬಹುಶಃ ಇದನ್ನು ಗಮನಿಸಿ, ದ್ರಾವಿಡ ಛಂದಸ್ಸಿನ ರಹಸ್ಯವನ್ನು ಕರತಲಾಮಲಕ ಮಾಡಿಕೊಂಡ, ಷಟ್ಪದಿಗಳಲ್ಲಿಯೂ ಅಂಶಲಯದ ನಡೆಯನ್ನು ಗುರುತಿಸಬಹುದು ಎಂದ ಬಿ.ಎಂ.ಶ್ರೀ.ಯವರು ಕೂಡ ಸರ್ವಜ್ಞನ ತ್ರಿಪದಿಗಳನ್ನು ಪಂಚಮಾತ್ರಾಗಣಾತ್ಮಕ ಎಂದೇ ಅಂಗೀಕರಿಸಿಬಿಟ್ಟದ್ದು ಅತ್ಯಂತ ಸೋಜಿಗವಾಗಿದೆ. ಚನ್ನಪ್ಪ ಉತ್ತಂಗಿಯವರು ಹೊರತಂದ ಸರ್ವಜ್ಞವಚನಗಳ ಜನಪದಾವೃತ್ತಿಗೆ ಮುನ್ನುಡಿ ಬರೆದಿರುವ ಪಂಡಿತ ಶಿವಮೂರ್ತಿಶಾಸ್ತ್ರಿಗಳೂ ಇವರನ್ನೇ ಅನುಸರಿಸಿದ್ದಾರೆ. ಕನ್ನಡ ಛಂದಸ್ಸನ್ನು ಆಳವಾಗಿ ಅಭ್ಯಾಸ ಮಾಡಿರುವ ಡಾ|| ಟಿ.ವಿ. ವೆಂಕಟಾಚಲಶಾಸ್ತ್ರಿಯವರು, "ಸರ್ವಜ್ಞನ ತ್ರಿಪದಿಗಳು ಪ್ರಾಚೀನವಾದವು,........ ಅಂಶಲಯದಲ್ಲಿದ್ದವು, ಕೆಲವನ್ನು ಮಾತ್ರಾಲಯಕ್ಕೆ ತಿರುಗಿಸಲು ಪ್ರಯತ್ನಿಸಿದಂತೆ ಕಾಣುತ್ತದೆ ಎಂದು ಸದ್ಯಕ್ಕೆ ಭಾವಿಸಬಹುದು"[4a] ಎಂಬ ಸರಿಯಾದ ಅಭಿಪ್ರಾಯವನ್ನೇ ತಳೆದಿದ್ದರೂ, "ಸರ್ವಜ್ಞನ ತ್ರಿಪದಿಗಳ ಶುದ್ಧಪಾಠ ನಿರ್ಣಯವಾದರೆ ಅವುಗಳ ಛಂದಸ್ಸಿನ ವಿಷಯದಲ್ಲೂ ಒಂದು ನಿರ್ಣಯ ಸಾಧ್ಯವಾಗಬಹುದೆಂದು ತೋರುತ್ತದೆ" ಎಂದು ಹೇಳಿರುವುದು ವಿಚಾರಣೀಯವಾಗಿ ಕಾಣುತ್ತದೆ. ಸರ್ವಜ್ಞನ ತ್ರಿಪದಿಗಳ ಶುದ್ಧಪಾಠನಿರ್ಣಯಕ್ಕೆ ಅವು ಅಂಶಲಯದಲ್ಲಿವೆ ಎಂಬ ತಿಳಿವಳಿಕೆ ಒಂದು ಮುಖ್ಯ ಸಾಧನ ಎಂದು ನನ್ನ ಖಚಿತವಾದ ನಂಬಿಕೆ. ಸರ್ವಜ್ಞನ ತ್ರಿಪದಿಗಳು ಅಂಶಗಣಾತ್ಮಕ ಎಂಬ ಮಾತನ್ನು ನಾನು ಹೊಸದಾಗಿ ಹೇಳುತ್ತಿಲ್ಲ. ಶ್ರೀ ಸೇಡಿಯಾಪು ಕೃಷ್ಣಭಟ್ಟರು 'ಸಮರ್ಪಣೆ' ಎಂಬ ಸಂಭಾವನಾ ಗ್ರಂಥದಲ್ಲಿ 'ತ್ರಿಪದಿಯ ಲಕ್ಷಣ'ವನ್ನು ಕುರಿತು

4a ಮೈಸೂರು ವಿಶ್ವವಿದ್ಯಾನಿಲಯದ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯ ಮೊದಲ ವರ್ಷದ ಎಂ.ಎ. ತರಗತಿಗೆ ಶ್ರೀ ಟಿ. ವಿ. ವೆಂಕಟಾಚಲಶಾಸ್ತ್ರೀ ಅವರು ಸಿದ್ಧಪಡಿಸಿದ ಅಚ್ಚಾದ ಟಿಪ್ಪಣಿಗಳಿಂದ.

ಕೂಲಂಕಷವಾಗಿ ವಿವೇಚನೆ ಮಾಡಿದ್ದಾರೆ. ಅವರು ತಮ್ಮ ಲೇಖನದಲ್ಲಿ ಸರ್ವಜ್ಞನ ತ್ರಿಪದಿಗಳು ಮಾತ್ರಾಗಣದ ಧಾಟಿಗೆ ತಿರುಗಿಲ್ಲ ಎಂಬ ಅಂಶವನ್ನು ಸ್ಪಷ್ಟಪಡಿಸಿದ್ದಾರೆ. ಇದು ವಸ್ತುಸ್ಥಿತಿ. ಸರ್ವಜ್ಞನ ತ್ರಿಪದಿಗಳು ಮಾತ್ರಾಗಣಕ್ಕೆ ತಿರುಗಿವೆ ಎಂದು ಹೇಳುವುದಕ್ಕಿಂತ, ಈ ನಾನೂರು ವರ್ಷಗಳಲ್ಲಿ ಸಂಪ್ರತಿಕಾರರೂ ಸಂಪಾದಕರುಗಳೂ ಅವುಗಳನ್ನು ಪಂಚಮಾತ್ರಾಗಣಗಳ ಧಾಟಿಗೆ ತಿರುಗಿಸಿದ್ದಾರೆ ಎಂದು ಹೇಳುವುದು ಸರಿಯಾದ ಮಾತು. ಆದ್ದರಿಂದ, ಈಗ ಆಗಬೇಕಾಗಿರುವ ಮುಖ್ಯ ಕಾರ್ಯ ಎಂದರೆ, ಸರ್ವಜ್ಞನ ತ್ರಿಪದಿಗಳನ್ನು ಮಾತ್ರಾಗಣಗಳ ಕೃತಕರೂಪದಿಂದ ಅಂಶಗಣಗಳ ಸಹಜ ರೂಪಕ್ಕೆ ಹಿಂದಿರುಗಿಸುವುದು. ಇದು ಸುಲಭದ ಕೆಲಸವಲ್ಲ. ಇದನ್ನು ತೃಪ್ತಿಕರವಾಗಿ ನಿರ್ವಹಿಸಿದರೆ, ಸರ್ವಜ್ಞನ ತ್ರಿಪದಿಗಳ ಶುದ್ಧಪಾಠನಿರ್ಣಯದಲ್ಲಿ ಅರ್ಧ ದೂರ ವಾದರೂ ಸಾಗಿದಂತಾಗುವುದು. ಒಂದೆರಡು ಉದಾಹರಣೆಗಳ ಮೂಲಕ ನನ್ನ ವಾದದ ಸಮಂಜಸತೆಯನ್ನು ವಿಶದಪಡಿಸುತ್ತೇನೆ. ಈ ಹಿಂದೆಯೇ ಉದಾಹರಿಸಿರುವ ತುಂಬ ಪ್ರಸಿದ್ಧವಾದ, ಸಾಲ ಮತ್ತು ದೈವವನ್ನು ಕುರಿತ ಪದ್ಯಗಳಲ್ಲಿ ಮೂಲಭೂತ ವಾದ ಮಾರ್ಪಾಟುಗಳನ್ನು ಮಾಡದೆ, ಅವನ್ನು ಅಂಶಗಣಾತ್ಮಕವಾಗಿ ಮಾಡಬಹುದು:

ಸಾಲವ ಕೊಂಬಾಗ ಹಾಲೋಗರುಂಡಂತೆ
ಸಾಲಿಗ ಬಂದು ಎಳೆವಾಗ | ಕಿಬ್ಬದಿ
ಕೀಲ್ಮುರಿದಂತೆ ಸರ್ವಜ್ಞ

ಒಬ್ಬನಲ್ಲದೆ ಜಗಕಿಬ್ಬರುಂಟೇ ಮತ್ತೆ
ಒಬ್ಬ ಸರ್ವಜ್ಞಕರ್ತನು | ಜಗಕೆಲ್ಲ
ಒಬ್ಬನೇ ದೈವ ಸರ್ವಜ್ಞ

ಸರ್ವಜ್ಞನ ತ್ರಿಪದಿಗಳ ಅಂಶಲಯವನ್ನು ಮಾತ್ರಾಲಯಕ್ಕೆ ತಿರುಗಿಸುವಾಗ ಪ್ರಥಮಾ ವಿಭಕ್ತಿ ಪ್ರತ್ಯಯ ಉ, ಅನುಸ್ವಾರದ ಬಿಂದು, ಷಷ್ಠಿ ವಿಭಕ್ತಿಯ ದೀರ್ಘೀಕರಣ, ಮುಂತಾದುವು ಉದ್ದೇಶಪೂರ್ವಕವಾಗಿಯೋ ಉದ್ದೇಶರಹಿತವಾಗಿಯೋ ನಡೆದಿರುವ ಪ್ರಕ್ಷೇಪಗಳೇ ಸರಿ; ಇಡಿಯ ಪದ್ಯಗಳೇ ಪ್ರಕ್ಷೇಪವಾಗಿರುವ ಸಂಗತಿಯನ್ನು ಉತ್ತಂಗಿಯವರೇ ತಿಳಿಸಿರುತ್ತಾರೆ. ಇವುಗಳನ್ನೆಲ್ಲ ನಿರ್ಮೂಲಮಾಡಿ ಸರ್ವಜ್ಞಮೂರ್ತಿಯ ನಿಜಸ್ವರೂಪವನ್ನು ಕನ್ನಡಿಗರಿಗೆ ತೋರಿಸಿಕೊಡಬೇಕಾದದ್ದು ವಿದ್ವಾಂಸರ ಕರ್ತವ್ಯ.[5]

---

5 ಈ ಸಂದರ್ಭದಲ್ಲಿ ಒಂದು ಮುಖ್ಯ ಸಂಗತಿಯನ್ನು ಗಮನಿಸಬೇಕು. ಅದೇನೆಂದರೆ, ಪಂಚಮಾತ್ರಾಗಣಗಳ ಲಯಸ್ವರೂಪಕ್ಕೂ ಅಂಶಗಣಗಳ ಲಯಸ್ವರೂಪಕ್ಕೂ ಇರುವ ಮೂಲಭೂತ ವ್ಯತ್ಯಾಸ. ಇದನ್ನು ಲಘು ಗುರುಗಳ ಲೆಕ್ಕಾಚಾರದ ಪ್ರಸ್ತಾರದ ಮೂಲಕ ತೋರಿಸಲಾಗುವುದಿಲ್ಲ. ಪಠನ ಮೂಲಕವೇ ತೋರಿಸಬೇಕು. ಸಂಪೂರ್ಣವಾಗಿ ಪಂಚಮಾತ್ರಾಗಣಾತ್ಮಕವಾದ ತ್ರಿಪದಿಯನ್ನು ಅಂಶಲಯದಲ್ಲಿ ಹಾಡಬಹುದು. ವಚನಕಾರರು ಹೀಗೆಯೇ ಹಾಡುತ್ತಿದ್ದರೋ ಏನೋ. ಈ ಸಂದರ್ಭದಲ್ಲಿ, ಕೆಲವೇಳೆ, ಪಂಚಮಾತ್ರಾಗಣ ರುದ್ರಗಣಕ್ಕೆ ಸಂವಾದಿಯಾಗಿದ್ದು, ವಿಷ್ಣುಗಣದ ಲಯಮಾನಕ್ಕೆ ಕುಗ್ಗುತ್ತದೆ—ಉಚ್ಚಾರಣೆಯಲ್ಲಿ.

ಸರ್ವಜ್ಞನ ತ್ರಿಪದಿಗಳ ಮೂಲಪಾಠನಿಷ್ಕರ್ಷೆಯಲ್ಲಿ ಛಂದಸ್ಸಿನ ಆಧಾರದ ಮೇಲೆ ಹೇಗೆ ಪರಿಷ್ಕರಣ ಅಗತ್ಯ ಎಂಬುದನ್ನು ತೋರಿಸಲು ಪ್ರಯತ್ನಪಟ್ಟಿದ್ದೇನೆ.[6] ಇನ್ನೂ ಕೆಲವು ದೃಷ್ಟಿಕೋನಗಳಿಂದ ಪದ್ಯಗಳನ್ನು ಶಾಸ್ತ್ರೀಯವಾದ ಪರೀಕ್ಷೆಗೆ ಒಳಪಡಿಸಬೇಕಾಗಿರುತ್ತದೆ. ಅವುಗಳಲ್ಲಿ, ಪ್ರಾದೇಶಿಕ ಪದಪ್ರಯೋಗದ ವೈಶಿಷ್ಟ್ಯವನ್ನು ಗಮನಿಸಬೇಕಾದದ್ದು ಒಂದು ಮುಖ್ಯವಾದ ದೃಷ್ಟಿಕೋನ. ಒಂದು ಉದಾಹರಣೆ: ಪ್ರಕೃತ ಪರಿಸ್ಥಿತಿಗೆ ಅನ್ವಯಿಸುವ ಸ್ವಾರಸ್ಯವಾದ ಪದ್ಯ:

ಸೊಡರು ಲಂಚವ ಕೊಂಡು ಕೊಡುವದೊಪ್ಪಚಿ ಬೆಳಗ
ಪೊಡವಿಗಂ ಸೂರ್ಯ- ಬೆಳಗೀವ್ರೊಲ್ಲಂಚವನು
ಹಿಡಿಯದವ ಧರ್ಮಿ ಸರ್ವಜ್ಞ.

ಉತ್ತಂಗಿಯವರ ಸಂಕಲನದಿಂದ ಆಯ್ದ ಈ ಪದ್ಯದ ಪಾಠ ಕಿಟೆಲ್ ಕೋಶದಲ್ಲಿ ಹೀಗಿದೆ:

ಸೊಡರು ಲಂಚವ ಕೊಂಡು ಕೊಡುವುದೊಚ್ಚತ ಬೆಳಗ
ಪೊಡವಿಗೆ ಸೂರ್ಯ ಬೆಳಗೀವೋಲ್ | ಲಂಚವ
ಹಿಡಿಯದವ ಧರ್ಮಿ ಸರ್ವಜ್ಞ

ಸೊಡರು ಎಣ್ಣೆಯ ಲಂಚವನ್ನು ಪಡೆದು ಬೆಳಕು ಕೊಡುತ್ತದೆ. ಒಂದು ಪಾಠದ ಪ್ರಕಾರ '**ಒಪ್ಪಚಿ** ಬೆಳಕು' ಎಂದರೆ ಸ್ವಲ್ಪ ಬೆಳಕು; ಇನ್ನೊಂದರ ಪ್ರಕಾರ '**ಒಚ್ಚತ** ಬೆಳಕು' ಎಂದರೆ ಸೊಗಸಾದ, ಹಿತವಾದ, ಬೆಳಕು. ಉತ್ತಂಗಿಯವರು ಸ್ವೀಕರಿಸಿರುವ ಪಾಠ ಪ್ರಾದೇಶಿಕ ಸ್ವರೂಪದ್ದಾಗಿದ್ದು, ಅರ್ಥಸೌಂದರ್ಯ ಪೋಷಕವೂ ಆಗಿದೆ. ಸೊಡರು ಉರಿಯುವುದಕ್ಕೆ ಅಪಾರ ಎಣ್ಣೆ ಬೇಕು; ಕೊಡುವ ಬೆಳಕಾದರೋ ಸ್ವಲ್ಪ. ಸೂರ್ಯ ಏನನ್ನೂ ಸ್ವೀಕರಿಸದೆ, ಪಕ್ಷಪಾತವಿಲ್ಲದೆ, ಎಲ್ಲರಿಗೂ ಅಪಾರ ಬೆಳಕನ್ನು ಕೊಡುತ್ತಾನೆ. ಧರ್ಮದೃಷ್ಟಿಯುಳ್ಳವನು ಸೂರ್ಯನ ಹಾಗಿರಬೇಕು; ಲಂಚವನ್ನು ಸ್ವೀಕರಿಸದೆ ಕರ್ತವ್ಯಪಾಲನೆ ಮಾಡಬೇಕು, ಶಕ್ತಿಮೀರಿ ಪರೋಪಕಾರ ಮಾಡಬೇಕು. **ಒಪ್ಪಚಿ** ಎನ್ನುವ ಪದಪ್ರಯೋಗ ಒಂದನ್ನು ಬಿಟ್ಟರೆ, ಉಳಿದಂತೆ ಕಿಟೆಲ್ ಕೋಶದ ಪದ್ಯಪಾಠ ಪೂರ್ಣವಾಗಿ ಸ್ವೀಕಾರಾರ್ಹ- ಛಂದಸ್ಸಿನ ದೃಷ್ಟಿಯಿಂದ.

ಒಂದು ಪದ್ಯದಲ್ಲಿ ದುರ್ಜನರ ಸಂಗಡದ ಒಡನಾಟವನ್ನು ಬಚ್ಚಲ ಕೊಚ್ಚೆಯ ನೀರಿಗೆ ಹೋಲಿಸಿದೆ. ಉತ್ತಂಗಿಯವರ ಸಂಕಲನದಲ್ಲಿ ಕೊಚ್ಚೆಗೆ ರೊಜ್ಜು (=ರೊಚ್ಚು) ಎಂಬ ಪದವಿದೆ; ಕವಿಚರಿತ್ರೆಯ ಉದಾಹರಣ ಪದ್ಯದಲ್ಲಿ ಗೊಜ್ಜಲು

---

6 ಆದರೆ, ಒಂದು ಅಂಶವನ್ನು ಇಲ್ಲಿ ನೆನಪಿನಲ್ಲಿಡಬೇಕು: ಛಂದಸ್ಸಿನ ಸೂತ್ರಾನ್ವಯದಿಂದ ಕೆಲವು ಪದ್ಯಗಳನ್ನು ಮಾತ್ರ ಪ್ರಕ್ಷಿಪ್ತ ಎಂದು ವರ್ಜಿಸುವ ಸಾಧ್ಯತೆ ಇದ್ದರೂ ಎಲ್ಲ ಪ್ರಕ್ಷಿಪ್ತ ಪದ್ಯಗಳನ್ನೂ ಈ ಮಾನದಂಡದಿಂದ ಗುರುತಿಸುವುದು ಸಾಧ್ಯವಾಗದು.

ಎಂಬ ಪದವಿದೆ. ಈ ಎರಡು ಪ್ರಯೋಗಗಳ ಹಸ್ತಪ್ರತಿಗಳು ಯಾವ ಪ್ರದೇಶಕ್ಕೆ ಸೇರಿದವು ಎಂಬುದನ್ನು ತಿಳಿದು, ಯಾವ ಪದ ಸ್ವೀಕಾರಾರ್ಹ ಎಂಬುದನ್ನು ನಿರ್ಣಯಿಸಬೇಕಾಗುತ್ತದೆ. ರೊಜ್ಜು ಎಂಬ ಪದ ಮೂಲಪಾಠವಿರಬಹುದು. 'ಗೊಜ್ಜು' ಉತ್ತರ ಕರ್ನಾಟಕದಲ್ಲಿ ಈಗಲೂ ರೂಢಿಯಲ್ಲಿ ಇದೆ. (ಪರಮಾರ್ಥದ ಪಾಠ: 'ಬಚ್ಚಲ ಬಜ್ಜರ'.)

೪
ಜೀವನ ವಿವರ

ಸರ್ವಜ್ಞನ ವ್ಯಕ್ತಿತ್ವವನ್ನು, ಅವನ ಮೂರ್ತಿಮಹತ್ವವನ್ನು, ಅವನ ಪದ್ಯಗಳಿಂದ ಅರಿಯುವುದು ಸಾಧ್ಯ.

ಆದರೆ ಅವನ ತಂದೆ, ತಾಯಿ, ಹುಟ್ಟೂರು, ಕಾಲ, ಮತ, ಮುಂತಾದ ವಿಚಾರಗಳ ಬಗ್ಗೆ ಹೀಗೆಯೇ ಸರಿ ಎಂದು ನಿಶ್ಚಿತವಾಗಿ ಹೇಳುವುದು ಕಷ್ಟ. ಪ್ರಕ್ಷಿಪ್ತಪದ್ಯಗಳನ್ನೆಲ್ಲ ಶೋಧಿಸಿ ತೆಗೆದು, ಉಳಿದವು ನಿರ್ವಿವಾದವಾಗಿ ಸರ್ವಜ್ಞನು ರಚಿಸಿದಪದ್ಯಗಳು ಎಂದು ಸ್ಥಾಪಿಸುವವರೆಗೆ ಅವನ ಜೀವನ ವೃತ್ತಾಂತವನ್ನು ತಿಳಿಸುವ ಪದ್ಯಗಳನ್ನು ಸಂದೇಹದೃಷ್ಟಿಯಿಂದಲೇ ನೋಡಬೇಕಾಗುತ್ತದೆ. ಈ ವೃತ್ತಾಂತವನ್ನು ಒಳಗೊಂಡ ಸುಮಾರು ೩೦ ಪದ್ಯಗಳು ಪ್ರಕ್ಷಿಪ್ತವೇ ಅಲ್ಲವೇ ಎಂದು ಇನ್ನೂ ನಿರ್ಣಯವಾಗಿಲ್ಲ.[7]

ತಂದೆ, ತಾಯಿ : ಈವರೆಗೆ ದೊರೆತಿರುವ ಎಲ್ಲ ಹಸ್ತಪ್ರತಿಗಳಲ್ಲೂ, ಅವುಗಳನ್ನು ಅನುಸರಿಸಿ ಅಚ್ಚಾಗಿರುವ ಗ್ರಂಥಗಳಲ್ಲೂ ಸರ್ವಜ್ಞನ ಜನ್ಮ, ಊರು, ತಂದೆ ತಾಯಿಗಳ ವಿಚಾರವಾಗಿ ಕಥೆಗಳು ಇವೆ. ಇವು ಎಲ್ಲವೂ ಯಾವುದೋ ಒಂದು ಮೂಲ ದಂತಕಥೆಯ ರೂಪಾಂತರಗಳು. ದೇವಲೋಕ ಸಂಬಂಧವನ್ನು ಕಲ್ಪಿಸಿ, ಮನುಷ್ಯ ಜನ್ಮವನ್ನು ಅವನಿಗೆ ಆರೋಪಿಸುವಾಗಲೂ ಅವನ ಜನ್ಮವೃತ್ತಾಂತವನ್ನು ಅಸಾಧಾರಣವಾಗಿ ಮಾಡುವ, ನಮ್ಮ ಸಂಸ್ಕೃತಿಗೆ ಸಹಜವೆನಿಸಿದ ಒಂದು ದೃಷ್ಟಿ ಕಂಡುಬರುತ್ತದೆ. ಎಲ್ಲ ಮಹಾಪುರುಷರೂ ದೈವಾಂಶಸಂಭೂತರು, ಸರ್ವಜ್ಞನೂ ಅಂಥ ಒಬ್ಬ ಮಹಾಪುರುಷ ಎಂದು ಹೇಳಿದರೆ ಸಾಲದು. ಅವನು ಕೈಲಾಸದ ಗಣಗಳಲ್ಲಿ ಒಬ್ಬನಾದ ಪುಷ್ಪದತ್ತ, ಜನ್ಮಾಂತರದಲ್ಲಿ ವರರುಚಿ ಎಂಬ ಸಂಗತಿ ಸರ್ವಜ್ಞ ಜೀವಂತನಾಗಿದ್ದಾಗಲೇ ಜನಜನಿತವಾಗಿ ಪ್ರಚಾರಕ್ಕೆ ಬಂದಂತೆ ಕಾಣುತ್ತದೆ. ಈ ಕಥೆಗೆ ಹರಿಹರನ ರಗಳೆಗಳನ್ನು ಬಲ್ಲ ವೀರಶೈವ ಪಂಡಿತರು ಕಾರಣ ಆಗಿದ್ದರೂ ಆಗಿರಬಹುದು. ಸರ್ವಜ್ಞ ವೀರಶೈವನಾಗಿರಬಹುದು

---

7 ಚನ್ನಪ್ಪ ಉತ್ತಂಗಿಯವರ 1935ರ ಮುದ್ರಣದಲ್ಲಿ ಸರ್ವಜ್ಞನ ಜೀವನ ವೃತ್ತಾಂತದ 24 ಪದ್ಯಗಳು 'ಪೀಠಿಕಾ ಪ್ರಕರಣ' ಎಂಬ ಹೆಸರಿನಲ್ಲಿ ಪ್ರಕಟವಾಗಿವೆ. 1957ರ ಮುದ್ರಣದಲ್ಲಿ 29 ಪದ್ಯಗಳಿವೆ. ಈ ವಿಷಯಕವಾದ 28 ಪದ್ಯಗಳು 'ಪರಮಾರ್ಥ'ದಲ್ಲಿ 'ಜಾತಿಸ್ಮರಣ' ಪದ್ಧತಿ ಎಂಬ ಹೆಸರಿನಲ್ಲಿ ಸೇರಿವೆ. ಈ ನಾಮಕರಣಕ್ಕೆ ಹಸ್ತಪ್ರತಿಗಳ ಆಧಾರ ಉಂಟು.

ಎನ್ನುವುದಕ್ಕೆ ಆಂತರಿಕ ಪ್ರಮಾಣವೇ ನೆರವಿಗಿರುವಾಗ ಈ ಕಥೆ ಏಕೆ ಎಂಬ ಪ್ರಶ್ನೆ ಹುಟ್ಟಿಕೊಳ್ಳುವುದೂ ಸಹಜವೇ. ಈ ಕಥೆ ಹುಟ್ಟಿಕೊಂಡಾಗ ಸರ್ವಜ್ಞನ ತ್ರಿಪದಿಗಳು ಪದ್ಧತಿಗಳಾಗಿ ವರ್ಗೀಕರಣವಾಗದೆ ಅವ್ಯವಸ್ಥಿತವಾಗಿ ಪ್ರಚಾರದಲ್ಲಿದ್ದುವು ಎಂದು ಕಾಣುತ್ತದೆ. ಸಂಪಾದನೆಯ ಸಿದ್ಧವೀರಣ್ಣನು ಸರ್ವಜ್ಞನವೆಂದು ಆಚರಣೆಯ ವಚನಗಳನ್ನು ತನ್ನ 'ಶೂನ್ಯ ಸಂಪಾದನೆ' ಯಲ್ಲಿ ಅಳವಡಿಸಿಕೊಂಡಿರುವನಷ್ಟೆ. ಅವೇ ಸುಮಾರಿನಲ್ಲಿ ಅಥವಾ ಅದಕ್ಕೂ ಮುಂಚೆ ಸರ್ವಜ್ಞನ ವಚನಗಳು ಪದ್ಧತಿಗಳಾಗಿ ವಿಂಗಡನೆಗೊಂಡಿರಬೇಕು. ವೀರಶೈವ ಧರ್ಮದ ಹಿನ್ನೆಲೆಯಲ್ಲಿ ಈ ಕಾರ್ಯಗಳೆಲ್ಲ ನಡೆಯುತ್ತಿದ್ದಾಗಲೇ ಬ್ರಾಹ್ಮಣವರ್ಗವೊಂದು ಈ ಮಹಾಪುರುಷನನ್ನು ತಮ್ಮವನನ್ನಾಗಿ ಮಾಡಿಕೊಳ್ಳುವ ಉದ್ದೇಶದಿಂದ—ಸಂದರ್ಭವನ್ನು ಬಹುಶಃ ಸ್ವಲ್ಪ ಕುಹಕ ದೃಷ್ಟಿಯಿಂದಲೇ ಕಾಣುತ್ತ, ಅವನನ್ನು ಒಬ್ಬ ಹಾರುವನಿಗೂ ಕುಂಬಾರ ಸಾಲೆಯ ಒಬ್ಬ ವಿಧವೆಗೂ ಹುಟ್ಟಿದವನು ಎಂಬ ಪ್ರಚಲಿತ ವಿದ್ಯಮಾನದ ಆಧಾರದ ಮೇಲೆ ಅವರಿಬ್ಬರನ್ನೂ ಹೆಸರಿಟ್ಟು ಕರೆದರು ಎಂದು ಕಾಣುತ್ತದೆ. ಪುರುಷಪ್ರಧಾನವಾದ ಅಂದಿನ (ಇಂದಿನದು ಕೂಡ) ಸಮಾಜದಲ್ಲಿ ಹೆಣ್ಣು ಯಾವ ಕುಲದವಳಾದರೂ ಸ್ತ್ರೀಪುರುಷಸಂಬಂಧದಲ್ಲಿ ಜಾತಿಸಂಕರ ಇದ್ದಾಗ ಪುರುಷನ ವರ್ಣವೆ (ಅಥವಾ ಜಾತಿಯೆ) ಸಂತಾನಕ್ಕೂ ಸಲ್ಲತಕ್ಕದ್ದಾಗಿತ್ತು. ಹೀಗೆ, ಸರ್ವಜ್ಞ ಹಾರುವನೊಬ್ಬನ ಮಗ ಎನ್ನುವುದು ಸ್ಥಿರಪಟ್ಟಿರಬೇಕು. ಒಂದು ಕಥೆಯ ಪ್ರಕಾರ ಸರ್ವಜ್ಞನ ತಂದೆಯಾದ ಈ ಬ್ರಾಹ್ಮಣನ ಊರು ಧಾರವಾಡ ಪ್ರಾಂತದ 'ಮಾಸೂರು'. ಅವನ ಹೆಸರು ಬಸವರಸ; ಸರ್ವಜ್ಞನನ್ನು ಹೊತ್ತು ಹೆತ್ತವಳು ಕುಂಬಾರ 'ಮಾಳ'. ಇನ್ನೊಂದು ಕಥೆಯ ಪ್ರಕಾರ ಸರ್ವಜ್ಞನ ತಂದೆಯ ಊರು ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ 'ಅಂಬಲೂರು' ಎಂಬ ಹಳ್ಳಿ. ತಂದೆ ಬಸವರಸ ಅಥವಾ ಮಲ್ಲರಸ; ಇವನು 'ಆರಾಧ್ಯ' ಪಂಗಡದ (ಶೈವ) ಬ್ರಾಹ್ಮಣ. ಸರ್ವಜ್ಞನ ತಾಯಿ ಯಥಾಪ್ರಕಾರ ಕುಂಬಾರ ಮಾಳಿ. ಈ ಕಥಾಸಂಗತಿಯನ್ನು ಉಲ್ಲೇಖಿಸಿರುವ ವಿದ್ವಾಂಸರು ಸರ್ವಜ್ಞನ ಜನ್ಮವರ್ಷವನ್ನು ಕ್ರಿ. ಶ. 1570 ಎಂದೂ, ಸರ್ವಜ್ಞನಿಗೆ ತಂದೆ ತಾಯಿ ಇಟ್ಟ ಹೆಸರು **ಗುಂಡಪ್ಪ** ಎಂದೂ ಹೇಳಿದ್ದಾರೆ. (ಈ ವಿದ್ವಾಂಸರು ಯಾವ ಮೂಲದಿಂದ ಈ ಸ್ಪಷ್ಟ ಹೇಳಿಕೆಗಳನ್ನು ಪಡೆದುಕೊಂಡರೋ ತಿಳಿಯದು.) ಈ ಹೇಳಿಕೆಯನ್ನು ಉದ್ಧರಿಸಿ ಕೊಟ್ಟಿರುವ ವಿದ್ವಾಂಸರು–"ಈ ಕಥೆ ಸತ್ಯಕ್ಕೆ ಅತ್ಯಂತ ಸನ್ನಿಹಿತವಾಗಿದೆ. ಸರ್ವಜ್ಞ ನಾಮಧೇಯವು ತಾಯಿ ತಂದೆಗಳು ಇಟ್ಟದ್ದು ಅಲ್ಲವೆಂದೂ, ಮೊದಲ ಹೆಸರು ಗುಂಡಪ್ಪ ಎಂದೂ ಈ ಕಥೆಯಿಂದ ತಿಳಿದುಬರುತ್ತದೆ. ಇದು ವಿಶ್ವಾಸಕ್ಕೆ ತಕ್ಕ ವಿಷಯ" ಎಂದು ನಂಬಿದ್ದಾರೆ.[8]

---

8 ಡಾ|| ಗಂಧಂ ಅಪ್ಪಾರಾವು: 'ವೇಮನ್ನ ಸರ್ವಜ್ಞುಲು' (ತುಲನಾತ್ಮಕ ಪರಿಶೀಲನ); ಮದರಾಸು, 1979.

ಸರ್ವಜ್ಞನ ಪೂರ್ವನಾಮ 'ಗುಂಡಪ್ಪ' ಎಂದಿರಬಹುದಾದರೆ, ಅವನ ತಾಯಿಗೆ 'ಮಾಳಿ' ಎಂದು ಹೆಸರಿರಬೇಕಾದರೆ, ತಂದೆಗೂ ಒಂದು ಉಚಿತವಾದ ಹೆಸರನ್ನು ಯಾಕೆ ಕೊಡಬಾರದು ಎಂಬ ಅಪೇಕ್ಷೆ ಒಬ್ಬ ಸರ್ವಜ್ಞಾಭಿಮಾನಿ ಪಂಡಿತ ಸಂಪ್ರತಿಕಾರನಿಗೆ ಉಂಟಾಗಿರಬೇಕು. ಆತ ಬ್ರಾಹ್ಮಣನೇ ಎಂಬಲ್ಲಿ ಸಂಶಯವಿಲ್ಲ. ಆತ ಸರ್ವಜ್ಞನ ತಂದೆಗೆ '**ಶಂಕರಭಟ್ಟ**' ಎಂಬ ಹೆಸರನ್ನು ಕೊಟ್ಟ!

ತಂದೆ **ಶಂಕರಭಟ್ಟ** ತಾಯಿ ಕುಂಬರ ಮಲ್ಲಿ
ಚಂದ್ರಶೇಖರನ ವರಪುತ್ರ! ನಾ ನಿನ್ನ
ಕಂದ ಕಾಣಯ್ಯ ಸರ್ವಜ್ಞ[9]

ಸರ್ವಜ್ಞನ ತಂದೆ ತಾಯಿಗಳ ಹೆಸರುಗಳು ಯಾವ ಯಾವ ಹಂತದಲ್ಲಿ ಹೇಗೆ ಹೇಗೆ ಅವರಿಗೆ ಉಂಟಾಗಿವೆ ಎಂಬ ಸಂಗತಿಯ ಬೆಳವಣಿಗೆಯ ಪರಿಶೀಲನ ಸ್ವಾರಸ್ಯವಾಗಿದೆ:

ಅತ್ಯಂತ ಹಿಂದಿನ ಪಾಠಗಳಲ್ಲಿ ಸರ್ವಜ್ಞನ ತಂದೆ ಬ್ರಾಹ್ಮಣನೂ ಅಲ್ಲ, ತಾಯಿ ಕುಂಬಾರ ಮಾಳಿಯೂ ಅಲ್ಲ, ಸರ್ವಜ್ಞ ಸಾಕ್ಷಾತ್ ಈಶ್ವರನ ವರದಿಂದ ಹುಟ್ಟಿದವನು—ಎಂಬ ಸಂಗತಿ ಹೊರಪಡುತ್ತದೆ:

ತಂದೆ ಹಾರುವನಲ್ಲ ತಾಯಿ ಮಾಳಿಯು ಅಲ್ಲ
ಚಂದ್ರಶೇಖರನ ವರಪುತ್ರ—ನಾ ನಿಮ್ಮ
ಕಂದನಲ್ಲೆಂಬೆ (ಪರಮಾರ್ಥ)

ತಂದೆ ವಿಪ್ರನು ಅಲ್ಲ ತಾಯಿ ಮಾಳಿಯು ಅಲ್ಲ
ಚಂದ್ರಶೇಖರನ ವರದಿಂದ ಪುಟ್ಟಿದ
ಕಂದ ತಾನೆಂದ (ಸರ್ವಜ್ಞ)

ಮೇಲಿನ ಎರಡು ಪ್ರತ್ಯೇಕ ಪಾಠಗಳ ಪದ್ಯಗಳಲ್ಲಿ ಒಂದೇ ಅರ್ಥ ಕೊಡುವ ಮಾತುಗಳು ಬೇರೆಯಾಗಿವೆಯೆ ಹೊರತು ತಾತ್ಪರ್ಯ ಒಂದೆ.

'ತಂದೆ ಹಾರುವನಲ್ಲ' ಎಂಬ ಕಡೆಗಳಲ್ಲಿ 'ತಂದೆ ಹಾರುವ ಬಸವ' ಎಂದು ತಿದ್ದುವುದಕ್ಕೆ ಆ ಪಾಠಗಳ ಜನ್ಮವೃತ್ತಾಂತದ ಪದ್ಯಗಳಲ್ಲಿಯೆ ಆಧಾರ ಇದೆ. 'ಪರಮಾರ್ಥ' ಅಂಕಿತದ ಪಾಠದ ಪ್ರತಿಯಲ್ಲಿ ತಂದೆ ಮಾಸನೂರ (ಮಾಸೂರು) ಬಸವ, ಅಥವಾ ಬಸವರಸ; ಇವನ ಧರ್ಮಪತ್ನಿ ಅಕ್ಕ ಮಲ್ಲಮ್ಮ. ಇಬ್ಬರಿಗೂ ಸಂತಾನವಿರಲಿಲ್ಲ. ಸಂತಾನಪ್ರಾಪ್ತಿಗಾಗಿ ಕಾಶಿಯ ಈಶನಲ್ಲಿ (ವಿಶ್ವೇಶ್ವರನಲ್ಲಿ)

---

9 ಇದು: ಕೆಳದಿ ಮ್ಯೂಸಿಯುಮ್ಮಿನ ಏಕಪತ್ರದ ಹಸ್ತಪ್ರತಿಯಲ್ಲಿರುವ ಪಾಠ. (ಈ ಸಂಗ್ರಹದಲ್ಲಿ ಕೊಟ್ಟಿರುವ ಈ ಪದ್ಯಗುಚ್ಛದ ಮೊದಲ ಪದ್ಯವನ್ನು ನೋಡಿ. (ಪುಟ 46).

ವರ ಬೇಡಲು ಹೋದ ಅವನು ಊರಿಗೆ ಹಿಂದಿರುಗುವಾಗ ಆಕಸ್ಮಿಕವಾಗಿ 'ಲಂಡೆ' (= ರಂಡೆ, ವಿಧವೆ) ಮಾಳಿಯ ಸಹವಾಸವಾಗುತ್ತದೆ. ಇವರಿಬ್ಬರ ಸಮಾಗಮದ ಫಲವೇ ಪುತ್ರಜನನ. ಈಶ್ವರನ ವರದಿಂದ ಧರ್ಮಪತ್ನಿಯ ಗರ್ಭದಲ್ಲಿ ಅವತರಿಸ ಬೇಕಾಗಿದ್ದ ಶಿಶು **ವಿಧವೆ** ಮಾಳಿಯ ಗರ್ಭದಲ್ಲಿ ಬೆಳೆಯಿತು. ಮಾಳಿಯನ್ನು ವಿಧವೆಯಾಗಿ ಮಾಡಿದ್ದರಿಂದ ಬಸವರಸನಿಗೆ ಪರಸ್ತ್ರೀಗಮನ ದೋಷವೂ ಅಷ್ಟಾಗಿ ತಟ್ಟುವುದಾಗಲಿಲ್ಲ!

ಹೀಗೆ, ಮೇಲಿನ ಜನ್ಮವೃತ್ತಾಂತವಿಷಯದ ಮೂರು ಪದ್ಯಗಳೂ ಸರ್ವಜ್ಞನ ಬ್ರಾಹ್ಮಣತ್ವವನ್ನು ಎತ್ತಿ ಹಿಡಿವರೂ, ಆ ಪದ್ಯಗಳು ಪ್ರಕ್ಷಿಪ್ತಗಳಲ್ಲ ಎಂದು ಎಣಿಸಿ ಹೇಳುವುದಾದರೆ ಸರ್ವಜ್ಞನು ತನ್ನ ಬ್ರಾಹ್ಮಣ ಹುಟ್ಟನ್ನು ನಿರಾಕರಿಸಿ, ತಾನು ಈಶ್ವರನ ವರದಿಂದ ಹುಟ್ಟಿದವನು, ತಾನು ಯಾವ ಕುಲಕ್ಕೂ ಸೇರಿದವನಲ್ಲ, ಎಲ್ಲರಂತೆ ತಾನೊಬ್ಬ ಮಾನವ ಎಂದು ಘೋಷಿಸುವಂತೆ ತೋರುತ್ತದೆ:

ಎಲು ಕರುಳು ನರ ತೊಗಲು ಬಲಿದ ಚರ್ಮದ ಹೊದಿಕೆ
ಮಲಮೂತ್ರ ಕೀವು ಕ್ರಿಮಿಯಿರ್ಪ । ದೇಹಕ್ಕೆ
ಕುಲವಾವುದಯ್ಯ ಸರ್ವಜ್ಞ

ಅವಯವವೆಲ್ಲರಿಗೆ ಸವನಾಗಿ ಇರುತಿರೆ
ಭವಿ ಭಕ್ತ ಶ್ವಪಚ ಶೂದ್ರರು । ಎಂದೆಂಬ
ಕವನನೆತ್ತಣದು ಸರ್ವಜ್ಞ[10]

ಸರ್ವಜ್ಞನ ಮೂರ್ತಿಮಹತ್ವ : ಸರ್ವಜ್ಞನು ವಿಶ್ವಮಾನವತಾ ವಾದಿ ಎಂಬ ಸತ್ಯಸಂಗತಿಯನ್ನು ಒಪ್ಪಿದರೂ ಅಂದಿನ (ಮತ್ತು ಇಂದಿನ) ಸಾಮಾಜಿಕ ವ್ಯವಸ್ಥೆಯಂತೆ ಆತ ಜನ್ಮತಃ ಯಾವುದೋ ಒಂದು ಕುಲದಲ್ಲಿ ಹುಟ್ಟಿರಲೇಬೇಕಲ್ಲ. ಅವನ ಜನ್ಮವೃತ್ತಾಂತವನ್ನು ವಿವರಿಸುವ ಪದ್ಯಗಳನ್ನು ದಂತಕಥೆಯ ಆಧಾರದ ಮೇಲೆ ಈಚಿನವರು ಕಟ್ಟಿ ಅವನ ಪದ್ಯರಾಶಿಗೆ ಸೇರಿಸಿರಬೇಕು ಎಂದರೂ ಆ ದಂತ ಕಥೆಯ ಬುಡದಲ್ಲಿ ಸಾಸಿವೆ ಕಾಳಿನಷ್ಟಾದರೂ ನಿಜಾಂಶ ಹುದುಗಿದೆ ಎಂದು ತೋರು ತ್ತದೆ. ಅದೆಂದರೆ, ಅವನು ಒಬ್ಬ ಹಾರುವ ಹಾಗೂ ಒಬ್ಬ ಕುಂಬರಿತಿಯ ಮಗ ಎನ್ನುವುದು. ಆ ಹಾರುವ ಶೈವ ಬ್ರಾಹ್ಮಣ. ಕುಂಬರಿತಿ ವೀರಶೈವಳು.[11] ವೀರಶೈವ

---

10 ಈ ಪದ್ಯ 'ಪರಮಾರ್ಥ' ಸಂಗ್ರಹದಲ್ಲಿ ಇಲ್ಲ, ಉಳಿದ ಸಂಗ್ರಹಗಳಲ್ಲಿ ಉಂಟು. 'ಭವಿ-ಭಕ್ತ' (ಎಂದರೆ, ವೀರಶೈವನಲ್ಲದವನು ಮತ್ತು ವೀರಶೈವ) ಎಂಬ ಭೇದವನ್ನು ಸರ್ವಜ್ಞ ನಿರಾಕರಿಸಿರುವುದು ಗಮನಾರ್ಹ. ಅಂತೆಯೇ ಇಷ್ಟಲಿಂಗ ಮಹತ್ವವನ್ನು ಹೊಗಳುವ ಪದ್ಯಗಳೊಂದಿಗೆ ಲಿಂಗನಿಷ್ಠೆಯನ್ನು ಹಳಿಯುವ ಪದ್ಯಗಳೂ (ಈ ಸಂಗ್ರಹದ 49ನೆಯ ಪುಟ ನೋಡಿ.) ಇರುವುದು ಗಮನಾರ್ಹ.

11 ಉತ್ತರ ಕರ್ನಾಟಕದ ಕುಂಬಾರ ಕಸಬಿನವರೆಲ್ಲರೂ ವೀರಶೈವರು ಎಂದು ತಿಳಿದು ಬರುತ್ತದೆ. ದಕ್ಷಿಣ ಕರ್ನಾಟಕದಲ್ಲಿ ಹಾಗಿಲ್ಲ. ಈ ಅಂಶವನ್ನು ಈಚೆಗೆ ನನಗೆ ತಿಳಿಸಿದವರು ಡಾ॥ ಎಂ. ಚಿದಾನಂದಮೂರ್ತಿ ಅವರು.

ರಲ್ಲಿಯೂ ಅನಾದಿಕಾಲದಿಂದಲೂ ಎರಡು ಮುಖ್ಯ ಪಂಗಡಗಳು ಇದ್ದೇಇವೆ. ಇವುಗಳಲ್ಲಿ ಆರಾಧ್ಯ ಬ್ರಾಹ್ಮಣ ಪಂಗಡವೂ ಒಂದು. ತಂದೆ ಈ 'ಹಾರುವ' ಪಂಗಡದವನಾಗಿದ್ದು. ತಾಯಿ ಬಸವೇಶ್ವರರು ಪ್ರವರ್ತನಗೊಳಿಸಿದ ವೀರಶೈವ ಸಂಪ್ರದಾಯಕ್ಕೆ ಸೇರಿದವಳಿರ ಬಹುದು. ಈ ಬಗೆಯ ಹುಟ್ಟಿನ ಹಿನ್ನೆಲೆಯಲ್ಲಿ ಪರಿಶೀಲನೆ ಮಾಡಿನೋಡಿದರೆ, ಲಿಂಗ-ಜಾತಿ–ದೈವ–ಯೋಗ ಮುಂತಾದ ಗಹನವಿಚಾರಗಳ ಬಗೆಗೆ ಸ್ಪಷ್ಟವಾದ ಮಾತುಗಳಲ್ಲಿ ಅವನು ಪ್ರತಿಪಾದಿಸುವ ಸಿದ್ಧಾಂತದ ಸಮಂಜಸತೆಯನ್ನು ಅರ್ಥ ಮಾಡಿಕೊಳ್ಳಬಹುದು.

ಕಾಯಕಮಲದ ಸಜ್ಜೆ ಜೀವರತ್ನದ ಲಿಂಗ
ಭಾವಪುಷ್ಪದಲಿ ಶಿವಪೂಜೆ| ಮಾಡುವನೆ
ದೇವ ಕಾಣಯ್ಯ ಸರ್ವಜ್ಞ

ಅಷ್ಟವಿಧಾರ್ಚನೆ ಯೆಷ್ಟು ಮಾಡಿದರೇನು
ನಿಷ್ಠೆಯಿಲ್ಲದನ ಶಿವಪೂಜೆ| ಹಾಳೂರ
ಬಿಷ್ಟೆ ಕಾಣಯ್ಯ ಸರ್ವಜ್ಞ

ಕಂಡಕಂಡವರೆಲ್ಲಾ ಕೊಂಡು ಲಿಂಗವ ಕಟ್ಟಿ
ಕೊಂಡಾಡಲರಿಯದಧಮರೊಳು| ಆ ಲಿಂಗ
ಕೆಂಡದಂತಿರ್ಕು ಸರ್ವಜ್ಞ

ಕಲ್ಲುಕಲ್ಲೆಂಬರು ಕಲ್ಲಲುಂಟೇ ದೈವ
ಕಲ್ಲಲಿ ಕಲೆಯನರುಹಿದ| ಗುರುವಿನ
ಸೊಲ್ಲೆ ತಾ ದೈವ ಸರ್ವಜ್ಞ—ಇತ್ಯಾದಿ ಪದ್ಯಗಳು.

ಸರ್ವಜ್ಞ ವೀರಶೈವನೇ ಆದರೂ ಬಾಹ್ಯನಿಷ್ಠವೂ ಅವಿಚಾರಪರವೂ ಆದ ಶಿವಾಚಾರಕ್ಕೆ ಕಟ್ಟುಬೀಳದ ಸ್ವತಂತ್ರ ಮಾರ್ಗದ (ಶಿವ)ಯೋಗಿ, ಹಿಂಡಗಲಿದ ಗಜ, ಎಂದು ಕಾಣಬರುತ್ತದೆ. ನಿರ್ಗುಣಬ್ರಹ್ಮನ ಉಪಾಸನೆಯತ್ತ ಇವನ ಒಲವು. ತ್ರಿಗುಣಾತೀತನಾದ ಶಿವನೇ ಆ ನಿರ್ಗುಣಬ್ರಹ್ಮ. ಈ ಶಿವ ಸೃಷ್ಟಿಸ್ಥಿತಿಲಯಕರ್ತರಾದ ತ್ರಿಮೂರ್ತಿಗಳಲ್ಲಿ ಒಬ್ಬನಾದ ಶಿವನಲ್ಲ. ಆತ ಪರಶಿವ, ಸದಾಶಿವ. ಈ ದೃಷ್ಟಿ ನಿಜಗುಣರ ದೃಷ್ಟಿಗೆ ಸರಿಬರುವಂಥದು:

ಹಿರಿಯ ಬೊಮ್ಮನು ಕೆಂಚ ಕಿರಿಯ ಹರಿ ಕರಿಗ
ಪುರಹರ ಶುದ್ಧ ಧವಳಕ| ನಿವರುಗಳು
ಸರಿಯೆ ದೈವಕ್ಕೆ[12] ಸರ್ವಜ್ಞ

---

12 'ಸರಿಯೆ ದೈವಕ್ಕೆ' ಎನ್ನುವುದರೆಡೆಯಲ್ಲಿ 'ಹರಗೆ ಸರಿಯಾರು' ಎಂದಿದೆ 'ಪರಮಾರ್ಥ' ದಲ್ಲಿ. 'ಪುರಹರ' ಎಂದರೂ ಹರನೆ. ಎಂದಮೇಲೆ, 'ಸರಿಯೆ ದೈವಕ್ಕೆ' ಎಂಬ ಪಾಠವನ್ನು

ರಜೋಗುಣ ಕೆಂಪು) ಪ್ರಧಾನನಾದ ಬ್ರಹ್ಮ, ನೀಲಮೇಘಶ್ಯಾಮ ವರ್ಣದ (ಕಪ್ಪು) ತಮೋಗುಣಪ್ರಧಾನನಾದ ವಿಷ್ಣು, ಸತ್ವಗುಣ (ಬಿಳುಪು, ಧವಳವರ್ಣ) ಪ್ರಧಾನನಾದ ಪುರಹರ (ಎಂದರೆ ಹರ), ಇವರುಗಳು 'ಸರಿಯು ದೈವಕ್ಕೆ' ಎಂಬ ಹೇಳಿಕೆಯಲ್ಲಿ 'ದೈವ' ಎಂದರೆ ತ್ರಿಗುಣಾತೀತನಾದ ಪರಬ್ರಹ್ಮ ಎಂಬುದು ಸ್ಪಷ್ಟ. ಈ ಕಲ್ಪನೆ (ಹಾರುವರ) ಶುದ್ಧಶೈವಕ್ಕೂ ವೀರಶೈವಕ್ಕೂ ಸಮಾನವಾದುದು. ವೀರಶೈವ 'ಶುದ್ಧಶೈವ'ದ ಬೆಳವಣಿಗೆ ತಾನೆ? ಷಟ್‌ಸ್ಥಲದ ವಿಚಾರಗಳು ಬಸವಣ್ಣನವರ ಕಾಲದ ಶರಣರಿಗಿಂತ ಹಿಂದಿನ ಶುದ್ಧಶೈವರಲ್ಲೂ (ಆದ್ಯರಲ್ಲೂ) ಉಂಟು. ಲಿಂಗವಂತ, ವೈದಿಕ, ಜೈನ–ಈ ಮೂರು ಮತಗಳ ಬಾಹ್ಯ ಡಂಭ ಆಚರಣೆಗಳನ್ನು ಖಂಡಿಸುತ್ತ ಮೂರು ಮತಗಳಲ್ಲೂ ಸಮಾನ ಗೌರವ ಉಳ್ಳ, "ಹರನಿಷ್ಠೆಯುಳ್ಳ ಪರಮಋಷಿ" ಸರ್ವಜ್ಞ. ಇಂಥ ಒಬ್ಬ ಮಹಾಪುರುಷನನ್ನು ವೀರಶೈವದ ಚೌಕಟ್ಟಿನಲ್ಲಿಯೇ ಮೂರ್ತೀಕರಿಸಬೇಕು ಎಂಬ ನಿಲುವನ್ನು ವಿರೋಧಿಸುವ ಅಗತ್ಯವೇನೂ ಇಲ್ಲ. ಈ ವಿಚಾರದಲ್ಲಿ ನಾವು ಕೊಡುವ ಒತ್ತಿನಲ್ಲಿ ಸ್ವಲ್ಪ ಹೆಚ್ಚು, ಕಡಮೆ ಕಂಡುಬರಬಹುದು ಅಷ್ಟೆ. ಸರ್ವಜ್ಞನ ಮೂರ್ತಿಮಹತ್ವವನ್ನು ಅರಿತುಕೊಂಡೆವಾದರೆ ಅವನ ಮತದ ಬಗೆಗಿನ ಅಲ್ಪಸ್ವಲ್ಪ ಭಿನ್ನಾಭಿಪ್ರಾಯಗಳು ನಾವು ಆ ಮಹಾನುಭಾವನಿಗೆ ಸಲ್ಲಿಸುವ ಗೌರವಾರ್ಪಣೆಗೆ ಅಡ್ಡ ಬಾರವು.[13]

ಸರ್ವಜ್ಞನ ಸ್ಥಳ: ಸರ್ವಜ್ಞನ ತವರೂರು ಮಾಸೂರೇ, ಅಂಬಲೂರೇ? ಈ ಬಗೆಗೂ ಭಿನ್ನಾಭಿಪ್ರಾಯಕ್ಕೆ ಅವಕಾಶವಿದೆ. ಅವನ ಹುಟ್ಟೂರು ಯಾವುದೇ ಆದರೂ ಅವನು ಕನ್ನಡಿಗ, ಕನ್ನಡ ನಾಡನ್ನೆಲ್ಲ ತಿರುಗಿ ನೋಡಿದವನು. ಜೋಳದ ಬೋನ, ಅಕ್ಕಿಯ ಅನ್ನ, ರಾಗಿಯ ಮುದ್ದೆ, ಎಮ್ಮೆಯ ಹಯನು, ನವಣೆ, ಪುಡಿಗಡುಬು, ಬೆಲ್ಲ–ಬೇಳೆಯ ಹೂರಣ–ಇವೆಲ್ಲವನ್ನೂ ಬಲ್ಲ ಸರ್ವಜ್ಞ. ಬೆಳುವೊಲನಾಡು ಎಂತು ಮೆಚ್ಚೋ ಮಲೆನಾಡೂ ಅಂತೆಯೆ ಮೆಚ್ಚು ಅವನಿಗೆ. ಕರ್ನಾಟಕದ ಮೂಡಲು ಬಡಗಲು ಪಡುವಲು ತೆಂಕಲು ಈ ಎಲ್ಲ ಕಡೆಯೂ ತಿರುಗಾಡಿದವನು ಈ ಕನ್ನಡದ ಯೋಗಿ ತಿರುಕ. "ಅವನ ಪದ್ಯಗಳಲ್ಲಿ ಒದರು, ಒರಸೆ, ಶಾನೆ, ದುಸ್ತು,

---

'ಪರಮಾರ್ಥ' ಸಂಕಲನಕಾರ 'ಹರಗೆ ಸರಿ ಯಾರು' ಎಂದು ಮಾರ್ಪಡಿಸಿಕೊಂಡಿರುವಂತೆ ಕಾಣುತ್ತದೆ. ಇದರಿಂದ ಹೊರಡುವುದು ಏನು? ವಿರ್ತ್, ಕಿಟೆಲ್, ಉತ್ತಂಗಿ, ಈ ಮೂವರಲ್ಲಿ ಕಂಡುಬರುವ ಸುಮಾರು ಸಮನಾದ ಪಾಠಕ್ಕೆ ಮೂಲವಾದ ಒಂದು ಪಾಠ ಇದ್ದು, ಅದು 'ಪರಮಾರ್ಥ'ದ ಪಾಠಕ್ಕಿಂತ ಹಿಂದಿನದು; ಆ ಪಾಠ 'ಪರಮಾರ್ಥ'ದ ಪಾಠಕ್ಕಿಂತ ಹೆಚ್ಚು ವಿಶ್ವಸನೀಯವಾಗಿರಲು ಸಾಧ್ಯ—ಎಂಬ ವಿಚಾರ.

13 ದೈವ, ಜಾತಿ, ಕುಲಗಳ ಬಗೆಗೆ ಸರ್ವಜ್ಞನವು ಎಂದು ಪ್ರಸಿದ್ಧವಾಗಿರುವ ಪದ್ಯಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಎತ್ತಿ ಹೇಳಿದೆ. ಅವನ ಹೃದಯವೈಶಾಲ್ಯವನ್ನು ಪ್ರತಿಬಿಂಬಿಸುವ ವಚನಗಳು ಇನ್ನೂ ಹಲಕೆಲವು ಉಂಟು. ಇವು ಪ್ರಕ್ಷಿಪ್ತಗಳಲ್ಲ ಎಂಬ ನಿಶ್ಚಿತವನ್ನು ಅವಲಂಬಿಸಿ ನಮ್ಮ ಅಭಿಪ್ರಾಯವನ್ನು ತಿಳಿಸಲಾಗಿದೆ.

ದೇವಾಂಗ, ಕಮ್ಮೆ ಇತ್ಯಾದಿ ಅನೇಕ ಮೈಸೂರು ಪ್ರಯೋಗಗಳ ಜತೆಗೆ ನಾವುಗಳು, ಶ್ರೇಷ್ಠರುಗಳು ಎಂಬುದಾಗಿ ಅತಿ ಬಹುವಚನ ಪ್ರಯೋಗವಾಗಿರುವುದರಿಂದ ಇವನು ಧಾರವಾಡ, ಮೈಸೂರು ಮಧ್ಯದಲ್ಲಿರುವ ಮಾಸೂರಿನ ನೆರೆ ಪ್ರದೇಶದವನಾಗಿರ ಬೇಕೆಂಬ ಸಂಗತಿಯು ಸತ್ಯವಾಗಿದ್ದಂತೆ ತೋರುತ್ತದೆ. ಕರ್ನಾಟಕದ ಎಲ್ಲ ಭಾಗಗಳ ಪರಿಚಯು ಇವನಿಗಿದ್ದಂತೆ ಕಾಣುತ್ತದೆ" ಎಂದು ಉತ್ತಂಗಿ ಹೇಳುತ್ತಾರೆ. ಧಾರವಾಡ ಸೀಮೆ ಮೈಸೂರು ಸೀಮೆ ಇವುಗಳ ನಡುವಣ ಬೆಳುವೊಲ ಪ್ರಾಂತದ ಅಬ್ಬಲೂರು ಇವನ ಸ್ಥಳ ಎನ್ನುವುದು ಶ್ರೀ ಎಚ್. ದೇವೀರಪ್ಪನವರ ತೀರ್ಮಾನ.[13a] ಬೆಳುವೊಲ ನಾಡಿನವನು ಸರ್ವಜ್ಞ ಎಂದು ತಿಳಿಯಲು ಅಡ್ಡಿಯಿಲ್ಲ.

ಸರ್ವಜ್ಞನ ಕಾಲ: ಕಾವ್ಯಕವಿಗಳು ತಮ್ಮ ಪೂರ್ವದ ಕವಿಗಳನ್ನೋ ಆಶ್ರಯವಿತ್ತ, ಬಿರುದು ಮನ್ನಣೆಗಳನ್ನಿತ್ತ ಪೋಷಕರನ್ನೋ ಸ್ಮರಿಸುವುದು ಸಾಧಾರಣವಾಗಿ ಕಂಡುಬರುತ್ತದೆ. ಒಬ್ಬ ಕವಿಯ ತರುವಾಯದ ಕವಿಗಳು ಆತನ ಹೆಸರು ಹೇಳುವುದೂ ಉಂಟು. ಇದರಿಂದ ಕವಿಯ ಕಾಲವನ್ನು ಸ್ಥೂಲವಾಗಿ ಗೊತ್ತುಮಾಡುವುದು ಸುಲಭ. ಕೆಲವು ಕವಿಗಳು ಕೃತಿಯಲ್ಲಿ ರಚನಾಕಾಲವನ್ನೂ ತಿಳಿಸಿರುತ್ತಾರೆ. ಹಸ್ತಪ್ರತಿಯ ಲಿಪಿಕಾರರು ತಾವು ಬರೆದ ಹಸ್ತಪ್ರತಿಯಲ್ಲಿ ಅದನ್ನು ಬರೆದು ಮುಗಿಸಿದ ಕಾಲವನ್ನು ತಿಳಿಸಿದ್ದರೆ, ಕವಿ ಆ ಕಾಲಕ್ಕಿಂತ ಹಿಂದಿನವನು ಎಂದು ಊಹಿಸಬಹುದು. ಶಾಸನದ ಆಧಾರವೂ ಕೆಲವೊಮ್ಮೆ ನೆರವಿಗೆ ಒದಗಬಹುದು. ಕವಿಯೇ ಕೃತಿರಚನಾಕಾಲವನ್ನು ತಿಳಿಸಿರುವ ಸಂದರ್ಭವನ್ನು ಬಿಟ್ಟರೆ, ಉಳಿದ ಯಾವ ಪ್ರಮಾಣದಿಂದಲೂ ಕವಿಯ ಕಾಲವನ್ನು ಸಿಖರವಾಗಿ ತಿಳಿಸುವುದು ಸಾಧ್ಯವಿಲ್ಲ. ಭಾಷೆ ಶೈಲಿಗಳ ಆಧಾರದ ಮೇಲೆಯೂ ಸ್ಥೂಲವಾಗಿ ಕವಿ ಬದುಕಿದ್ದ ಶತಮಾನವನ್ನು ಊಹಿಸಲು ಅವಕಾಶವಿದೆ. ಸರ್ವಜ್ಞನನ್ನು ಯಾವ ಕವಿಯೇ ಸ್ತುತಿಸಿರುವುದು ನಮ್ಮ ಗಮನಕ್ಕೆ ಬಂದಿಲ್ಲ. ಸರ್ವಜ್ಞನ ಭಾಷೆ ಕುಮಾರ ವ್ಯಾಸಾದಿಗಳ ನಡುಗನ್ನಡದ ಜಾಡಿಗಿಂತ ಮುಂದುವರಿದು ಜನಾಭಿಮುಖವಾಗಿ ಬರೆಯುತ್ತಿದ್ದ ಪುರಂದರದಾಸರ ಭಾಷಾಶೈಲಿಯನ್ನು ಹೋಲುತ್ತದೆ. ಕಿಟೆಲ್‌ರವರು ಸರ್ವಜ್ಞನ ವಚನಗಳಲ್ಲಿ ಅನೇಕವನ್ನು ಶಬ್ದಾರ್ಥ ನಿರ್ಣಯ ಸಂದರ್ಭಕ್ಕೆ ಉದಾಹರಣೆಗಳಲ್ಲಿ ಬಳಸಿಕೊಂಡಿರುವರಷ್ಟೆ. ಅವರು ಏಕಪ್ರಕಾರವಾಗಿ ಸರ್ವಜ್ಞನ ವಚನಗಳಲ್ಲಿ ಹಳಗನ್ನಡದ 'ಟ'ಕಾರವನ್ನೂ 'ಜ'ಕಾರವನ್ನೂ ಪ್ರಯೋಗಿಸಿದ್ದಾರೆ. ಸರ್ವಜ್ಞವಚನಗಳ ಹಸ್ತಪ್ರತಿಗಳಲ್ಲೇನೋ ಜಕಾರ ಪ್ರಯೋಗವಿದೆ. ಟಕಾರವನ್ನು ಕಿಟೆಲ್ಲರು ಸರ್ವಜ್ಞನ ಭಾಷಾಶೈಲಿಗೆ ಅಸಗತ್ಯವಾಗಿ ಜೋಡಿಸಿದ್ದಾರೆ. ಎಲ್. ಬಸವರಾಜು ಅವರು ಸಂಪಾದಿಸಿರುವ ಸರ್ವಜ್ಞವಚನಗಳಲ್ಲೂ ಕೆಳದಿ ಮ್ಯೂಸಿಯಂ ನಲ್ಲಿ ದೊರೆತ ಹಸ್ತಪ್ರತಿಯಲ್ಲೂ ಜಕಾರ ಪ್ರಯೋಗವಿದೆ. ಆದ್ದರಿಂದ ಜಕಾರ

13a 'ಜಂಗಮಜ್ಯೋತಿ', ಶ್ರೀ ಜಗದ್ಗುರು ಜಯದೇವ ಪ್ರಶಸ್ತಿ; ಚಿತ್ರದುರ್ಗ, 1975; ಪು. 272, 274, 275.

ಪ್ರಯೋಗವು ಇನ್ನೂ ಪ್ರಚುರತೆಯಲ್ಲಿದ್ದ ಕಾಲದಲ್ಲಿ ಸರ್ವಜ್ಞವಚನಗಳ ಪ್ರಪ್ರಾಚೀನ ಹಸ್ತಪ್ರತಿಗಳು ಹುಟ್ಟಿವೆ ಎಂದಾಯಿತು. ಕಿಟೆಲ್‌ರವರ ಅಭಿಪ್ರಾಯದಂತೆ ಲಿಖಿತ ಸಾಹಿತ್ಯಕೃತಿಗಳಲ್ಲಿ ಐಕಾರಪ್ರಯೋಗವು 17ನೆಯ ಶತಮಾನದಲ್ಲಿಯೂ ಇದ್ದಿತು. ಈಗ ನಮಗೆ ದೊರೆತಿರುವ ಹಸ್ತಪ್ರತಿಗಳಲ್ಲಿ ಡಾ|| ಬಸವರಾಜುರವರ "ಪರಮಾರ್ಥ" ಹಸ್ತಪ್ರತಿಯನ್ನು ಬಿಟ್ಟರೆ ಬೇರೆ ಯಾವ ಹಸ್ತಪ್ರತಿಯಲ್ಲಿಯೂ ಕಾಲ ನಮೂದಾಗಿಲ್ಲ. "ಪರಮಾರ್ಥ"ದ ಹಸ್ತಪ್ರತಿಯ ಕಾಲ ಕ್ರಿ.ಶ. 1636. (ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಇರುವ ಈ ಪ್ರತಿ **ವೆಂಕ** ಎಂಬವನು ಪ್ರತಿ ಮಾಡಿಕೊಂಡದ್ದು.) ಆದ್ದರಿಂದ, ಬೇರೆ ಬೇರೆ ವಿದ್ವಾಂಸರು ಈ ಸಂಬಂಧದಲ್ಲಿ ಮಾಡಿರುವ ಊಹೆಗಳೆಲ್ಲವೂ ಅಪ್ರಸ್ತುತವಾಗುವುದರಿಂದ ಅವುಗಳನ್ನು ಇಲ್ಲಿ ಉಲ್ಲೇಖಿಸಿ ಅವುಗಳ ಬಗ್ಗೆ ವೃಥಾ ಚರ್ಚೆಮಾಡುವ ಗೋಜಿಗೆ ಹೋಗಿಲ್ಲ.[14] ವೆಂಕನ ಹಸ್ತಪ್ರತಿಯ ಕಾಲ ಕ್ರಿ.ಶ. 1636 ಎಂದು ಖಚಿತವಾಗಿ ತಿಳಿದುಬರುವುದರಿಂದ ಅದಕ್ಕಿಂತ ಹಿಂದೆ ಸರ್ವಜ್ಞ ಇದ್ದ ಎನ್ನುವುದು ಸಿದ್ಧವಾಗುತ್ತದೆ. ಎಷ್ಟು ಹಿಂದೆ ಎಂಬ ಪ್ರಶ್ನೆ ಉಳಿಯುತ್ತದೆ. "ಸಂಪಾದನೆಯ ಸಿದ್ಧವೀರಣ್ಣಾಚಾರ್ಯನು ಸರ್ವಜ್ಞನ ಕೆಲವು ಯಥೋಕ್ತಿಗಳನ್ನು ಉಲ್ಲೇಖಿಸಿದ್ದು, ಇವನು ಸುಮಾರು 1600ರಲ್ಲಿದ್ದಂತೆ ಆರ್. ನರಸಿಂಹಾಚಾರ್ಯರು ಹೇಳಿದ್ದಾರೆ. ಇದು ನಿಜವಿದ್ದಲ್ಲಿ ಸರ್ವಜ್ಞನು ಹಿಂದೆ ಅಂದರೆ 1600ಕ್ಕೆ ಮುಂಚೆ ಬದುಕಿದವನಾಗಿರಬೇಕು" ಎಂಬ ತೀರ್ಮಾನಕ್ಕೆ ಬಂದು, ಸರ್ವಜ್ಞ 16ನೆಯ ಶತಮಾನದವನು ಎಂಬ ಉತ್ತಂಗಿಯವರು ಹೇಳಿರುವುದು ಸತ್ಯಾಂಶಕ್ಕೆ ಹತ್ತಿರದ್ದಾಗಿ ಕಾಣುತ್ತದೆ.

ಈ ಸಂದರ್ಭದಲ್ಲಿ, ಕಾಲ ನಿರ್ಣಯಕ್ಕೆ ಪೋಷಕವಾದ ಆಂತರಿಕ ಪ್ರಮಾಣ ಯಾವುದಾದರೂ ದೊರಕೀತೇ ಎಂಬುದನ್ನೂ ಪರಿಶೀಲಿಸಬಹುದು.

ಕಿಟೆಲ್ಲರು ಉದಾಹರಿಸಿರುವ ಸರ್ವಜ್ಞವಚನ ಒಂದು ಹೀಗಿದೆ:

ಗಂಡಗಂಬಲಿಯಿಕ್ಕಿ ಗಂಡುಗರಣೆಯ ನುಂಗಿ
ಗಂಡಬಂದಾಗ ನರಳುವ| ಹೆಣ್ಣಿಂಗೆ
ಗುಂಡಿಕ್ಕು [ಬಿಡದೆ] ಸರ್ವಜ್ಞ

(ಉತ್ತಂಗಿಯವರ ಮುದ್ರಣಗಳಲ್ಲಿ 'ಗುಂಡಿಗಿಕ್ಕೆಂದ' ಎಂಬ ಪಾಠಾಂತರ ಇದೆ. 'ಪರಮಾರ್ಥ'ದಲ್ಲಿ ಈ ಪದ್ಯ ಇಲ್ಲ.)

---

14 ಸರ್ವಜ್ಞರಚಿತ ಎಂದು ನಂಬಲಾಗಿರುವ 'ಕಾಲಜ್ಞಾನಪದ್ಧತಿ'ಯ ವಚನಗಳ ಆಧಾರದ ಮೇಲೆ ಇ. ಪಿ. ರೈಸ್ ಅವರು ಸರ್ವಜ್ಞನ ಕಾಲವನ್ನು ಕ್ರಿ.ಶ. 1760 ಎಂದೂ ಕಿಟೆಲ್ ಅವರು 1800 ಎಂದೂ ನಿರ್ಣಯಿಸಿದ್ದಾರೆ. ಈ 'ಪದ್ಧತಿ'ಯ ಆಧಾರದ ಮೇಲೆ ಉತ್ತಂಗಿಯವರು ಅವನ ಕಾಲವನ್ನು 1600 ಎಂದು ಹೇಳಿದ್ದಾರೆ. ಈ ಕಾಲಜ್ಞಾನಪದ್ಧತಿಯ ಪದ್ಯಗಳನ್ನು ಈಚಿನವರು ಬರೆದು ಸೇರಿಸಿರುವಂತೆ ತೋರುತ್ತದೆ. ಸದ್ಯದ ಮಟ್ಟಿಗೆ ಅತ್ಯಂತ ಪ್ರಾಚೀನ ಎನ್ನಲಾದ 'ಪರಮಾರ್ಥ' ಅಂಕಿತದ ಸಂಕಲನದ ಹಸ್ತಪ್ರತಿಯಲ್ಲಿ 'ಕಾಲಜ್ಞಾನ ವಚನಗಳು' ಇಲ್ಲದಿರುವುದು ಗಮನಾರ್ಹ.

'ಗುಂಡಿಕ್ಕು' ಎನ್ನುವುದಕ್ಕೆ ಸರ್ವಜ್ಞನ ಪ್ರಯೋಗವನ್ನೆ ಕೊಟ್ಟು to shoot a ball ಎಂದು ಅರ್ಥಕೊಟ್ಟಿದ್ದಾರೆ ಕಿಟೆಲ್ಲರು. (ಪು. 552, ಗುಣ್ಡು 2). ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟುವಿನಲ್ಲಿ 'ಗುಂಡುಹಾರಿಸು' ಎಂಬ ಅರ್ಥವನ್ನು ಕೊಟ್ಟಿದ್ದರೂ ಪ್ರಾಚೀನ ಪ್ರಯೋಗ ಯಾವುದನ್ನೂ ಉದಾಹರಿಸಿಲ್ಲ. ಪ್ರಸ್ತುತ ಪದ್ಯ ಪ್ರಕ್ಷಿಪ್ತವಲ್ಲ ಎಂದು ಇಟ್ಟುಕೊಂಡು ಪರಿಶೀಲಿಸುವುದಾದರೆ, ಗುಂಡುಹಾರಿಸುವುದಕ್ಕೆ ಅಗತ್ಯವಾದ ಸಿಡಿಮದ್ದಿನ ಬಳಕೆ ಕನ್ನಡ ನಾಡವರಿಗೆ ತಿಳಿದದ್ದು ಯಾವಾಗ ಎಂಬುದನ್ನು ಶೋಧಿಸಬೇಕಾಗುತ್ತದೆ.

"ಪ್ರಾಚೀನ ಭಾರತೀಯರಿಗೆ ಸಿಡಿಮದ್ದಿನ ಪ್ರಯೋಗ ತಿಳಿದಿತ್ತು ಎಂದು ಕೆಲವು ವಿದ್ವಾಂಸರೂ (Gustav Oppert: On the Weapons, Army Organisation and Political Maxims of Ancient Hindus, with special reference to Gunpowder and Fire arms; 1880, pp 58–82. V. R. R. Dixitar: War in Ancient India, pp 101–106), ತಿಳಿದಿತ್ತೆಂದು ಹೇಳಲು ನಿರ್ವಿವಾದವಾದ ಪ್ರಮಾಣಗಳು ಇಲ್ಲವೆಂದು ಇನ್ನು ಕೆಲವು ವಿದ್ವಾಂಸರೂ (Date: The art of war in Ancient India, pp 36–40) ಅಭಿಪ್ರಾಯಪಟ್ಟಿದ್ದಾರೆ. ಪ್ರಾಚೀನ ಕರ್ನಾಟಕದ ಮಟ್ಟಿಗೆ ಹೇಳುವುದಾದರೆ 'ಸಿಡಿಮದ್ದು' (ಅಗ್ನಿಚೂರ್ಣ) ಪದವಾಗಲಿ, 'ನಾಲಿಕೆ' ಎಂಬ ಪದವಾಗಲಿ ಪ್ರಾಚೀನ ಕರ್ನಾಟಕದವರಿಗೆ ತಿಳಿದಿರಲಿಲ್ಲ ಎಂದು ಖಚಿತವಾಗಿ ಹೇಳಬಹುದು. ಫಿರಂಗಿ, ಗುಂಡು-ಗೋವಿ, ಶತಘ್ನಿ ಮುಂತಾದ ಸಿಡಿಮದ್ದಿನ ಆಯುಧಗಳು ಹದಿನಾರನೆಯ ಶತಮಾನದಿಂದ ಈಚಿನ ಕಾವ್ಯಗಳಲ್ಲಿ ಯಥೇಷ್ಟವಾಗಿ ಕಾಣಿಸಿಕೊಳ್ಳುತ್ತವೆ (ಬೆಟಗೇರಿ ಕೃಷ್ಣಶರ್ಮ: 'ಕನ್ನಡಿಗರ ಕೋಟೆಗಾಳೆಗ' ಎಂಬ ವಿಷಯವಾಗಿ 'ಕರ್ನಾಟಕ ಜನಜೀವನ' ಎಂಬ ಗ್ರಂಥವಲ್ಲಿಯ ಉಲ್ಲೇಖ, ಪು. 26). ದಕ್ಷಿಣಭಾರತದಲ್ಲಿ ಮಹಮ್ಮದೀಯರ ದಾಳಿ ನಡೆದ ಬಳಿಕ ಸು. ಕ್ರಿ.ಶ. 1368ರ ಹೊತ್ತಿಗೆ ಸಿಡಿಮದ್ದು ಬಳಕೆಗೆ ಬಂದಿತೆಂದು ಡಾ|| ಟಿ. ವಿ. ಮಹಾಲಿಂಗಂ ತಿಳಿಸುತ್ತಾರೆ (Administration and Social life under Vijayanagara, p. 149). ಇದಕ್ಕಿಂತಲೂ ಮುಂಚೆಯೇ ಕ್ರಿ.ಶ. 1117ರಲ್ಲಿ ನಿರ್ಮಿತವಾದ ಬೇಲೂರಿನ ಚೆನ್ನಕೇಶವ ದೇವಸ್ಥಾನದ ಗೋಡೆಗಳ ಮೇಲೆ ಬಂದೂಕಗಳಿಂದ ಹೊಡೆಯುತ್ತಿರುವ ಪುರುಷರ ವಿಗ್ರಹಗಳಿವೆ ಎಂದು ತಿಳಿದು ಬರುತ್ತದೆ (R. Narasimhachar: The Kesava Temple at Belur, p-9). (ಈ ಭಾಗವನ್ನು ದೇವಸ್ಥಾನದ ಮೂಲ ಕಟ್ಟಡದ ಒಂದು ಸ್ಥಳದಲ್ಲಿ ಆಮೇಲೆ ಅಳವಡಿಸಲಾಯಿತೇನೋ ಎಂಬ ಸಂದೇಹವೂ ಸುಳಿಯುತ್ತದೆ)."[15]

---

15 ಡಾ|| ಎಂ. ಚಿದಾನಂದಮೂರ್ತಿ ಅವರು ತಮ್ಮ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ'ದಲ್ಲಿ (ಪು. 279-80) ಈ ಬಗೆಗೆ ಪ್ರಸ್ತಾವಿಸಿದ್ದಾರೆಂದು ತಿಳಿಸಿ, ಮೇಲ್ಕಂಡ

ಪ್ರತಿಷ್ಠಾನದ ಹಸ್ತಪ್ರತಿ ಭಂಡಾರಕ್ಕೆ ಈಚೆಗೆ ಸೇರಿದ, 'ಕೃಷ್ಣದೇವರಾಯನ ದಿನಚರಿಯು ಕೃತ್ಯಗಳ ವಿಸ್ತಾರ'ವನ್ನು ನಿರೂಪಿಸುವ ಬಖೈರು ಮಾದರಿಯ ಓಲೆಗರಿಯ ಹಸ್ತಪ್ರತಿಯಲ್ಲಿ '**ಫಿರಂಗಿ**' ಶಬ್ದ ಪ್ರಯೋಗವಾಗಿದೆ:

"........ವಿಜಯಾಪುರದ ಕೋಟಿಕೊತ್ತಳಗಳ ಚೆಂನಾಗಿ ಮಾಡಿ।
ರಸ್ತು ಸಾಮುಗ್ರಿಗಳ ಹಾಕಿ ಯಂದು। ಮುಂದಲಿಸದಾಗಿ। ಬಾಗಿಲ
ಪಾರುಪತ್ಯಗಾರರು ಯೆಂಟು ದಿನದಿಂವಲ್ಲಿ ನಿದ್ರಾಹಾರಗಳು
ಯಿಲ್ಲದೆ। ಮೊವಲ ಘೊರೆ ಯಾವಾಗ ಬಂದು ನೋಡಿಯಾನೋ
ಯಂದು। ಬಯದಿಂದಾ। ಜಾಗರೂಕರಾಗಿ। ಕೋಟಿಕೊತ್ತಳಗಳ
ಚೆಂನಾಗಿ ಮಾಡಿಸಿ। **ಫಿರಂಗಿಗಳು**। ಜಬರಜಂಗಿಗಳು।
ಕೈಗಲ್ಲುಗಳು। ಲಗ್ಗೆಯ ಕೊರಡುಗಳು। ಹುಲಿ ತಲೆಗಳು।
ಕೋಟೆಯ ಹೊರಗೆ ಕುದುರೆಗಳು ನಿಲ್ಲುವಂಥಾ ಕಲ್ಲುಗಳು...."
ಮುಂತಾದವನ್ನು ಹಾಕಿದ್ದರು.

ಕೃಷ್ಣದೇವರಾಯನ ಕಾಲದಲ್ಲಿ (ಕ್ರಿ. ಶ. 1509–1529) ಫಿರಂಗಿಗಳು ಬಳಕೆಯಲ್ಲಿದ್ದುವು ಎಂಬ ಸಂಗತಿ ಮೇಲಿನ ವಿಶ್ವಸನೀಯ ದಾಖಲೆಯಿಂದ ಹೊರಪಡುತ್ತದೆ. ವಿಜಯನಗರ ಸಾಮ್ರಾಜ್ಯ ವೈಭವವನ್ನು ವರ್ಣಿಸುವ ನ್ಯೂನಿಜ್ ಮುಂತಾದ ವಿದೇಶಿ ಪ್ರವಾಸಿಗರ ಬರಹಗಳಲ್ಲೂ ಫಿರಂಗಿಗಳ ಉಲ್ಲೇಖವಿದೆ. ಹೀಗಿರುತ್ತ, ಕ್ರಿ. ಶ. 1368ರ ಸುಮಾರಿನಲ್ಲಿ ಸಿಡಿಮದ್ದು ಬಳಕೆಗೆ ಬಂದಿತ್ತೆಂಬ ಮಹಾಲಿಂಗಂ ಅವರ ಮಾತನ್ನೂ ಒಪ್ಪಬಹುದು. ತೆಲುಗಿನ ವೇಮನನ ಮೇಲೆ ಸರ್ವಜ್ಞನ ಪ್ರಭಾವವನ್ನು ವಿದ್ವಾಂಸರು ಗುರುತಿಸಿದ್ದಾರೆ. ವೇಮನನ ಕಾಲ 17ನೆಯ ಶತಮಾನ ಎಂಬ ವಿದ್ವಾಂಸರ ನಿರ್ಣಯ.[16] ಆದ್ದರಿಂದ, ಸರ್ವಜ್ಞನು 16ನೆಯ ಶತಮಾನದವನು ಎಂಬ ಆರ್. ನರಸಿಂಹಾಚಾರ್ ಮತ್ತು ಚನ್ನಪ್ಪ ಉತ್ತಂಗಿಯವರ ಅಭಿಮತ ಮಾನ್ಯವಾದುದು. ಮೇಲೆ ಉಲ್ಲೇಖಿಸಿದ ಹೊಸ ಶೋಧನೆಯ ಆಧಾರದಮೇಲೆ ಹೇಳುವುದಾದರೆ, ಉತ್ತರ ಕರ್ನಾಟಕದ ಧಾರವಾಡ ಪ್ರಾಂತದಲ್ಲಿ ಬಿಜಾಪುರ ಗೊಲ್ಕೊಂಡ ಮುಂತಾದ ಬಹಮನಿ ರಾಜ್ಯಗಳಲ್ಲಿ ಪ್ರಬಲಿಸಿದ್ದ ಮುಹಮ್ಮದೀಯರ ಪ್ರಭಾವ ಹೆಚ್ಚಾಗಿ, ವೈದಿಕ ವೀರಶೈವ ಜೈನ ಸಾಮಾಜಿಕ ಜೀವನ ಪರಿಶುದ್ಧತೆ ಇಳಿಮುಖವಾಗಿದ್ದ ಕಾಲದಲ್ಲಿ, ಪುರಂದರ ದಾಸರ ಜೀವಿತ ಕಾಲಕ್ಕಿಂತ (1480–1565) ಸ್ವಲ್ಪ ಮುಂಚೆ, ಎಂದರೆ **15ನೆಯ ಶತಮಾನದ ಉತ್ತರಾರ್ಧದಲ್ಲಿ,** (ಎಂದರೆ 1450ರ ಸುಮಾರಿನಲ್ಲಿ) **ಸರ್ವಜ್ಞಮೂರ್ತಿ ಜೀವಿಸಿದ್ದನೆಂದು ಹೇಳಲು ಅವಕಾಶವಿದೆ.**

ಉಪಯುಕ್ತ ಮಾಹಿತಿಯನ್ನು ಹುಡುಕಿತೆಗೆದು ಟಿಪ್ಪಣಿ ಸಿದ್ಧಪಡಿಸಿ ಉಪಕರಿಸಿದವರು ನನ್ನ ವಿದ್ಯಾರ್ಥಿಮಿತ್ರರಾದ ಡಾ॥ ಆರ್. ಶೇಷಶಾಸ್ತ್ರಿ ಅವರು.

16 'ವೇಮನ್ನ–ಸರ್ವಜ್ಞುಲು', ಪು. 45.

'ಪರಮಾರ್ಥ'ದ ಹಸ್ತಪ್ರತಿಯನ್ನು ವೆಂಕನೆಂಬವನು ಕ್ರಿ. ಶ. 1636ರಲ್ಲಿ ಪ್ರತಿಮಾಡಿದನೆಂದು ತಿಳಿದುಬರುತ್ತದೆ. ಈ ವೆಂಕ ಯಾರು? "'ವೆಂಕ' ಆತನ ನಿಜನಾಮಧೇಯವೇನಲ್ಲ" ಎಂದು ಎಚ್. ದೇವೀರಪ್ಪನವರು ಅದನ್ನು ನಿರಾಕರಿಸಿ, "ಕನ್ನಡದಲ್ಲಿ 'ವೆಂಕ ನಾಣಿ ಸೀನ' ಎಂದು ಅಪ್ರಸಿದ್ಧ ಅಗಣ್ಯ ಅನಾಮಿಕರನ್ನು ಸಂಬೋಧಿಸುವುದುಂಟು" ಎಂದು ಅಭಿಪ್ರಾಯಪಟ್ಟಿದ್ದಾರೆ.[16a] 'ಕೆಳದಿ ನೃಪವಿಜಯ'ದ ಕರ್ತೃವಾದ ಲಿಂಗಣ್ಣ ಕವಿ ಕೆಳದಿಯ ಅರಸು ಎರಡನೆಯ ಬಸವಪ್ಪನಾಯಕನ ಕಾಲದಲ್ಲಿದ್ದನು ಎಂದು ತಿಳಿದುಬರುತ್ತದೆ (ಕ್ರಿ. ಶ. 1740–1755). ಲಿಂಗಣ್ಣ ಕವಿಯ ಮಗನೇ ವೆಂಕಣ್ಣ ಕವಿ. ಲಿಂಗಣ್ಣ "ವೆಂಕಪಾತ್ಮಜಂ ಲಿಂಗವಿಬುಧಂ" ಎಂದು ಹೇಳಿಕೊಂಡಿರುವುದರಿಂದ ಲಿಂಗಣ್ಣನ ತಂದೆಯೂ ಒಬ್ಬ ವೆಂಕಪ್ಪನೆಂದು ತಿಳಿದು ಬರುತ್ತದೆ. ನಮಗೆ ದೊರೆತ ಕೆಳದಿ ಮ್ಯೂಸಿಯಮ್ಮಿನ ಸರ್ವಜ್ಞವಚನಗಳ ಹಸ್ತಪ್ರತಿ ವೆಂಕಣ್ಣನ ಕೃತಿಗಳ ಓಲೆಗರಿ ಕಟ್ಟಿನಲ್ಲಿದ್ದುದರಿಂದ ಅದು ವೆಂಕಣ್ಣನ ಸ್ವಹಸ್ತಾಕ್ಷರದ ಪ್ರತಿಯೋ ಇಲ್ಲವೆ ಅದರ ನೇರ ನಕಲೋ ಆಗಿರಬೇಕು ಎನ್ನುವುದಕ್ಕೆ ಅಡ್ಡಿಯಿಲ್ಲ. ಆ ಕಟ್ಟಿನಲ್ಲಿ ಸರ್ವಜ್ಞವಚನಗಳುಳ್ಳ ಇನ್ನೂ ಹಲವಾರು ಓಲೆಯ ಗರಿಗಳಿದ್ದು ಅವು ನಷ್ಟವಾಗಿರುವಂತೆ ತೋರುತ್ತದೆ. 'ಪರಮಾರ್ಥ'ದ ಹಸ್ತಪ್ರತಿಕಾರ ಈತನಲ್ಲ; ಈತನ ಅಜ್ಜನಾದ ವೆಂಕಪ್ಪ ('ವೆಂಕ') ಆಗಿರಬಹುದು. ಈಗ ದೊರಿತಿರುವ 'ಪರಮಾರ್ಥ'ದ ಹಸ್ತಪ್ರತಿಯ ಕಾಲ ಈ ವೆಂಕಪ್ಪನ ಕಾಲಕ್ಕೆ (ಸು. 1650) ಸರಿಹೊಂದುತ್ತದೆ. ಅಜ್ಜನ ಹಸ್ತಪ್ರತಿಯ 'ಪರಮಾರ್ಥ' ಅಂಕಿತವನ್ನು ಹೆಚ್ಚು ರೂಢಿಯಲ್ಲಿದ್ದ 'ಸರ್ವಜ್ಞ' ಅಂಕಿತಕ್ಕೆ ಮೊಮ್ಮಗ ವೆಂಕಣ್ಣ ಮಾರ್ಪಡಿಸಿಕೊಂಡನೆಂದು ಕಾಣುತ್ತದೆ. ಈ 'ವೆಂಕ'ರಲ್ಲದೆ ಕವಿಚರಿತೆಯಲ್ಲಿ ಆರ್. ನರಸಿಂಹಾಚಾರ್ಯರು ಕೆಲವು 'ವೆಂಕ ಕವಿ'ಗಳನ್ನು ಉಲ್ಲೇಖಿಸಿದ್ದಾರೆ. ಇವರ ಪೈಕಿ 'ವೆಂಕಟೇಶ್ವರ ಪ್ರಬಂಧ'ದ ಕರ್ತೃವಿನ ಕಾಲ ಕ್ರಿ. ಶ. 1650 ಎಂದು ಊಹಿಸಲಾಗಿದೆ. 'ಪರಮಾರ್ಥ'ದ ಪ್ರತಿಕಾರ ಈ ವೆಂಕನೂ ಆಗಿರಬಹುದು. ಯಾರೇ ಆಗಿದ್ದಿರಲಿ, ಶ್ರೀ ದೇವೀರಪ್ಪನವರು ಹೇಳುವಂತೆ 'ವೆಂಕ' ಅನಾಮಧೇಯನಲ್ಲ; ನಿಜವಾದ ವ್ಯಕ್ತಿ. 'ವೆಂಕ' ಕಳ್ಳ ಹೆಸರಲ್ಲ; ನಿಜ ನಾಮ. ಇಷ್ಟು ಹೇಳಿದ್ದರ ಉದ್ದೇಶ, ಬರೆದ ಕಾಲ ನಮೂದಾಗಿರುವ 'ಪರಮಾರ್ಥ'ದ ಹಸ್ತಪ್ರತಿ ಸರ್ವಜ್ಞನ ಕಾಲನಿರ್ಧಾರಕ್ಕೆ ಸಹಾಯಕವಾಗಿರುವಂತೆ ಅದರ ಜೊತೆಗೆ ಪ್ರತಿಕಾರನ ಹೆಸರೂ ಉಪಷ್ಟಂಭಕ ಪ್ರಮಾಣವಾಗಿ ಒದಗಿಬರುತ್ತದೆ ಎಂದು ಸೂಚಿಸುವ ಸಲುವಾಗಿ.

ಪ್ರಕ್ಷಿಪ್ತ ಪದ್ಯಗಳು : 'ಪರಮಾರ್ಥ' ಸಂಗ್ರಹದಲ್ಲಿ 937 ಪದ್ಯಗಳಿವೆ. ಈ ಸಂಗ್ರಹವನ್ನು ಪ್ರಕಟಿಸಿರುವ ಡಾ|| ಬಸವರಾಜು ಅವರು ಇವೆಲ್ಲವೂ ನಿಜವಚನಗಳೆಂದು ಗಣನೆಮಾಡಿದ್ದಾರೆ. ಅವನ ಜನ್ಮವೃತ್ತಾಂತವನ್ನು ತಿಳಿಸುವ

16*a* 'ಜಂಗಮಜ್ಯೋತಿ', ಪು 274.

ಪದ್ಯಗಳೂ ಕಾಲಜ್ಞಾನಪದ್ಧತಿಯ ವಚನಗಳೂ ಪ್ರಕ್ಷಿಪ್ತಗಳೆಂದು ನಮಗೆ ತೋರುತ್ತದೆ. ಈ ಬಗೆಗೆ ಉತ್ತಂಗಿಯವರು ವಸ್ತುನಿಷ್ಠವಾಗಿ ವಿಚಾರ ಮಾಡಿ ಕೆಲವು ತೀರ್ಮಾನಗಳಿಗೆ ಬಂದಿದ್ದಾರೆ. ಸರ್ವಜ್ಞನ ವಚನಗಳು ಸಮಯ ಸ್ಫೂರ್ತಿಯಿಂದ ಮೂಡಿಬಂದವೆಂದೂ ಪದ್ಧತಿಗಳಾಗಿ ವಿಭಾಗಗೊಂಡಿರುವುದು ತರುವಾಯದ ಬೆಳವಣಿಗೆ ಎಂದೂ ಅವರ ಅಭಿಪ್ರಾಯ. ಹೀಗಿದ್ದರೂ, "ಸರ್ವಜ್ಞನ ವಚನಗಳ ಭಾಷೆ, ಉದ್ದೇಶ ಮುಂತಾದವುಗಳನ್ನು ಲಕ್ಷಿಸಿದರೆ ಇವನ ಗುರು ಪದ್ಧತಿ, ದಾನಪದ್ಧತಿ, ಜಾತಿಪದ್ಧತಿ ಮುಂತಾದ ಕೆಲವು ಪದ್ಧತಿಗಳಲ್ಲಿ ಬರುವ ವಚನಗಳು ಏತತ್ಕೃತವೆಂದು ನಿಸ್ಸಂದೇಹವಾಗಿ ಹೇಳಬಹುದು. ವಿಶೇಷವಾಗಿ ಜ್ಯೋತಿಷಪದ್ಧತಿಯಲ್ಲಿರುವ ಹೆಚ್ಚಾದ ವಚನಗಳು ಕಟ್ಟು ಒಡೆಯದೆ ಹಾಗೆಯೇ ಉಳಿದಿರುವುದರಿಂದ ಸರ್ವಜ್ಞನ ಭಾಷಾಶೈಲಿಯನ್ನು ಗೊತ್ತುಹಚ್ಚುವುದಕ್ಕೆ ಇದೊಂದೇ ಬೀಗದ ಕೈಯೆಂದೂ ಹೇಳಲಿಕ್ಕೆ ಅಭ್ಯಂತರವಿಲ್ಲ" ಎಂದಿರುವುದು ಪ್ರಕ್ಷಿಪ್ತ ಪದ್ಯಗಳನ್ನು ಕಂಡುಹಿಡಿಯಲು ನೆರವಾಗುವುದಿಲ್ಲ ಎಂದೇ ನಮ್ಮ ಭಾವನೆ. ಉತ್ತಂಗಿಯವರು ಏಳು ಓಲೆಯಗರಿ ಹಸ್ತಪ್ರತಿಗಳನ್ನೂ ಒಂಬತ್ತು ಅಚ್ಚಾದ ಗ್ರಂಥ ಗಳನ್ನೂ ಪರಿಶೀಲಿಸಿ ತಮ್ಮ ಪದ್ಯಸಂಗ್ರಹವನ್ನು ಸಿದ್ಧಪಡಿಸಿರುವುದಾಗಿ ತಮ್ಮ ಪ್ರಥಮ ಮುದ್ರಣದ ಪ್ರಸ್ತಾವನೆಯಲ್ಲಿ (1923) ತಿಳಿಸಿರುತ್ತಾರೆ; ಸು. 1400 ವಚನಗಳನ್ನು ಸರ್ವಜ್ಞನ ಸ್ವಂತ ರಚನೆಗಳೆಂದು ನಿರ್ಣಯಿಸಿದ್ದಾರೆ. ಹಾಗೆ ನಿರ್ಣಯಿಸಲು ಅವರು ಅಂಗೀಕರಿಸಿದ ಆಧಾರಸೂತ್ರದ ಬಗೆಗೆ ಅವರ ನಿಲುವು ಹೀಗಿದೆ: "ಸರ್ವಜ್ಞನ ನಿಜಪದ್ಯಗಳನ್ನು ವಿವೇಕಿಸಿ ತಿಳಿಯುವುದು ದುಸ್ಸಾಧ್ಯವಾಗಿ ದ್ದರೂ ಒಂದು ತರದ ಸೂತ್ರವನ್ನು ಅನುಸರಿಸಿ ಇದನ್ನು ನಿಶ್ಚಯಿಸಿರುವೆವು. ವಿಶೇಷ ವಿರೂಪಹೊಂದದೆ ಕೈಬರಹದ ಹಾಗೂ ಅಚ್ಚಾದ ಎಲ್ಲ ಪತ್ರಿಕೆಗಳಲ್ಲಿ ದೊರೆಯುವವು ಕವಿಕೃತವೆಂದು ತಿಳಿಯಲ್ಪಟ್ಟವೆ." ಕಾವ್ಯಕವಿಗಳು ತಮ್ಮ ಕೃತಿಗಳನ್ನು ತಾವೇ ಬರೆದು ಇಡುತ್ತಿದ್ದರು. ಅವರ ಸ್ವಹಸ್ತಾಕ್ಷರ ಪ್ರತಿಗಳು ಪ್ರಾಯಿಕವಾಗಿ ದೊರೆಯ ದಿದ್ದರೂ, ಅವುಗಳ ನಕಲು ಪ್ರತಿಗಳು ದೊರೆಯುತ್ತವೆ. ಇವುಗಳಲ್ಲಿಯ ಪಾಠಾಂತರ ಗಳ ಸಹಾಯದಿಂದ ಮೂಲಪ್ರತಿಯ ಕವಿಪಾಠಕ್ಕೆ ಸಮೀಪವಾದ ಪಾಠವನ್ನು ನಿಷ್ಕರ್ಷೆಮಾಡುವುದು ಸಾಧ್ಯ. ಸರ್ವಜ್ಞನ ವಚನಗಳ ವಿಚಾರದಲ್ಲಿ ಪಾಠಾಂತರಗಳ ಮೂಲಕ ಒಂದು ಸರ್ವಸಮಾನ ಪಾಠವನ್ನು ಎಂದರೆ ಮೂಲಪಾಠವನ್ನು ಕಂಡುಹಿಡಿ ಯುವುದು ದುಸ್ಸಾಧ್ಯವೇ ಸರಿ. ಡಾ॥ ಬಸವರಾಜು ಅವರು ನಂಬಿರುವಂತೆ 'ಪರಮಾರ್ಥ'ದ ಪಾಠವೇ ನಿಜವಾದ ಪಾಠ ಎಂದು ತಿಳಿಯುವುದು ಸರಿಯೆನಿಸದು. ಈ ಮೊದಲೇ ಸೂಚಿಸಿರುವಂತೆ ಸರ್ವಜ್ಞನು ವಚನಗಳನ್ನು ಸಮಯಸ್ಫೂರ್ತಿಯಿಂದ ರಚಿಸಿರುವುದರಿಂದ ಜಾನಪದ ಛಂದಸ್ಸಾದ ಅಂಶಲಯದ ತ್ರಿಪದಿಛಂದಸ್ಸಿನಲ್ಲಿ ಅವನು ಪದ್ಯಗಳನ್ನು ಲೀಲಾಜಾಲವಾಗಿ ಕಟ್ಟಿಕೊಂಡುಹೋಗಿದ್ದಾನೆ. ಇದು ಸುಲಭವಾದ ಛಂದಃಪ್ರಕಾರವಾದ್ದರಿಂದ ಅನುಕರಣೆಗಳ ಮೂಲಕ ಖೋಟಾ ಸರ್ವಜ್ಞ ಪದ್ಯಗಳು

ಸಚಾ ಸರ್ವಜ್ಞ ಪದ್ಯರಾಶಿಯಲ್ಲಿ ತೂರಿಕೊಳ್ಳಲು ಸುಲಭವಾಯಿತು ; ಅನುಕೂಲವೂ ಆಯಿತು. ನಾಗವರ್ಮನ ತ್ರಿಪದಿಲಕ್ಷಣ ಅಂಶಲಯದ ತ್ರಿಮೂರ್ತಿಗಣವನ್ನೇ ಎತ್ತಿ ಹಿಡಿದಿದೆ. ಜನಪದ ಸಾಹಿತ್ಯದಲ್ಲಿ ಹೇರಳವಾಗಿ ದೊರಕುವ ತ್ರಿಪದಿಗಳೂ ತ್ರಿಮೂರ್ತಿಗಣಕ್ಕೆ ಸರಿಗೂಡತಕ್ಕವು. ಆದ್ದರಿಂದ, ತ್ರಿಮೂರ್ತಿಗಣ ಅಥವಾ ಅಂಶಲಯನಿಷ್ಠವಾದ ತ್ರಿಪದಿ ಛಂದದ ಧಾಟಿಯನ್ನು ಅನುಸರಿಸಿ ಸರ್ವಜ್ಞನ ಪದ್ಯಗಳನ್ನು ಪರಿಷ್ಕರಿಸುವುದು ಅಗತ್ಯ. ಹೀಗೆ ಪರಿಷ್ಕರಿಸುವಾಗ, ಪರಮಾರ್ಥದ ಪಾಠವನ್ನೂ ಇತರ ಓಲೆಗರಿ ಪುಸ್ತಕಗಳ ಪಾಠಾಂತರಗಳನ್ನೂ ಪರಿಶೀಲಿಸಿ, ಸರ್ವಜ್ಞನು ಹೇಳಿರಬಹುದಾದ ಮೂಲವಚನಗಳ ಸ್ವರೂಪವನ್ನು ಗುರುತಿಸುವ ಕೆಲಸ ನಡೆಯಬೇಕಾಗಿದೆ. (ಈ ರೀತಿ ಛಂದಸ್ಸನ್ನು ಆಧಾರವಾಗಿಟ್ಟುಕೊಂಡು ಸರ್ವಜ್ಞವಚನಗಳ ಪರಿಷ್ಕರಣ ಕಾರ್ಯದ ಅಗತ್ಯವನ್ನು ಕುರಿತು ಈ ಹಿಂದೆ ವಿವೇಚಿಸಿದೆ.) ಡಾ|| ಬಸವರಾಜು ಅವರು 'ಪರಮಾರ್ಥ'ದ ಪಾಠವನ್ನು ಓದುಗರ ಮುಂದಿಡುವಾಗ ಪ್ರತಿಪದ್ಯದ ಅಡಿಯಲ್ಲಿಯೂ ಉಪಲಬ್ಧವಿರುವ ಸರ್ವಪಾಠಗಳನ್ನೂ ಸಂಗ್ರಹಿಸಿ ಒಂದು ದೊಡ್ಡ ಉಪಕಾರ ಮಾಡಿದ್ದಾರೆ. 'ಪರಮಾರ್ಥ'ದ ಪಾಠವೇ ಪರಮಸತ್ಯ ಎಂದು ನೆರೆನಂಬಿ ಅವರು ಪರಿಷ್ಕರಣ ಕಾರ್ಯದಲ್ಲಿ ಹೊಲಬು ತಪ್ಪಿದರು ಎಂದು ನಮಗೆ ತೋರುತ್ತದೆ.

ಉದಾಹರಣೆಗೆ, ಒಂದು ಪದ್ಯ :

ಮಂಡೆ ಬೋಳಾದೊಡಂ **ದಂಡು** ಕೋಲ್ಪಿಡಿದೊಡಂ
ಹೆಂಡತಿಯ ಬಿಟ್ಟು ನಡೆದೊಡಂ ಗುರುಮುಖವ
ಕಂಡಲ್ಲದಿಲ್ಲ ಪರಮಾರ್ಥ (38)

'ದಂಡು' ಎಂಬ ಪದಕ್ಕೆ ಒಂದು ಹಸ್ತಪ್ರತಿಯಲ್ಲಿ 'ದಂಡಿ' ಎಂದೂ 'ವಿರ್ತ್' ಮತ್ತು 'ಉತ್ತಂಗಿ'ಯವರ ಮುದ್ರಿತ ಪಾಠಗಳಲ್ಲಿ 'ದಂಡ' ಎಂದೂ ಇವೆ. ('ಪರಮಾರ್ಥ', 1980, ಪು. 14). 'ದಂಡಿ' ಎಂಬ ಪಾಠವೆ ಸರಿಯಾದ ಪಾಠ; ದಂಡವೂ ಆಗಬಹುದು. ಸಂನ್ಯಾಸಿಗಳಲ್ಲಿ 'ಏಕದಂಡಿ' ಸಂನ್ಯಾಸಿಗಳು, 'ತ್ರಿದಂಡಿ'ಗಳು ಎಂಬ ಭೇದಗಳುಂಟು. ಆದ್ದರಿಂದ, 'ದಂಡಿ' ಎಂಬ ಪಾಠವೇ ಸರಿಯಾದದ್ದು; ಹಾಗೂ ಮೂಲಪಾಠ. ಹೀಗಿರುವಾಗ, 'ಪರಮಾರ್ಥ'ದ ಪಾಠವೇ ಮೂಲಪಾಠ ಎಂದು ಪಟ್ಟುಹಿಡಿಯುವುದು ಉಚಿತವೆನಿಸದು.

ಪ್ರಸ್ತುತ ಮುದ್ರಣದ ೬೮ ಮತ್ತು ೬೯ನೆಯ ಪದ್ಯಗಳ ಪಾಠ ನಮ್ಮ ಅಭಿಪ್ರಾಯದಲ್ಲಿ ಮೂಲ ಪಾಠಕ್ಕೆ ಸಮೀಪವಾಗಿದೆ. ಡಾ|| ಬಸವರಾಜು ಅವರೇ ಒಪ್ಪಿಕೊಂಡಿರುವಂತೆ, ಎಲ್ಲ ಶೈವಪಾಠಗಳಲ್ಲಿ ಇಲ್ಲದ 'ಜಂಗಮ' ಪದವನ್ನು 'ಪರಮಾರ್ಥ'ದ ಮೂಲ ಸಂಪ್ರತಿಕಾರ (ವೆಂಕನಲ್ಲ !) ಪ್ರಕ್ಷೇಪ ಮಾಡಿಕೊಂಡಿರುವನು ಎಂದು ಊಹಿಸಲು ಅವಕಾಶವಿದೆ ಅಲ್ಲವೆ ?

ಇತರ ಪ್ರತಿಗಳ ಪಾಠಗಳಲ್ಲಿ ಇರುವಂತೆ, 'ಪರಮಾರ್ಥ'ದಲ್ಲಿಯೂ ಛಂದಸ್ಸಿಗೆ ಕೂಡಿಬರದ, ಮೂಲದ ಅಂಶಲಯನಿಷ್ಠ ಲಯವನ್ನು ಪಂಚಮಾತ್ರಾಲಯಕ್ಕೆ ಖಚಿತಗೊಳಿಸುವುದಕ್ಕಾಗಿ ಹೆಚ್ಚಿನ ಅಕ್ಷರವನ್ನು ಸೇರಿಸಿರುವ, ಉದಾಹರಣೆಗಳು ಎಷ್ಟೋ ದೊರೆಯುತ್ತವೆ. (ಛಂದಸ್ಸು ಕೆಟ್ಟಿರುವುದಕ್ಕೆ ಒಂದು ಉದಾಹರಣೆ: ಈ ಸಂಗ್ರಹದ 65ನೆಯ ಪದ್ಯದ ಅಡಿಟಿಪ್ಪಣಿ ನೋಡಿ).

ಮೊತ್ತದಲ್ಲಿ ಹೇಳುವುದಾದರೆ, ಪಾಠದೋಷಗಳು ಎಲ್ಲ ಪ್ರತಿಗಳಲ್ಲೂ ಇವೆ; 'ಪರಮಾರ್ಥ'ದಲ್ಲಿ ಕಡಮೆಯಾಗಿದ್ದು, ಮೂಲಪಾಠಕ್ಕೆ ಹೆಚ್ಚು ಸಮೀಪ ಎಂದು ಬೇಕಾದರೆ ಹೇಳಬಹುದು. ಅದೇ ಮೂಲಪಾಠ ಅಲ್ಲ.

ಹೇಗೂ, ಅಂಶಲಯನಿಷ್ಠವಾದ ಛಂದಸ್ಸನ್ನು ಅನ್ವಯಿಸಿ ಮೂಲಪಾಠದನ್ನು ನಿರ್ಣಯಿಸುವ ಅವಸರದಲ್ಲಿ ಸಂಪೂರ್ಣವಾಗಿ ಮಾತ್ರಾಛಂದೋನಿಯಮಕ್ಕೆ ಒಳಪಟ್ಟ ಪದ್ಯಗಳು ಸಿಕ್ಕಿದರೆ ಅವುಗಳನ್ನು ಪ್ರಕ್ಷಿಪ್ತಗಳೆಂದು ವರ್ಜಿಸಬಹುದು. ಅತಿಯಾಗಿ ಸಂಸ್ಕೃತ ಭೂಯಿಷ್ಠವಾಗಿರುವ ಪದ್ಯಗಳನ್ನೂ ಅದೇ ರೀತಿ ಬಿಟ್ಟುಬಿಡಬಹುದು. ಇಷ್ಟು ಮಾಡಿಯೂ, ಸುಲಭವಾಗಿ ಬೇರ್ಪಡಿಸಲಾಗದ ಸೋಗಿನ ಸರ್ವಜ್ಞವಚನಗಳು ಸವಾಲೆಸೆದು ನಮ್ಮನ್ನು ಅಣಕಿಸುತ್ತಲೇ ಇರುತ್ತವೆ.

೫

ಕಿಟೆಲ್ ಕೋಶದ ಪದ್ಯಗಳು

ಪ್ರಸ್ತುತ ಕಿಟೆಲ್ ಕೋಶದ ಪದ್ಯಗಳನ್ನು ಸಂಗ್ರಹಿಸುವ ಉದ್ದೇಶ, ಆತನು ಪಾಠಪರಿಷ್ಕರಣಕ್ಕೆ ಬಹುಶಃ ಕೈಹಾಕದೆ ತನಗೆ ದೊರೆತ ಇಲ್ಲವೆ ತಾನು ಪಡೆದುಕೊಂಡ ಒಂದು ಹಸ್ತಪ್ರತಿಯಲ್ಲಿಯ (ಹಾಗೂ ವಿರ್ತನ ಮುದ್ರಿತ ಪ್ರತಿಯ) ಪಾಠವನ್ನು ಅನುಸರಿಸಿರುವುದರಿಂದ ಕೋಶದ ಪದ್ಯಸಂಗ್ರಹಕ್ಕೆ ಒಂದು ಹಸ್ತಪ್ರತಿಯ ಬೆಲೆ ಉಂಟು ಎಂಬುದನ್ನು ವಿದ್ವಾಂಸರ, ಸರ್ವಜ್ಞಪಾಠಪರಿಷ್ಕರಣಾಸಕ್ತರ ಗಮನಕ್ಕೆ ತರುವುದು. ವಿರ್ತ್ ಸಂಗ್ರಹದ ಪಾಠಕ್ಕೂ ಕಿಟೆಲ್ ಕೋಶದ ಪದ್ಯಗಳ ಪಾಠಕ್ಕೂ ಹೋಲಿಕೆಯಿದೆ. ಆದರೂ, ಕೆಲವು ಸಂದರ್ಭಗಳಲ್ಲಿ, ಇಬ್ಬರ ಪಾಠಗಳಲ್ಲಿ ಭಿನ್ನತೆಯೂ ಕಂಡುಬರುತ್ತದೆ. ಇವರಿಬ್ಬರಿಗೂ ಮೂಲವಾದ ಒಂದು ಪಾಠ ಇದ್ದಂತಿದೆ. ಕೆಳದಿ ಮ್ಯೂಸಿಯಮ್ಮಿನ ಹಸ್ತಪ್ರತಿಯ ಪದ್ಯಗಳ ಪಾಠ ಅನೇಕ ಸಂದರ್ಭಗಳಲ್ಲಿ 'ಪರಮಾರ್ಥ'ದ ಪಾಠಕ್ಕೆ ಸಂವಾದಿಯಾಗಿದೆ. ಈ ಎಲ್ಲ ಪಾಠಗಳಲ್ಲಿಯ ಪಾಠಾಂತರಗಳನ್ನೂ ಗಮನಿಸಿ, ಸರ್ವಪಾಠಸಮನ್ವಿತವೂ ಮೂಲಪಾಠಕ್ಕೆ ಸಮೀಪತಮವಾದದ್ದೂ ಆದ 'ಸರ್ವಜ್ಞ ಪಾಠ'ವನ್ನು ನಿರ್ಣಯಿಸಬೇಕಾದ ಕೆಲಸ ಆಗಬೇಕಾಗಿದೆ.[17]

---

17 ಉತ್ತಂಗಿಯವರು 'ಪರಮಾರ್ಥ'ದ ಹಸ್ತಪ್ರತಿಯನ್ನೂ ಗಮನಿಸಿದ್ದಾರೆ. ಅದನ್ನು ಎಷ್ಟರಮಟ್ಟಿಗೆ ಬಳಸಿಕೊಂಡಿದ್ದಾರೆ ಎಂದು ಹೇಳುವುದು ಸಾಧ್ಯವಿಲ್ಲ. ಕಿಟೆಲ್ ಕೋಶಕ್ಕೆ ಮೂಲವಾದ ಹಸ್ತಪ್ರತಿಯನ್ನು ಬಳಸಿಕೊಂಡಿರಬಹುದು. ಕಿಟೆಲ್‌ಕೋಶ ಪ್ರಕಟ ಆದದ್ದು 1894ರಲ್ಲಿ. ಉತ್ತಂಗಿಯವರ ಪ್ರಥಮ ಮುದ್ರಣ 1923ರಲ್ಲಿ ಹೊರಬಂದಿತು.

ನಿಘಂಟುರಚನೆಗೆ ಶುದ್ಧ ಪಾಠ ಸ್ವೀಕಾರ ಅಗತ್ಯ. ಕಿಟೆಲ್ ಅವರು ಸರ್ವಜ್ಞ ವಚನಗಳ ಎಲ್ಲ ಹಸ್ತಪ್ರತಿಗಳನ್ನೂ ಪಾಠವಿಮರ್ಶಕನ ದೃಷ್ಟಿಯಿಂದ ಪರಿಶೀಲಿಸಿ, ಮೂಲಪಾಠವನ್ನು ಗುರುತಿಸಿ ಅದರಿಂದ ತಮ್ಮ ನಿಘಂಟುವಿನ ನಿರ್ಮಾಣಕ್ಕೆ ಪದ ಪ್ರಯೋಗಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ ಎಂದು ಹೇಳಲಾಗದು. ಅವರು ವಿರ್ತ್‌ನ ಮುದ್ರಿತ ಪಾಠವನ್ನು ಬಲುಮಟ್ಟಿಗೆ ಅವಲಂಬಿಸಿದ್ದರೂ, ಕೋಶದ ಕೆಲವು ಪದ್ಯಗಳಲ್ಲಿ ಭಿನ್ನ ಪಾಠಗಳೂ ಇರುವುದರಿಂದ ಅವರು ಬೇರೊಂದು ಪೂರ್ವಮುದ್ರಣವನ್ನೊ ಇಲ್ಲವೆ ಹಸ್ತಪ್ರತಿಯನ್ನೊ ಪರಿಶೀಲಿಸಿರುವ ಸಾಧ್ಯತೆ ಉಂಟು. ಹೀಗಿರುವುದರಿಂದ, ಸರ್ವಜ್ಞನ ಎಲ್ಲ ಹಸ್ತಪ್ರತಿಗಳ ಪಾಠಗಳಲ್ಲಿಯ ಪದಪ್ರಯೋಗಗಳು ನಿಘಂಟುವಿನಲ್ಲಿ ಪ್ರವೇಶ ಪಡೆದಿವೆ ಎಂದಾಗಲಿ ಕಿಟೆಲ್ ಸ್ವೀಕರಿಸಿದ ಪದಪ್ರಯೋಗ ಎಲ್ಲ ಸಂದರ್ಭಗಳಲ್ಲೂ ಸರ್ವಜ್ಞನದು ಎಂದಾಗಲಿ ಹೇಳುವುದು ಸಾಧ್ಯವಿಲ್ಲ. ಕಿಟೆಲ್ ಅವರು ನಿಘಂಟುವನ್ನು ರಚಿಸುವ ಕಾಲಕ್ಕೆ ಸರ್ವಜ್ಞ ವಚನಗಳ ಸರ್ವಪಾಠ ಸಾಮಗ್ರಿ ಇನ್ನೂ ಸಿದ್ಧವಾಗಿರಲಿಲ್ಲ. ಈ ಪರಿಸ್ಥಿತಿಯಲ್ಲಿ, ಅವರು ತಮಗೆ ದೊರೆತ ಸರ್ವಜ್ಞ ವಚನಗಳ ಒಂದೋ ಎರಡೋ ಸಂಗ್ರಹಗಳನ್ನು ಪ್ರಯೋಗಾಕರಗಳಾಗಿ ಸ್ವೀಕರಿಸಿದ್ದೆ ಮಹತ್ವದ ವಿಷಯ.[18]

ಒಂದು ಆಶ್ಚರ್ಯದ ಸಂಗತಿ ಎಂದರೆ, ಆಕರ ನಿರ್ದೇಶ ಸಂದರ್ಭದಲ್ಲಿ ಅವರು ಆಯ್ದ ಪದಪ್ರಯೋಗವನ್ನುಳ್ಳ ಸರ್ವಜ್ಞ ಪದ್ಯವೊಂದರ ಒಂದು ತುಣುಕನ್ನಷ್ಟೆ ಉದ್ಧರಿಸಿಕೊಡಬಹುದಾಗಿತ್ತು (ಅನೇಕ ಸಂದರ್ಭಗಳಲ್ಲಿ ಹಾಗೆ ಮಾಡಿದ್ದಾರೆ): ಆದರೆ ಬಹು ಸಂದರ್ಭಗಳಲ್ಲಿ ಇಡಿಯ ಪದ್ಯವನ್ನೆ ಅವರು ಉದಾಹರಿಸಿದ್ದಾರೆ. ಹೀಗಿದ್ದುದರಿಂದ, ಒಂದು ಚಿಕ್ಕ ಸಂಗ್ರಹಕ್ಕೆ ಸಾಕಾಗುವಷ್ಟು ಪದ್ಯಗಳು ದೊರೆತುವು;

---

18 ಕಿಟೆಲ್ ಕೋಶದ ಆಕರಗ್ರಂಥಗಳ ಪಟ್ಟಿಯಲ್ಲಿ 'ಸರ್ವಜ್ಞನ ಪದ' (ರಗಳೆಯಲ್ಲಿರುವದು, ಸು. ಕ್ರಿ.ಶ. 1800) [Sarvajna's Pada (in ragale, of about A.D. 1800] ಎಂದು ತಿಳಿಸಿದೆ. ಮತ್ತು 'ಸರ್ವಜ್ಞ ಪದ'ಕ್ಕೆ ಸಂಬಂಧಪಟ್ಟಂತೆ 'ಅದರಲ್ಲಿರುವ ಎಲ್ಲ ಪದಗಳನ್ನೂ ಕೋಶದಲ್ಲಿ ಸೇರಿಸಿಲ್ಲ' ಎಂದು ಸ್ಪಷ್ಟಪಡಿಸಲಾಗಿದೆ. (ಪ್ರಸ್ತಾವನೆ, ಪು. iii ಮತ್ತು iv). ಸಂಕ್ಷಿಪ್ತಗಳ ಪಟ್ಟಿಯಲ್ಲಿ, "Sp. Sarvajnapada (Manuscript and W.)" ಎಂದು ನಮೂದಿಸಲಾಗಿದೆ. ಇದರಿಂದ, ಸರ್ವಜ್ಞ ಪದ್ಯಗಳಿಂದ ಪದಗಳನ್ನು ಆಯ್ದುಕೊಳ್ಳುವುದಕ್ಕಾಗಿ ಒಂದು ಹಸ್ತಪ್ರತಿಯನ್ನೂ ಮತ್ತು W. ಅವರ, ಎಂದರೆ ಬಹುಶಃ Wurth, G. A. ಅವರ 'ಕರ್ಣಾಟಕ ಪ್ರಾಕ್ಕಾವ್ಯಮಾಲಿಕೆ'ಯಲ್ಲಿ (1868) ಪ್ರಕಟವಾಗಿರುವ ಸರ್ವಜ್ಞ ಪದ್ಯಸಂಗ್ರಹವನ್ನೂ ಬಳಸಿಕೊಂಡಿರುವುದಾಗಿ ತಿಳಿದುಬರುತ್ತದೆ (ಪ್ರಸ್ತಾವನೆ, ಪು. L).

Wurth ಅವರ ಹೆಸರಿನ ಉಚ್ಚಾರಣೆಯನ್ನು ಡಾ। ಬಸವರಾಜು ಅವರನ್ನು ಅನುಸರಿಸಿ 'ವಿರ್ತ್' ಎಂದು ನಾವು ಕೊಟ್ಟಿದ್ದೇವೆ. ಉಚ್ಚಾರಣೆ 'ವರ್ಥ್' ಎಂದು ವೆಂಕಟೇಶ ಸಾಂಗಲಿಯವರ 'ಗ್ರಂಥಕರ್ತ ಚರಿತ್ರಕೋಶ' (1960) ದಿಂದ ತಿಳಿದುಬರುತ್ತದೆ (ಪು. 140). ಸರಿಯಾದ ಉಚ್ಚಾರಣೆ 'ವುರ್ತ್' ಎಂದಿರಬಹುದು.

ಆ ಪದ್ಯಸಂಗ್ರಹಕ್ಕೆ ಒಂದು ಹಸ್ತಪ್ರತಿಯ ಬೆಲೆಯನ್ನು ಕೊಡಬಹುದು ಎಂದು ಮನದಟ್ಟಾದದ್ದರಿಂದ ಅದನ್ನು ಪ್ರಕಟಿಸುವ ಆಲೋಚನೆ ಮಾಡಲಾಯಿತು.

ಕಿಟೆಲ್ ನಿಘಂಟುವಿನಲ್ಲಿ ಯಾವ ಕ್ರಮದಲ್ಲಿ ಪ್ರಯುಕ್ತ ಪದ್ಯಗಳು ದೊರೆತವೋ ಅದೇ ಅಕಾರಾದಿ ಕ್ರಮದಲ್ಲಿ ಅವನ್ನು ಇಲ್ಲಿ ಮುದ್ರಿಸಲಾಗಿದೆ. ಪ್ರತಿಪದ್ಯದ ಪಕ್ಕದಲ್ಲಿ ಪದ್ಯವು ನಿಘಂಟುವಿನ ಯಾವ ಪದಕ್ಕೆ (ಅಥವಾ ಪದಗಳಿಗೆ) ಉದಾಹೃತವಾಗಿದೆ ಎಂಬುದನ್ನು ನಿಘಂಟುವಿನ ಪುಟಸಂಖ್ಯೆಯೊಂದಿಗೆ ಸೂಚಿಸಲಾಗಿದೆ. ಪದ್ಯಗಳನ್ನು 'ಪದ್ಧತಿ'ಗಳಿಗೆ ಹೊಂದಿಸಿ ಜೋಡಿಸುವ ಆಲೋಚನೆಯನ್ನು ಕೈಬಿಡಲಾಯಿತು. ಆದರೂ ಹಲವು 'ಪದ್ಧತಿ'ಗಳನ್ನು ಪ್ರತಿನಿಧಿಸುವ ಪದ್ಯಗಳು ಈ ಸಂಗ್ರಹದಲ್ಲಿದ್ದು, ಅಸಂದಿಗ್ಧವಾಗಿ ಇದೊಂದು ಪ್ರಾತಿನಿಧಿಕ ಸಂಗ್ರಹವಾಗಿ ಪರಿಣಮಿಸಿದೆ ಎಂದು ಹೇಳಬಹುದು.

ಪಾಠಪರಿಷ್ಕರಣ : ಕಿಟೆಲ್ ಕೋಶದ ಪದ್ಯಗಳನ್ನು ಛಂದಸ್ಸಿನ ದೃಷ್ಟಿಯಿಂದ ಪರಿಷ್ಕರಿಸಿರುವ ಮಾದರಿಯಲ್ಲಿಯೇ ಕೆಳದಿ ಮ್ಯೂಸಿಯಮ್ಮಿನ ಹಸ್ತಪ್ರತಿಯ ಪದ್ಯಗಳನ್ನೂ ಅದೇ ರೀತಿ ಪರಿಷ್ಕರಿಸಿದೆ. ಎಲ್ಲೆಲ್ಲಿ ಬೇರೆಯ ಕಾರಣಕ್ಕಾಗಿ ಪಾಠಪರಿಷ್ಕರಣ ಮಾಡಿದೆಯೋ ಅಂಥಲ್ಲೆಲ್ಲ ತಿದ್ದುಪಾಟನ್ನು ಚೌಕಕಂಸದಲ್ಲಿ ಕಾಣಿಸಿದೆ. ಹೀಗೆ ಪರಿಷ್ಕರಣ ಮಾಡಿರುವ ಕೆಲಸ ಎಲ್ಲ ಸಂದರ್ಭಗಳಲ್ಲೂ ಸಮರ್ಪಕವಾಗಿದೆ ಎಂದು ನಾವು ಭಾವಿಸಿಲ್ಲ. ನಮ್ಮ ನಿಲುವನ್ನು ಅನುಮೋದಿಸುವ, ಅನುಮೋದಿಸದ, ವಿದ್ವಾಂಸರು ಈ ದಿಟ್ಟಿನಲ್ಲಿ ನೀಡಬಹುದಾದ ಸಲಹೆಸೂಚನೆಗಳನ್ನು ತೆರೆದ ಮನಸ್ಸಿನಿಂದ ಸ್ವಾಗತಿಸುತ್ತೇವೆ. ಅವುಗಳ ಬೆಳಕಿನಲ್ಲಿ ನಮ್ಮ ಪರಿಷ್ಕರಣಕಾರ್ಯವನ್ನು ಮುಂದಿನ ಮುದ್ರಣದಲ್ಲಿ ಉತ್ತಮಪಡಿಸಲು ಪ್ರಯತ್ನಿಸುತ್ತೇವೆ. ಪಾಠಪರಿಷ್ಕರಣ ಕಾರ್ಯಕ್ಕೆ 'ಮೊದಲು' ಎನ್ನುವುದುಂಟು; 'ಕೊನೆ' ಎನ್ನುವುದು ಇಲ್ಲ. ಎಡೆಬಿಡದೆ ನಡೆಯಬೇಕಾದ ಕೆಲಸ ಇದು. ಸರ್ವಜ್ಞನ ವಿಚಾರದಲ್ಲಂತೂ ಈ ಮಾತು ಪೂರ್ತಿಯಾಗಿ ಅನ್ವಯಿಸತಕ್ಕದ್ದು.


ಪರಿಷ್ಕರಣದ ಎಲ್ಲ ಹೊಣೆಗಾರಿಕೆಯೂ ಪ್ರಧಾನ ಸಂಪಾದಕನಿಗೆ ಸೇರಿದೆ. ಆ ಸಂಬಂಧದ ಎಲ್ಲ ಲೋಪದೋಷಗಳಿಗೆ ಅವನೇ ಬಾಧ್ಯ.

ಸರ್ವಜ್ಞವಚನಗಳ ಸಾಹಿತ್ಯಕ ಮೌಲ್ಯ, ಅವನ ವ್ಯಕ್ತಿತ್ವ, ಅವನ ಸಾಮಾಜಿಕ ಪ್ರಜ್ಞೆ ಮತ್ತು ಸಮಾಜ ಸುಧಾರಣೆಯ ದೃಷ್ಟಿ, ಕನ್ನಡ ಸಾಹಿತ್ಯದಲ್ಲಿ ಅವನ ಸ್ಥಾನ, ಸರ್ವಜ್ಞ ಮತ್ತು ವೇಮನರ ಪದ್ಯಗಳಲ್ಲಿ ಕಂಡುಬರುವ ಸಾಮ್ಯ, ಮುಂತಾದ ಅನೇಕ ಮಹತ್ವದ ವಿಷಯಗಳ ಬಗೆಗೆ ನಾವು ಇಲ್ಲಿ ವಿವೇಚನೆ ಮಾಡುವ ಪ್ರಯತ್ನವನ್ನು ಕೈಕೊಂಡಿಲ್ಲ. ಈಗಾಗಲೇ ದೀರ್ಘವಾಗಿರುವ ಪ್ರಸ್ತಾವನೆ ಎಲ್ಲಿ ಒಂದು ಗ್ರಂಥವಾಗಿ ಪರಿಣಮಿಸುವುದೋ ಎಂಬ ಭೀತಿ ಒಂದು ಕಾರಣ. ಮುಖ್ಯಕಾರಣ ಎಂದರೆ,

ಸರ್ವಜ್ಞ ಮತ್ತು ಆತನ ವಚನಗಳ ಬಗೆಗೆ ವಿಪುಲವಾದ ವಿಮರ್ಶನ ಸಾಹಿತ್ಯ ಬೆಳೆದಿದೆ: ಬಿಡಿಲೇಖನಗಳ, ಮುನ್ನುಡಿಗಳ, ಪೀಠಿಕೆ ಪ್ರಸ್ತಾವನೆಗಳ, ಗ್ರಂಥಗಳ ರೂಪದಲ್ಲಿ ಇವೆಲ್ಲವುಗಳ ಮಾಹಿತಿಯನ್ನು "ಲೇಖನ-ಗ್ರಂಥ-ಸೂಚಿ"ಯ ರೂಪದಲ್ಲಿ ಈ ಗ್ರಂಥದ ಕಡೆಯಲ್ಲಿ ಕೊಟ್ಟಿದೆ. ಕುತೂಹಲಿಗಳು ಅವುಗಳಿಂದ ಪ್ರಯೋಜನ ಪಡೆಯಬಹುದು.

ಎಂ. ವಿ. ಸೀತಾರಾಮಯ್ಯ
ಪ್ರಧಾನ ಸಂಪಾದಕ
ಮತ್ತು
ಅಧ್ಯಯನ ನಿರ್ದೇಶಕ

ಬೆಂಗಳೂರು-೧೯
ಬಲಿಪಾಡ್ಯಮಿ, ೧೬-೧೧-೧೯೮೨



ಸರ್ವಜ್ಞ ವಚನಗಳಿರುವ ಏಕೈಕ ತಾಡಪತ್ರದ ಛಾಯಾಚಿತ್ರಪ್ರತಿ
(ಕೆಳದಿ ವಸ್ತುಸಂಗ್ರಹಾಲಯದ ಕೃಪೆ)

ಸರ್ವಜ್ಞ ವಚನಗಳು

ಭಾಗ ೧

(ಕಿಟೆಲ್ ಕೋಶದ ಸರ್ವಜ್ಞವಚನಗಳು)

ಸರ್ವಜ್ಞ ವಚನಗಳು

ಅಕ್ಕಸಾಲೆ[1]ಯನೂರಿ[1]ಗೊಕ್ಕಲೆಂದೆನಬೇಡ
ಬೆಕ್ಕು ಬಂದಿಲಿಯ ಹಿಡಿವಂತೆ । [2]ಊರಿಗೆ[2]
[3]ರಕ್ಕಸನಹನು[3] ಸರ್ವಜ್ಞ * ೧

[ಅಕ್ಕಸಾಲೆ 6 **

---

* ಅಕ್ಕಸಾಲೆಯನ್ ಊರಿಗೊಕ್ಕಲ್ ಎನ್ದೆನಬೇಡ
ಬೆಕ್ಕುಬನ್ದಿಲಿಯ ಹಿಡಿವನ್ತೆ; ಊರಿಂಗೆ ರಕ್ಕಸನಹನು

ಇದು ಕಿಟೆಲ್ ನಿಘಂಟುವಿನ ಪಾಠ. ಕಿಟೆಲ್ ಅನುನಾಸಿಕ ಸಹಿತ ಸಂಯುಕ್ತಾಕ್ಷರವನ್ನು ಉಪಯೋಗಿಸುವ ಕಡೆಯಲ್ಲೆಲ್ಲ ನಾವು ಈಗಿನ ರೂಢಿಯಂತೆ ಬಿಂದುವನ್ನು ಉಪಯೋಗಿಸುವೆವು; ಮತ್ತು ಅವರು ಸಂಧಿಯನ್ನು ಬಿಡಿಸಿ ಬರೆದಿರುವ ಕಡೆಗಳಲ್ಲಿ ಸಂಧಿಯನ್ನು ಈಗಿನ ರೂಢಿಯಂತೆ ಕೂಡಿಸಿ ಬರೆಯಲಾಗುವುದು. (ಉದಾ., 'ಒಕ್ಕಲ್ ಎನ್ದೆನಬೇಡ' ಎಂದಿರುವುದನ್ನು 'ಒಕ್ಕಲೆಂದೆನಬೇಡ' ಎಂದು ಬರೆಯಲಾಗುವುದು.

ಮುಂದೆಲ್ಲ ಕಿಟೆಲ್ ಪಾಠವನ್ನು ನಮ್ಮ ನಿಲುವಿಗೆ ಅನುಗುಣವಾಗಿ ಛಂದಸ್ಸಿನ ದೃಷ್ಟಿಯಿಂದ ಮಾತ್ರ ತಿದ್ದುಪಾಟು ಮಾಡಿ, ತಿದ್ದುಪಾಟು ಮಾಡಿದ ಪಾಠವನ್ನು ಮೇಲುಗಡೆ ಈ ಗ್ರಂಥದ ಪಾಠವಾಗಿ (ಎಂದರೆ ಪರಿಷ್ಕೃತ ಕಿಟೆಲ್ ಪಾಠವಾಗಿ) ಕೊಟ್ಟು, ಕಿಟೆಲ್ ಕೋಶದ ಮೂಲ ಪಾಠವನ್ನು ಅಡಿಟಿಪ್ಪಣಿಯಲ್ಲಿ ಕಾಣಿಸಲಾಗುವುದು.

** ಪದ್ಯ ಅಥವಾ ಪದ್ಯಖಂಡವನ್ನು ಕಿಟೆಲ್ಲರು ಕೋಶದಲ್ಲಿ ಯಾವ ಪದಕ್ಕೆ ಪ್ರಯೋಗವಾಗಿ ಕೊಟ್ಟಿದ್ದಾರೆ ಎಂಬುದನ್ನು ನಿರ್ದೇಶಿಸುವ ಸಲುವಾಗಿ ಆ ಪದವನ್ನು ಪದ್ಯದಡಿಯ ಬಲಪಕ್ಕದಲ್ಲಿ ಉಲ್ಲೇಖಿಸಲಾಗುವುದು. ಅಂಕಿ ನಿಘಂಟುವಿನ ಪುಟಸಂಖ್ಯೆಯನ್ನು ಸೂಚಿಸುತ್ತದೆ.

ಪದ್ಯ ೧: 1 ಒಂದೂರಿ (ಪ. 905). 2 ಊರಿಂಗೆ (ಕಿ) [ಮೊದಲ ಪಂಕ್ತಿಯಲ್ಲಿ 'ಊರಿಗೆ' ಎಂದೇ ಇದ್ದು, ಎರಡನೆಯ ಸಾಲಿನಲ್ಲಿ 'ಊರಿಂಗೆ' ಎಂದಾಗಲು ಕಾರಣ ಏನು? ೪ ಮಾತ್ರೆಯ ವಿಷ್ಣುಗಣವನ್ನು ೫ ಮಾತ್ರೆಗಳ ಗಣವಾಗಿ ಮಾರ್ಪಡಿಸಲು ಕಿ. ಪಾಠದ ಪ್ರತಿಕಾರನೊಬ್ಬ ಮಾಡಿದ ಪ್ರಯತ್ನ ಎಂಬುದು ಸ್ಪಷ್ಟ.] 2+3 ಊರಿಗೊಂದೊಕ್ಕಲೆ ಮಾರಿ (ಪ). 3 ರಕ್ಕಸನು ತಾನು (ಉ*a* 1283), ರಕ್ಕಸನು ನೋಡ (ಉ 1410). [ಟಿಪ್ಪಣಿ: 'ಪರಮಾರ್ಥ'ದ 'ಅಕ್ಕಸಾಲೆ ಒಂದೂರಿ' ಎಂಬ ಮೊದಲ ಎರಡು ಗಣಗಳು ಪಂಚಮಾತ್ರಾಲಯಕ್ಕಾಗಲಿ ಅಂಶಲಯಕ್ಕಾಗಲಿ ಕೂಡಿಬರುವುದಿಲ್ಲ. ಇದು ಕವಿಪಾಠ ಇರಲಾರದು; ಕಿ. ಪಾಠ ಸರಿಯಿದೆ.]

ಅಲ್ಲಿ [1]ಅರಿಸಿನವುಂಟು[1] ಬೆಲ್ಲ [2]ಬಳಯೆಲೆಯುಂಟು[2]
[3]ಒಳ್ಳೆ ಹಲಸುಂಟು ಮೆಲ್ಲಲಿಕೆ[3] | ಮಲೆನಾಡ
ಅಲ್ಲೇನ್ನಬಹುದೆ ಸರ್ವಜ್ಞ ೨

[ಅಲ್ಲ (2) 115, (3) 137

ಅಳಿಯಾಸೆ [1]ಹೆಪ್ಪಿಗೆ[1] ಮಳೆಯಾಸೆ [2]ಸಕಲರ್ಗೆ[2]
ಬಲೆಯಾಸೆ [3]ಮೀನ ಹಿಡಿವವಗೆ[3] | ಹಾದರಕೆ
[4]ಸುಳಿದಾಟದಾಸೆ[4] ಸರ್ವಜ್ಞ ೩

[ಅಳಿ (3) 137

ಅಳಿಯೂರ ತಳವಾರ [1]ಕಳೆಯುಳ್ಳ ಸೂಳೆ[1]
[2]ಪೊಳಲ[2] ಸುಂಕಿಗ ಹಳೆನಾಯಿ | ಯಾಚಕ
[3]ತೊಲಗುವರಲ್ಲ[3] ಸರ್ವಜ್ಞ ೪

[ಅೞಿ 139

---

೨ 1 ವರಿಷಿಣ (ಕಿ-ಷಿಣ ಉಂಟು, ಉ 1623). 2 ಗೊಣಸುಗಳುಂಟು ಪ 784). 3 —ನೆಲ್ಲಲ್ಕೆ (ಉ*a* 1486 ಉ); ನೆಲ್ಲೋಗರುಂಟು ನೆಳಲುಂಟು (ಪ). (ಕಿಟೆಲ್, ಉತ್ತಂಗಿ, ವಿರ್ತ್ ಈ ಮೂವರ ಪಾಠಗಳಲ್ಲಿ ಸಾಮ್ಯ ಇರುವುದು ಗಮನಾರ್ಹ.)

ನೆಲ್ಲು = ಬತ್ತ. ನೆಲ್ಲೋಗರ = ಬತ್ತದ ಅನ್ನ ಎಂದರೆ ಸಮಂಜಸವಾದ ಅರ್ಥ ಹೊರಡುವುದಿಲ್ಲ. ಆದ್ದರಿಂದ ಪ. ಪಾಠ ಕವಿಪಾಠ ಇರಲಾರದು.

೩ 1 ಹೆಪ್ಪಿಂಗೆ (ಕಿ. ಉ*a* 1619, ಉ 1777). 2 ಸಕಲಂಗೆ (ಕಿ. ಉ). 3 ಮೀನು ಹಿಡಿವಂಗೆ (ಕಿ. ಉ*a*) 4 ಸುಳಿವುದೊಂದಾಸೆ (ಪ 652). [3ನೆಯ ಪದ್ಯದ ಪಾಠ ಕಿ. ಮತ್ತು ವಿರ್ತ್ ಅವರಲ್ಲಿ ಒಂದೇ ರೀತಿ]

೪ 1 ಕಳೆಯುಳ್ಳ ಸೂಳೆಯು (ಕಿ. ಉ 1513); ಕಳೆದ ಹರೆಯದ ಸೂಳೆ (ಪ 721). 2 ಹೊಳಲ (ಉ ಪ) 3 ತೊಲಗುವರೆ? ಇಲ್ಲ (ಕಿ), ತೊಲಗುವವರಲ್ಲ (ಉ), ತೊಳಲದೊಡಿಲ್ಲ (ಪ).

ಟಿಪ್ಪಣಿ: ಅೞಿಯೂರು, ಪೊೞಲು, ಹೞಿನಾಯಿ—ಹೀಗೆ ಕಿಟ್ಟೆಲ್ಲರು ಉದ್ದಕ್ಕೂ 'ೞ'ಕಾರ ಪ್ರಯೋಗ ಮಾಡಿದ್ದಾರೆ. 13ನೆಯ ಶತಮಾನದ ವೇಳೆಗೇ ೞಕಾರದ ಪ್ರಯೋಗ ರೂಢಿ ತಪ್ಪುತ್ತಿತ್ತು. ಕಿಟ್ಟೆಲ್ಲರು ೞಕಾರ ಪ್ರಯೋಗವನ್ನು ಸೇರಿಸಿರಬೇಕು. ಪ.ದಲ್ಲಿ ೞಕಾರ ಪ್ರಯೋಗ ಇಲ್ಲ; ಶಕಟರೇಫದ ಪ್ರಯೋಗ ಉಂಟು (ಉದಾ., ತಳವಾಱ).

'ಅೞಿಯೂರ್', A ruined village (ಹಾಳುಬಿದ್ದ ಹಳ್ಳಿ) ('My.') ಮೈಸೂರು ಕಡೆಯ ಪ್ರಯೋಗ ಎಂದು ಕಿ. ನಿಘಂಟು.

ಆಕೆ[1]ಯು[1] ಕಂಡು ಮನೆಯಾಕೆ[2]ಯ[2] [3]ಮರೆದರೆ[3]
[4]ಹಾಕಿದ ಉಂಕೆ[4] ಹರಿದಂತೆ । [5]ಮನೆಯೊಳಿ
ದ್ದಾಕೆ[5] ತಾ ಕೆಡುಗು ಸರ್ವಜ್ಞ ೫

[ಆಕೆ 143, ಉಂಕಿ(ಕೆ) 213

ಆನೆ [1]ಬೀದಿಲಿ ಬರೆ[1] [2]ಶೋನs[2] ಬೊಗಳುವುದು
[3]ಶೋನ[3] [4]ನಂತಾನೆ[4] [5]ಬೊಗಳಲು[5] । [6]ಆನೆಯ[6]
[7]ಮಾನವೆ[7] ಹಾನಿ ಸರ್ವಜ್ಞ* ೬

[ಆನೆ 157, ಬರ್ 1080

ಆಲಕ್ಕೆ ಹೂವಿಲ್ಲ ಸಾಲಕ್ಕೆ ಕೊನೆಯಿಲ್ಲ,
ಜಾಲಿಯ ಗಿಡಕೆ [1][ನೆರಳಿಲ್ಲ][1] । [2]ದೇವರು[2]
[3]ಸೂಳೆಗೆ ಇಲ್ಲ[3] ಸರ್ವಜ್ಞ ೭

ಆಲ 167-168 ಸಾಲ 1548 ಸೂಳೆ 1586

[1][ಒಳ್ಳಿದ]ನಿರದೂರು[1] ಕಳ್ಳ[2]ನೊಡನಾಟ[2]
ಸುಳ್ಳನ ಮಾತು ಇವು ಮೂರು । ಕೆಸರೊ[3]ಳು[3]
ಮುಳ್ಳು ತುಳಿದಂತೆ ಸರ್ವಜ್ಞ ೮

[ಇದ್ 187 ಊರು 257 ಕಳ್ಳ 396 ಕೆಸರು 475

---

೫ 1+2 ಯುನು (ಕಿ), (ಉ 1788). 3 ಮರೆದಿಹರೆ (ಉ). 4 ಊಕೆಯ ನೇಣು (ಪ 613). 5 ಮನೆಯಲಿದ್ದರ್ಕೆಯು (ಪ).

ಟಿಪ್ಪಣಿ: ಕಿ.ನಲ್ಲಿ, ಪ.ದಲ್ಲಿ, ಪ.ಜಿ³, ಹಜಿ³ ಎಂದು ಐಕಾರ ಪ್ರಯೋಗ. ಉಂಕೆ (= ಉಂಕಿ, ಊಕೆ) (< ಉಡಿಕೆ ? ಕಿ) The warp spread and starched (ನೆಯ್ಗೆಯಲ್ಲಿಯ ಹಾಸು).

೬ 1 ಬೀದಿಯಲಿ ಬರೆ (ಕಿ), ಬೀಡಿಲಿ ಬರಲು (ಉ 1549). 2 ಶ್ವಾನ ತಾ (ಉ). 3 ಶ್ವಾನ (ಉ). 4 ನನ್ತೆ ಆನೆ (ಕಿ). 5 ಬೊಗಳೆ (ಕಿ), ಬೊಗಳಿದರೆ (ಉ), 6 ಅಭಿಮಾನವೆ (ಕಿ). 7 ಮಾನವೇ (ಉ).

* ಆನೆ ಬರುತಿರಲದಕೆ । ಶ್ವಾನನು ಬಗುಳಲಾ
ಶ್ವಾನನಿಗೆ ಆನೆ ಗಜಱಿದೊಡೆ ಆನೆಗಭಿ
ಮಾನದ ಹಾನಿ ಪರಮಾರ್ಥ (192)

೭ 1 ಗಂಧನಿಲ್ಲ, ಗನ್ದಿಲ್ಲ (ಕಿ), ಗಂಧಿಲ್ಲ (ಉ 1873). 2 ದೇವನು (ಉ). ದೇವನಾ (ಉ*a* 1711). 10 ಸೂಳೆಗಿಲ್ಲೆಂದ (ಉ) (ಇದು ಪ.ದಲ್ಲಿಲ್ಲ)

೮ 1 ಒಳ್ಳಿಯನ್ ಇರದ ಊರು (ಕಿ), ಒಳ್ಳಿಯನು ಇರದೂರು (ಉ 1186). 2 ಕಳ್ಳನ ಒಡನಾಟವು(ಕಿ), ಕಳ್ಳನೊಡನಾಟವು (ಉ). 3ಳಗೆ(ಕಿ. ಉ). (ಇದು ಪ.ದಲ್ಲಿಲ್ಲ).

ತಪ್ಪ ಸಾಧಿ[1]ಸುವನಲ್ಲಿಪ್ಪನೆ ಕಡುಹೆಡ್ಡ[1]
[2]ಸರ್ಪನ[2] ಹೆಡೆಯ [3]ನೆರಳಲ್ಲಿ[3] | [4]ಸೇರಿದ[4]
ಕಪ್ಪೆ[5]ಯಂತಕ್ಕು[5] ಸರ್ವಜ್ಞ ೯

| ಇಪ್ಪ 192 ಉಙಿ 246 ತಪ್ಪು 691
ಕಡುಹೆಡ್ಡ 345 ಕಪ್ಪೆ 364 ನೆರಳು 905 ಸಾಧಿಸು 1540

ಸಂನ್ಯಾಸ ತನಗೆ[1]ಯೆಂಬ[1]ನ್ಯಾಯ [2]ನುಡಿಯೇಕೆ[2]
ಉನ್ನತ ದೇವರಿರವರಿಯ | [3]ತನ್ನೊಡ[3]
[4]ಲನ್ಯಾಯದಿರವು[4] ಸರ್ವಜ್ಞ ೧೦

[ಇರವು 194

ಜ್ಞಾನ[1]ವುಳ್ಳವನೊಡಲು[1] [2]ಭಾನುವಿನ ತೆರನು[2]
ಜ್ಞಾನವಿಲ್ಲದನ [3]ಕಾಯವು[3] ಹಾಳೂರ
[4]ಸ್ಥಾನದಿಂ ಕಡೆಯೆ[4] ಸರ್ವಜ್ಞ ೧೧

| ಇಲ್ 198 ಇಹ 202 ಒಡಲು 302 ಕಡೆ 346 ಹಾಳು 1654

ಉದ್ದುರುಟು [1]ಮಾತಾಡಿ[1] [2]ಇದ್ದುದ[2] ಹೋಗಾಡಿ
[3]ಉದ್ದನೆ[3] ಮರದ ತುದಿ[4]ಯೇರಿ[4] | [5]ಕಯ್ತಪ್ಪಿ[5]
ಬಿದ್ದು ಸತ್ತಂತೆ ಸರ್ವಜ್ಞ ೧೨

[ಉದ್ದ 227 ತಪ್ಪಿಸು 691 ಹೋಗು 1700

---

೯ 1 ಸುವನಲ್ಲಿ ಇಪ್ಪವನೆ—(ಕಿ), —ಪ ನೃಪನೊಳಿಪ್ಪವನೆ—(ಉ 777),—ಪ ನೃಪನೊಳಿಪ್ಪವನವನೆಗ್ಗ (ಪ 564). 2 ಸರ್ಪನುರೆ (ಉ). 3 ನೆಳಲೆಂದು (ಉ ಪ). 4 ಸಾರಿಪ (ಉ ಪ). 5 ಯನ್ತೆ ಆಕ್ಕು (ಕಿ).

೧೦ 1 ಯೆಮ್ಬುವ—(ಕಿ), ಗೆಂಬ ಅನ್ಯಾಯ (ಉ 571), ಗೆಂಬುದನ್ಯಾಯದ (ಪ 227). 2 ನುಡಿಯಾಕೆ (ಕಿ), ನುಡಿಯು (ಪ). 3 ತನ್ನೊಡಲ (ಕಿ), ದಪನೊಡಲ (ಉ*a* ಪ). 4 ದನ್ಯಾಯದಿರವು (ಕಿ. ಉ), ನನ್ಯಾಯದೆ ಹೊರೆವ (ಪ).

೧೧ 1 ಉಳ್ಳವನ ಒಡಲು (ಕಿ. ಪ 160). 2 —ತೆರನಿಹುದು (ಕಿ. ಉ*a* 361), ಭಾನು ಮಂಡಲದಂತೆ (ಉ 427), ಭಾನುವಿನಂತಿಹುದು (ಪ). 3 ಬರಿಯೊಡಲು (ಉ), ಬರಿಕಾಯ (ಉ. ಪ). 4 ಸ್ಥಾನದಂತಿಕ್ಕು (ಉ), ಶ್ವಾನದಂತಿಹುದು (ಪ).

೧೨ 1 ಮಾತು ಆಡಿ (ಕಿ) 2 ಇಪ್ಪವನು (ಕಿ), ಇದ್ದುದನು (ಉ 1233). 3 ಉದ್ದ (ಕಿ), ಉದ್ದನಾ (ಉ*a* 1123), ಉದ್ದನ (ಉ). 4 ತುದಿ ಮನೇಱಿ (ಕಿ), ತುದಿಗೇರಿ (ಉ). 5 ತಲೆಮೂರಿ (ಉ). (ಇದು ಪ. ದಲ್ಲಿಲ್ಲ)

ಉಳ್ಳಲ್ಲಿ [1]ಉಣಲಿಲ್ಲ[1] ಉಳ್ಳಲ್ಲಿ [2]ಉಡಲಿಲ್ಲ
ಉಳ್ಳಲ್ಲಿ ದಾನ [3]ಕೊಡದವನ | ಒಡವೆ[3]
[4]ಕಳ್ಳಗೆ[4] ನೃಪಗೆ ಸರ್ವಜ್ಞ ೧೩

[ಉಳ್ಳ 251

ಪಡಿಯಾಸೆ ಹರದಂಗೆ [1]ನುಡಿ[1]ಯಾಸೆ [2]ವೇಶ್ಯೆಗೆ[2]
ಜೆಡೆಯಾಸೆ ಬೂದಿ ಗೊರ[3]ವಗೆ[3] | ಹಾದರಕೆ
ಎಡೆಯಾಟದಾಸೆ ಸರ್ವಜ್ಞ ೧೪

[ಎಡೆ 267 ಪಡಿ 929

[1]ಆದಿಯ[1] ದೈವ[2]ವ[2] ಭೇದಿ[3]ಸಲರಿಯದೆ[3]
ಕಾದಿ[4]ಯ[4] ಕಲ್ಲಿ[5]ಗೆಡೆ[5] ಮಾಡಿ | ನಮಿಸು[6]ವ[6]
ಮಾದಿಗರ ನೋಡು ಸರ್ವಜ್ಞ ೧೫

ಎಡೆ 268 ಕಲ್ಲು 387

ಉಣ್ಣೆ ಕೆಚ್ಚಲೊಳಿರ್ದು [1]ಉಣ್ಣದು[1] ನೊರೆ[2]ಹಾಲ[2]
ಪುಣ್ಯವ [3]ಮಾಡಿ ಉಣಲೊಲ್ಲ|ದವನಿರವು[3]
ಉಣ್ಣೆ[4]ಗು[4] [5]ಕಷ್ಟ[5] ಸರ್ವಜ್ಞ ೧೬

[ಉಣ್ಣೆ 220

ತೆರೆದ ಕೆಂಡವ ಮೆಟ್ಟಿ ಮರುಗು[1]ವ[1] ತೆರನಂತೆ
[2]ಅರಿಯದವರ[2] ಕೂಟ [3]ಬರೆ[3]ಕೂಟ | ತನ್ನ[4]ನೆ
ಇ[4]ರಿದುಕೊಂಡಂತೆ ಸರ್ವಜ್ಞ ೧೭

[ಇರಿ 196 ಕೂಟ 455 ತೆರೆ 744 ಮೆಟ್ಟು 1289

---

೧೩ 1 ಉಣಲೊಲ್ಲ (ಪ 365). 2 ಉಡಲಿಲ್ಲ (ಪ). 3 —ಒಡವೆಯು (ಕಿ), —ಒಡವೆಯದು (ಉa 603), ಕೊಡಲೊಲ್ಲದವನೊಡವೆ (ಉ 683), ಗೊಡಲೊಲ್ಲನವನೊಡವೆ (ಪ). 4 ಕಳ್ಳಂಗೆ (ಉa).

೧೪ 1 ಮಡಿ (ಉ 1778), ಪ (653). 2 ವೇಶ್ಯೆಗಂ (ಉ 1620), ವೇಸಿಗೆ (ಪ). 3 ವಂಗೆ (ಉa ಪ).

೧೫ 1 ಆದಿಯೂ (ಕಿ), ಆದಿ (ಉ 198). 2 ವನು ತಾ (ಉa). 3 ಸಲಿಕೆ ಅರಿಯದ (ಕಿ), ಸಲಿಕರಿಯದಲೆ (ಉa). 4 ಯಾ (ಕಿ. ಉa 159). 5 ಗೆ ಎಡೆ (ಕಿ). 6 ವಾ (ಉ). (ಇದು ಪ.ದಲ್ಲಿಲ್ಲ).

೧೬ 1 ಉಣ್ಣದದು (ಕಿ ಉ 660). 2 ವಾಲ (ಉa ಪ 367). 3 ಮಾಡನುಣ-ಲೊಲ್ಲನವನಿರವು (ಪ). 4 ಯಿಂ (ಪ). 5 ಕಷ್ಟಂ (ಕಿ).

೧೭ 1 ವಾ (ಉa 753). 2 ದುರುಳರ (ಉ 839), ದುರುಳರಾ (ಉa). 3 ಬರಿ (ಉ). 4 –ತಾನಿ–(ಉ).

ನಚ್ಚಿದಂತರಸಿ[1]ನ[1] ಇಚ್ಛೆ[2]ಯಂತಿ[2]ರು[3]ವುದು[3]
[4]ಒಚ್ಚೊತ್ತು[4] ತಪ್ಪಿ [5]ನಡೆದ[5]ರೆ[4] | [6]ಹೊತ್ತೇರಿ[6]
[7]ಕಿಚ್ಚು[7] ಕಾವಂತೆ ಸರ್ವಜ್ಞ ೧೮

[ಒಚ್ 298-90 ಹೊತ್ತು 1690

ಬಲ್ಲ[1]ವರೊಡನಾಟ[1] ಬೆಲ್ಲ[2]ವ[2] ಮೆದ್ದಂತೆ
ಅಲ್ಲ[3]ಹುದೆಂಬ[3] [4]ಜಾಣನ | ಒಡನಾಟ[4]
ಕಲ್ಲು ಹಾದಂತೆ ಸರ್ವಜ್ಞ ೧೯

[ಒಡನ್ 301 ಕಲ್ಲು 387 ಹಾಯು 1649

ಒಳ್ಳಿದ[1]ರೊಡನಿರ್ದು[1] ಕಳ್ಳನೊಳ್ಳಿದನಕ್ಕು
ಒಳ್ಳಿ[2]ದ[2] ಕಳ್ಳ[3]ರೊಡನಾಡೆ[3] | ಅವ ಶುದ್ಧ
ಕಳ್ಳ[4]ನೆ ಅಕ್ಕು[4] ಸರ್ವಜ್ಞ ೨೦

[ಒಡನ್ 301 ಒಳ್ಳಿದ 320 ಕಳ್ಳ 396 ಶುದ್ಧ 1461

ಅಪಮಾನದೂಟದಿಂದುಪವಾಸ[1]ವೇ[1] ಲೇಸು
ನೃಪ[2]ನಯ್ದೆ[2] ಬಡಿವ [3]ಒಡ್ಡೋಲಗ|ಕಿಂತ[3]
ತಪ[4]ವೆ[4] [5]ಲೇಸೆಂದ[5] ಸರ್ವಜ್ಞ ೨೧

[ಒಡ್ಡು 304

ನಲ್ಲ[1]ನೊಲ್ಲಿ ಒಲ್ಲ[1] ನೆಲ್ಲಕ್ಕಿ ಬೋನೊಲ್ಲ
[2]ಅಲ್ಲನೆ[2] ಒಲ್ಲ ಮೊಸರೊಲ್ಲ | ಯಾಕೊಲ್ಲ
[3]ಇಲ್ಲ ಅದಕೊಲ್ಲ[3] ಸರ್ವಜ್ಞ ೨೨

[ಒಲ್ 315

---

೧೮ 1 ನಾ (ಉ 648) 2 -ಯಂಲಿ- (ಪ 547). 3 -ವುದಡು (ಉ 730). 4 ಅಮು ವ್ರೊಚ್ಚತ್ತು (ಕಿ). 5 ನಡೆವಿಹರೆ (ಉ), ನಡೆವೊಡೆ (ಪ). 6 ಹೊತ್ತಾರೆ (ಉ). 7 ಕಿಚ್ಚ (ಪ).

೧೯ 1 -ವರ ಒಡನಾಟ (ಉ 810) 2 —ಬೆಲ್ಲವನು (ಕಿ ಉ). 3 ದಹುದು ಎಂಬ (ಕಿ), ದಹುದೆಂಬ (ಉ). 4 ಆ ಜಾಣನ— (ಕಿ), ಅಜ್ಞಾನಿಯೊಡನಾಟ (ಉ). [ಇದು ಪ.ದಲ್ಲಿಲ್ಲ].

೨೦ 1 ರ ಒಡನಾಡಿ (ಉ 823), ರ ಒಡನಿರ್ದು (ಪ 273) 2 ದನು (ಉ). 3 ರೊಡನಾಡಿ (ಉ), ನೊಡನಾಡೆ (ಪ). 4 ತಾನಕ್ಕು (ಉ), ನೇ ಅಕ್ಕು (ಪ).

೨೧ 1 ವಿರ (ಉ 774), ಕರ (ಪ 562). 2 ನ್ ಅಯ್ದು (ಕಿ), ನೆದ್ದು (ಪ). 3 ಒಡ್ಡೋಲಗದಿಂದವೆ (ಉ), ಆಸಿನೋಲಗದಿಂದ (ಪ). 4 ವೇ (ಕಿ), ವು (ಉ), ವಿರಲು (ಪ). [ಇದು ಪೂರ್ತಿಯಾಗಿ ವಿರ್ತ ಪಾಠ-808. ನೋಡಿ ಪ 562].

೨೨ 1-ನ್ ಒಲ್ಲೀ- (ಕಿ), ಒಲ್ಲಿಯುನೊಲ್ಲ (ಉ 1518). 2 ಅಲ್ಲವನು (ಉ). 3-ಅದಕೊಳ್ಳ್ಳಿ (ಕಿ), ಇಲ್ಲದಕೆ ಒಲ್ಲ (ಉa 1381). [ಇದು ಪ.ದಲ್ಲಿಲ್ಲ].

ಓದಿ ಬೂದಿಯ ಪೂಸಿ ತೇದು ಕಾವಿಯ ಹೊದೆದು
ಹೋದಾತ ಯೋಗಿ [1]ಎ[1]ನಬೇಡ | ಇಂದ್ರಿಯವ
ಕಾದಾತ ಯೋಗಿ ಸರ್ವಜ್ಞ ೨೩

[ಓದು 323 ಕಾವಿ 415 ಪೂಸು 1007

ಒಕ್ಕಲಿಗ[1]ನೋ[1]ದಲ್ಲ ಬೆಕ್ಕು ಹೆಬ್ಬುಲಿಯಲ್ಲ
ಎಕ್ಕೆ[2]ಯ[2] ಗಿಡವು ಬನವಲ್ಲ | ಇವು ಮೂರು
ಲೆಕ್ಕದೊಳಗಲ್ಲ ಸರ್ವಜ್ಞ ೨೪

[ಓದು 323, ಹೆಬ್ (ಹೆಬ್ಬುಲಿ) 1681

ಸುಂಕಿ[1]ಗ[1] [2]ಹುರಿ[ಹು?]ಲು[2] ಬಿಂ[ಕದ] ಬೆಲೆವೆಣ್ಣು
ಕಂಕಿ[3]ಯು[3] ಸುಂಕ ನಸುಗುನ್ನಿ | [4]ಈ ಆರು[4]
[5]ಸೊಂ[5]ಕಿವರೆ ಬಿಡವು ಸರ್ವಜ್ಞ* ೨೫

[ಕಂಕಿ 332 ಬೆಲೆ 1141 ಹುರಿ 1669

ಸಜ್ಜನರು [1]ಸತ್ತರೆ[1] ನಿರ್ಜರರು ಮರುಗುವರು
ದೌರ್ಜನ್ಯಕಾರಿ [2]ಸತ್ತರೆ[2] | [3]ದೇಹ[3]
ಕಜ್ಜಿ [4]ಹರಿದಂತೆ[4] ಸರ್ವಜ್ಞ ೨೬

[ಕಜ್ಜಿ 334 ಸಾಯ್ 1544

ಮನವ ಘನ[1]ದಿ[1] ಕಟ್ಟಿ [2]ಘನವ[2] ಮನ[3]ದಿ[3] ಕಟ್ಟಿ*
[4][ಮನವದು] ಪಾಪಕೆಳಸದ[4] | ಯೋಗಿಗೆ
ವನವಾಸ [5]ಯಾಕೆ[5] ಸರ್ವಜ್ಞ ೨೭

[ಕಟ್ಟು 383, ಯೋಗಿ 1323

---

೨೩ 1 ಯು (ಉ*a* 464). [ಇದು ಪ.ದಲ್ಲಿಲ್ಲ].

೨೪ 1 ನ ಓ (ಕಿ), [ಓದಲ್ಲ *i.e* ಓದಲ್ಲದದು (ಓದು ಅಲ್ಲದ್ದು)–ಕಿಟೆಲ್ಲರ ವಿವರಣೆ]. 2 ಯಾ (ಉ*a* 1355).

೨೫ 1 ಗನು (ಕಿ ಉ 1500). 2 ಹುರಿಹಲ್ಲು (ಉ), ಹುಲಿ ಹಾವು (ಉ*a* 1362). 3 ಯು (ಉ). 4 ಇವು ಏಳು (ಉ*a*).

* ಸುಂಕಿಗನು ಹುಲಿ ಹಾವು | ಬಿಂಕದ ಬೆಲೆವೆಣ್ಣು
ಹಂಕಿಣಿಯು ಜೋಳ ನಸುಗುನ್ನಿ ಇವು ಆರು
ಸೋಂಕಿದರ ತಿಂ(ಬೊ) ಪರಮಾರ್ಥ (873)

೨೬ 1 ಸಾಯಲೊಡೆ (ಕಿ ಉ 814) 2 ಸತ್ತರೇನ್ (ಕಿ). 3 ಹತ್ತಿರ್ದ (ಉ). 4 ಹೋದಂತೆ (ಉ*a* 729).

೨೭ 1 ಮತ್ತು 3 ದಲಿ (ಕಿ ಪ 293). 2 ನೆನಹ (ಪ). 4 ಮನವದ್ ಅದುವೆ(= ಮನವದುವೆ) (ಕಿ), ಮನವನ್ನ ಪಾಪಕೆಳಸದ(ಉ 591 ಪ). 5 ವೇ (ಉ ಪ).

* ನೆನಹ ಮನದಲಿ ಕಟ್ಟಿ ಮನವ ಘನದಲಿ ಕಟ್ಟಿ (ಉ 591).

ಆಡೆಂ[1]ದರಾಡದು[1] [2]ಆಡಮರನೇರುವುದು[2]
[3]ಕೂಡದೆ[3] ಕೊಂಕಿ ನಡೆವುದು । [4]ಕಡಿದರೆ[4]
[5]ಬಾಡದು ಅದು[5] ಸರ್ವಜ್ಞ ೨೮

[ಕಡಿ 343 ಕೂಡು 456

ಜಡೆಯ ಕಟ್ಟಲುಬಹುದು ಕಡವ[1]ಸವನು[1]ಡಬಹುದು
ಬಿಡದೆ ದೇಗುಲದ[2]ಲಿ[2]ರಬಹುದು । [3]ಕರಣವ[3]
[4]ತಡೆಯುವುದರಿದು[4] ಸರ್ವಜ್ಞ ೨೯

[ಕಡವಸ 342

ಗುಡಿಯ ಬೋದಿಗೆ ಕಲ್ಲು ನಡುರಂಗ ತಾ ಕಲ್ಲು
ಕಡೆ ಮೂರ ಸೆರಗು ತಾ ಕಲ್ಲು । ವರ[1]ವನು[1]
ಕೊಡುವಾತ ಬೇರೆ ಸರ್ವಜ್ಞ ೩೦

[ಕಡೆ 346, ಕಲ್ಲು 387 ಗುಡಿ 549 ನಡು 836

[1]ಮಿಂಡಿ[1]ಯ ಗಂಡ ತಾ ದಂಡಿಗೆ [2]ಹೋದರೆ[2]
[3]ಹಿಂಡಿ[3] ಹೆಡಿಗೆಗೆ ಕೋಣ[4]ನ[4] । ತಂದು ಕಣು–
ಗಂಡು ಹೊಡೆದಂತೆ ಸರ್ವಜ್ಞ ೩೧

[ಕನ್ನಡಿ 36

ಕುರಿ [1]ಕಬ್ಬಿನೊಳಹೊಕ್ಕು[1] ಅರಿವು[2]ದೆ[2] ತನಿರಸವ
ಹೊರಗಣ ಸೋಗೆಯುಗಿವಂತೆ । [3]ಜಾಣಿನ[3]
[4]ಕುರುಹು ಬೇರೆ[4] ಸರ್ವಜ್ಞ ೩೨

[ಕಬ್ಬಿ 365 ಕುರಿ 447 ಜಾಣ್ 645 ತನಿ 687 ಹೊಱಗು 1695

---

೨೮ 1 ರೆ ಆಡದು ಅದು (ಕಿ), ದರಾಡದದು (ಉ 2031). 2 ಮಾಡವನೇಱುವುದು (ಪ 47) 3 ಕೂಡದಲೆ (ಉ*a* 1863), ಕೋಡದೆ (ಪ 447). 4 ಕಡಿದಿಹರೆ (ಉ*a*), ಕಡಿದೊಡೆ (ಪ). 5 ಅದು ಬಾಡದು (ಕಿ), ಬಾಡದದು ಪೇಳಿ (ಉ), ಬಾಡದು ನೋಡಿ (ಪ).

೨೯ 1 ದಿ (ಕಿ). 2 ದೊಳಿ (ಉ 530). ಕರಣಗಳ (ಉ ಪ 280). 4 ತಡೆಯುವುದೆ ಕಷ್ಟ (ಉ), ತಡೆದು ನಿಲಬಾರ (ಪ).

[ಕಿಟ್ಟೆಲರ ಪಾಠವೂ ವಿರ್ತ್ ಸಂಗ್ರಹದ ಪಾಠವೂ (953) ಒಂದೇ ಆಗಿದೆ (ಪ 280).]

೩೦ 1 ವನ್ನು (ಉ 166). 6 ನಾತಾ (ಕಿ).

೩೧ 1 ಮಿಂಡೆ (ಉ 1865). 2 ಹೋಗಿಹರೆ (ಉ). 3 ಹಿಂಡಿಯು (ಕಿ ಉ). 4 ನಂ (ಉ*a* 1703). [ಇದು ಪ.ದಲ್ಲಿಲ್ಲ].

೩೨. 1 ಕಬ್ಬಿನೊಳು ಹೊಕ್ಕು (ಕಿ ಉ 421 ಪ 233) 2 ದೇ (ಪ). 3 ಜ್ಞಾನದ (ಉ), ತತ್ವದ (ಪ) 4 —ಬೇರೆಂದ (ಉ), ಕುಱುಹನಾರಱಿಗು (ಪ).

ಹಿರಿದು [1]ಪಾಪ[1]ವ ಮಾಡಿ ಹರಿವ ನೀರೊಳು ಮುಳುಗೆ
[3]ಕರಗೋದೆ[3] ಪಾಪ ತಾ ಮುನ್ನ| ಮಾಡಿ[3]ದ್ದು[3]
ಎರೆಯು [4]ಕಲ್ಹೆಂಟೆ[4] ಸರ್ವಜ್ಞ * ೩೩

[ಕರಗು 370 ಕಲ್ 382 ನೀರ್ 889 ಮುಳುಗು 1281 ಹರಿ 1634

ಹಿರಿಯ ಬೊಮ್ಮನು ಕೆಂಚ [1]ಕಿರಿಯ[1] ಹ[2]ರಿ ಕರಿಗ[2]
ಪುರಹ[3]ರ[3] ಶುದ್ಧ ಧವ[4]ಳಕ| ನಿವರುಗಳು[4]
[5]ಸರಿಯೆ ದೈವಕ್ಕೆ[5] ಸರ್ವಜ್ಞ ೩೪

[ಕರಿಗ 374

[1]ಇಲ್ಲದ [1]ಕಾಲಕ್ಕೆ [2]ಹೊಲ್ಲನವ[2] ಜನ[3]ರಿಂ[3]ಗೆ
ಅಲ್ಲದ [4]ಗುಣದ[4] ಅ[5]ರಸಿಂ[5]ಗೆ| ಸಾಲಕ್ಕೆ
ಕಲ್ಲೆದೆ ಬೇಕು ಸರ್ವಜ್ಞ ೩೫

[ಕಲ್ಲು 388

ಅವಯವ[1]ವೆ[1]ಲ್ಲರಿಗೆ ಸವನಾಗಿ ಇರು[2]ತಿರೆ[2]
ಭವಿ ಭಕ್ತ ಶ್ವಪಚ ಶೂದ್ರ[3]ರು| ಎಂದೆಂಬ[3]
ಕವ[4]ನವೆ[4]ತ್ತಣದು ಸರ್ವಜ್ಞ ೩೬

[ಕವನ 388

---

೩೩ 1 ಕನ್ನವ (ಉ 928). 2 ಕರಗೊದೇ (ಕಿ), ಕರಗುವದೆ (ಉ). 3 ದದು (ಕಿ). 4 ಕಲ್ಹೆಂಟೆ (ಉ).

* ಹಿರಿದು ಪಾಪವ ಮಾಡಿ ಹರಿವರು ಗಂಗೆಗೆ
ಹರಿವ ನೀರಲ್ಲಿ ಕರಗುವೊಡೆ| ಆ ಪಾಪ
ಎರೆಯು ಮಣ್ಣಲ್ಲ ಪರಮಾರ್ಥ (512)

೩೪ 1 (ಹಿ)ರಿಯು (ಪ 65). 2 ತಾ ಹರಿ ಕರಿಗ (ಕಿ ಉ 219), ಹರಿ ತಾ ಕಜಿಃಕ (ಪ). 3 ರನು (ಕಿ ಉ ಪ). 5 ಹರಗೆ ಸರಿ ಯಾರು (ಪ).

ವಿರ್ತನ ಪಾಠ ಕಿಟೆಲ್ ಪಾಠದಂತಿರುವುದು ಗಮನಾರ್ಹ (ವಿರ್ತ್ 876). ಧವಳಕದ ಎಡೆಯಲ್ಲಿ ಧವಳಿಕ; ಇಷ್ಟೇ ವ್ಯತ್ಯಾಸ.

೩೫ 1 ಇಲ್ಲದಿಹ (ಉ 1407) 2 ತಾ—(ಕಿ), ಹೊಲ್ಲಹನು (ಉ), ಹೊಲ್ಲೆಹದ (ಪ 904). 3 ರಿ (ಪ). 4 ಗುಣವುಳ್ಳ (ಕಿ). 5 ಸಿ (ಪ). 6 ಕಲ್ಲೆದೆಯು ಬೇಕು (ಕಿ ಉ ಪ).

೩೬ 221 ಗಳ್ ಎ (ಕಿ), ಗಳೆ (ಉ 974). 2 ತಿರಲು (ಕಿ ಉ). 3 ರಿವರಿಂತೆಂಬ (ಉ). 4 ವ್ ಎ (ಕಿ). [ಇದು ಪ.ದಲ್ಲಿಲ್ಲ].

ಕಾಡೆಲ್ಲ ಕಸುಗಾಯಿ ನಾಡೆಲ್ಲ ಹೆಗ್ಗ[1]ಡ[1]
ಆಡಿದ ಮಾತು ನಿಜವಿಲ್ಲ । [2]ಮಲೆ[2]ನಾಡ
[3]ಕಾಡು ಸಾಕ್ಯು[3] ಸರ್ವಜ್ಞ * ೩೭

ಬಲ್ಲೆನೆಂದೆಂಬು[1]ವರೆಲ್ಲರೂ[1] ಹಿರಿಯರೆ
ಸೊಲ್ಲಿ[2]ಸಿ[2] [3]ಭೇದವರಿದೊಡೆ[3] । [4]ಕಿರಿಯ ತಾ[4]
ನೆಲ್ಲ[5]ರಿಗು[5] ಹಿರಿಯ ಸರ್ವಜ್ಞ ೩೮

[ಓಜು 422 ಹಿರಿ 1662

ತುಡು[1]ತಿನ್ನಿ[1] ಗಂಡ[2]ನ[2] ಬಡತನವ ಬಲ್ಲ[3]ಳೆ[3]
ಕಡ[4]ತಂದು ಇಕ್ಕಿ[4] ಕುದಿಸಿ । ತುಪ್ಪವ ಬೆರಸಿ
ಹೊಡೆದು [5]ಕುಳ್ತಿಹಳೊ[5] ಸರ್ವಜ್ಞ ೩೯

[ಕುದಸು 439

[1]ಕುಲಗೆಟ್ಟು[1] [2]ವರಚಿಂತೆಯೊಳಗಿರ್ಪರಂತಲ್ಲ[2]
ಕುಲಗೆಟ್ಟು ಶಿವನ ಮರೆಹೊ[3]ಕ್ಕ[3] । ಋಷಿಗಳು
[4]ಕುಲವಾದರಯ್ಯ[4] ಸರ್ವಜ್ಞ ೪೦

[ಕುಲ 448

[1]ಕೊಡುವರೆ[1] [2]ಕಯ್ಯಾರೆ[2] [3]ಎಡೆಯೇನು[3] ಮೂರ[4]ನೆ[4]
[5][ಎಡೆ]ಯಾಡಿಸಿ[5] ಕೊಡದ [6]ಲೋಭಿಯ[6] । [7]ಮಾತನು[7]
ಕೊಡಲಿ[8]ಯು[8] ಗಾಯ ಸರ್ವಜ್ಞ ೪೧

[ಕೆಯ್ 472

---

೩೭ 1 ಡವು (ಕಿ ಉ 1621). 2 ಮಲ (ಕಿ). 3 ಸಾಕೆಂದ (ಉ).
* ನಾಡೆಲ್ಲ ಹೆಗ್ಗಡೆ ಕಾಡೆಲ್ಲ ಕಸಕಿಲು
ಆಡಿದ ಮಾತೊಂದು ನೆಲೆಯಿಲ್ಲ । ಮಲೆವರ
ಕೂಡಬೇಡೆಂದ ಪರಮಾರ್ಥ (781)

೩೮ 1 ವವರೆಲ್ಲವರು (ಉ 383). ವರು ಎಲ್ಲರೂ (ಪ 190). 2 ನ (ಉ ಪ). 3 ಭೇದವನರಿವಡೆ (ಕಿ). 4 ಕಿರಿಯಾತ (ಪ). 5 ರಿಗೆ (ಉ ಪ).

೩೯ 1 ಗಣಿಯು (ಉ 1856). 2 ನಾ (ಉ*a* 1694). 3 ಳೇ (ಉ). 4–ನ (ಕಿ), ನ ತಂದಿಕ್ಕಿ (ಉ). 5 ಕುಳ್ಳಿಹಳು (ಉ) [ಪ.ದಲ್ಲಿಲ್ಲ]. (ವಿರ್ತ 992).

೪೦ 1 ಕುಲಗೆಟ್ಟವರ (ಉ 19), ಕುಲಗೆಟ್ಟವರು (ಪ 78). 2 ವರಚಿನ್ತೆಯೊಳಗೆ ಇರ್ಪರ್ ಅನ್ತಲ್ಲ (ಕಿ), ಚಿಂತೆ ಒಳಗಿರ್ಪರಂತಲ್ಲ (ಉ ಪ). 3 ಕ್ಕು (ಉ). 4 ಕುಲವಾದರ್ ಅಯ್ಯ (ಕಿ), ಕುಲಗೋತ್ರರುಗಳು (ಪ).

೪೧ 1 ಕೊಡುವೊಡೆ (ಪ 375). 2 ಕೈ ಹಾಳೆ (ಉ 677 ಪ). 3 ಎಡೆ ಏನು (ಕಿ). 4 ವೇ (ಉ ಪ). 5 ಅಡಿ–ಸಿ ತಾ (ಕಿ), ಸುತ (ಉ), ಕೊಂಡು (ಪ) ನುಡಿಯಾಡಿ (ಸೂಚಿತ ಪಾಠ). 6 ಲೋಭಿ(ಕಿ), ಲೋಭಿಯು [ಪ.ಸ್ವೀಕೃತ ಪಾಠ]. 7 ಮಾತು (ಪ). 8 ಯಾ (ಉ*a* 598).

ನುಡಿಯ ಪಾಲಿಸಿ ನುಡಿಯೆ ನುಡಿ[1]ವುದು[1] ಜಗವೆಲ್ಲ
[2]ನುಡಿವರೆ[2] ಕೆರಳಿ [3]ಕಿಡಿಯಹ[3] | [4]ನೃಪನ[4]
[5]ನುಡಿಸುವರಿಲ್ಲ[5] ಸರ್ವಜ್ಞ ೪೨

[ಕೆರಳು 473

ಆಸನ[1]ದಲುಂಬುವುದು[1] ಸೂಸುವುದು [2]ಬಾಯಲ್ಲಿ[2]
ಬೇಸರದೆ ಹೊತ್ತು [3]ಕೊಲುತಿಹುದು[3] | ಕವಿ[4]ಗಳ[4]
ಸಾಸಿಗ[5]ಳೆ[5] [6]ಪೇಳಿ[6] ಸರ್ವಜ್ಞ ೪೩

[ಕೊಲು 491 ಸಾಸಿ 1550 ಸೂಸು 1687

[1]ಹಲ್ಲು[1] ನಾಲಿಗೆಯಿಲ್ಲ [2]ಪೊಲ್ಲು[2] ಸೋಜಿಗ[3]ಮಲ್ಲ[3]
ಕೊಲ್ಲದೆ [4]ಹಿಡಿಯುವುದು[4] [5][ತಾನು][5] | ಲೋಕ[6]ದ[6]
ಲೆಲ್ಲ ಠಾವಿನೊಳು ಸರ್ವಜ್ಞ ೪೪

[ಕೊಲ್ಲು 492 ನಾಲಿಗೆ 869 ಸೊಲ್ಲು 1598

ಗಂಡಗಂಬಲಿಯಿಕ್ಕಿ ಗಂಡಗರಣೆಯ ನುಂಗಿ
ಗಂಡ ಬಂದಾಗ ನರಳುವ | [1]ಹೆಣ್ಣಿಂಗೆ[1]
[2]ಗುಂಡಿಕ್ಕು [ಬಿಡದೆ][2] ಸರ್ವಜ್ಞ ೪೫

[ಗಂಡ 522 ನರಳು 833

ಹಸಿವು ತೃಷೆ [1]ನಿದ್ರೆ[1] ವಿಷಯ ಮೈಥುನ ಬಯಕೆ
ಪಶುಪಕ್ಷಿ ನರಗೆ [2]ಸಮವಿರೆ[2] | ಕುಲವೆಂಬ
[3]ಗ[3]ಸಣಿಯೆತ್ತಣದು ಸರ್ವಜ್ಞ ೪೬

[ಗಸಣಿ 533

---

೪೨ 1 ಯುವುಸು (ಕಿ ಉ 779). 2 ನುಡಿದಿಹರೆ (ಉ). 3 ಕಿಡಿಯಪ್ಪ (ಉ), ಕಿಡಿಯಬಗುಳ್ವ (ಪ). 4 –ತಾ (ಕಿ), ನೃಪನರಿದು (ಉ); ನೃಪನಿದಿರೆ (ಪ). 5 –ಸುವರೆ ಇಲ್ಲ (ಕಿ), ನುಡಿಸುವಪರಾರು (ಉ), ನುಡಿಪವರುಂಟೆ (ಪ).

೪೩ 1 ದಲಿ ಉಂಬುವುದು (ಕಿ), ದಲುಂಬುವದು (ಉ 2038), ದಲುಂಬುದು (ಪ 466). 2 ಬಾಯೊಳಗೆ (ಪ). 3 ಕೊಲ್ಲುವದು (ಉ), ಕೊಲುವುದು (ಪ). 4 –ಳಲಿ (ಉ), –ಳೊಳು (ಪ). (ಕವಿಗಳೆ? ಸೂಚಿತ ಪಾಠ) 5 –ಳು (ಉ), –ರು (ಪ). 9 ಹೇಳಿ (ಪ). [ಇದು ಒಗಟು. ಉತ್ತರ: ಪಿಚಕಾರಿ.]

೪೪ 1 ಹಲ್ಲಿಪೆ (ಪ 465). 2 ಸೊಲ್ಲಿದೆ (ಪ). 3 –ವಲ್ಲ (ಉ 2037 ಪ). 4 ಮೃಗವ ಹಿಡಿತಹುದು (ಪ). ಮೃಗವ–(ಉ). 5 ದೊಳ (ಉ ಪ).

* ಸಂಪಾದಕ ಸೇರಿಸಿದ್ದು, ಕಾರಣ ಪಾದದ ಮೂರನೆಯ ವಿಷ್ಣುಗಣದ ಎರಡು ಅಂಶ ಸಾಲದ್ದರಿಂದ. ಒಗಟಿನ ಉತ್ತರ: ಬಲೆ.

೪೫ 1 ಹೆಣ್ಣನು (ಉ 1858). 2 ಗುಂಡಿಕ್ಕು (ಕಿ). ಗುಂಡಿಗಿಕ್ಕೆಂದ (ಉ). ('ಬಿಡದೆ' ಸಂಪಾದಕ ಸೇರಿಸಿದ್ದು).

೪೬ ಗಳು (ಕಿ ಉ 970). 2 ಸಮವಿರಲು (ಕಿ), ಸವನಿರಲು (ಉ). 3 ಘ (ಉ). [ಇದು ಪ.ದಲ್ಲಿಲ್ಲ].

[1]ಎಳ್ಳು[1] ಗಾಣಿಗ ಬಲ್ಲ [2]ಸುಳ್ಳು ಸಿಂಪಿಗ[2] ಬಲ್ಲ
ಕಳ್ಳ[3]ರ[3] ಬಲ್ಲ ತಳವಾರ | [4]ಬಣಜಿಗ[4]
[5]ನೆಲ್ಲವ ಬಲ್ಲ[5] ಸರ್ವಜ್ಞ ೪೭

[ಗಾಣಿಗ 537

[1]ಬಟ್ಟಿಬಟ್ಟಿಯೊಳೆಲ್ಲ[1] ಹೊಟ್ಟೆ ಜಾಲಿಯ ಮುಳ್ಳು
ಹುಟ್ಟಿದವರೆಲ್ಲ [2]ಗಿಜಿವಾಯಿ | ಮೂಡಲ[2]
ಬಟ್ಟೆ*[ಯೆ]* [3]ಬೇಡ[3] ಸರ್ವಜ್ಞ ೪೮

[ಗಿಜೆ 541

ಬಂಧು ಬಳ[1]ಗ[1] ಕೂಡಿ ಹೊಂದಿ ಜೋಗುಳ ಪಾಡಿ
ಹಿಂದೆ ಸತ್ತವರ ಹೆಸರಿಟ್ಟು | ಗುಗ್ಗ[2]ರಿ[2]
ತಿಂದು [3]ತೂಗುವರು[3] ಸರ್ವಜ್ಞ ೪೯

[ಗುಗ್ಗರಿ 546 ಜೋಗುಳ 660

[1]ಚಿಕ್ಕಾಡಿ[1] [2]ತಗಣೆ[2] ರಕ್ಕ[3]ಸ[3] [4]ಜಾರೆಯರು[4]
ಒಕ್ಕಲಿಕ್ಕುವರು ಇರುಳೆಲ್ಲ | ಬೆಳ[5]ಗಾಗೆ[5]
[6]ಸುಕ್ಕಿದಂತಿಹರು[6] ಸರ್ವಜ್ಞ ೫೦

[ಚಿಕ್ಕಾಡಿ 605

[1]ಕಾಲ[1]ಕೂಟದ [2]ವಿಷ[2] ಚೇಳು [3]ನಂ[3]ಬಿದ [4]ಹಗೆ[4]
ಹಾಳೂರ [5]ಚುರಚಿ[5] ನಸುಗುನ್ನಿ | ತಿಗುಳ[6]ರ[6]
[7]ಗಾಳಿ*[ಯೂ]* ಬೇಡ[7] ಸರ್ವಜ್ಞ ೫೧

[ಚುರಚಿ 617 ತಿಗುಳ 715 ನಸು 849

---

೪೭ 1 ಎಳ್ಳು (ಪ 682). 2 ಸೆಳ್ಳು ತೋಟಿಗ (ಪ). 3 ರನು (ಕಿ ಉ 1420 ಪ). 4 ಬಣಜಿಗನು (ಉ), ಸೂಳೆ ಹಣ (ಪ). 5 ಎಲ್ಲವ-(ಉ), ಉಳ್ಳವನ ಬಲ್ಲಳು (ಪ).

೪೮ 1 ಬಟ್ಟೆಗಳೊಳಗೆಲ್ಲ (ಪ 773). 2 ಗಿಜವಾಯುರು ತೊಡನಾಡ (ಪ). 3 ಬೇಡೆಂದ (ಉ 1608, ಪ). * (ಸಂ. ಸೇ.)

೪೯ 1 ಗವು (ಕಿ ಉ 1287) 2 ರಿಯ (ಉ). 3 ಕೂಸಂ-(ಅಧ್ಯಾಹಾರವಾಗಿ ಕಿಟೆಲ್ ಸೇರಿಸಿರುವುದು.) [ಇದು ಪ.ದಲ್ಲಿಲ್ಲ].

೫೦ 1 ಚಿಕ್ಕುಟು (ಪ 650). 2 -ಣೆಯೂ (ಕಿ), ತಗುಣೆಯೂ (ಉ 1855), ತಗುಣೆಯು (ಪ). 3 -ಸರು (ಉ), -ಸಿ (ಪ). 4 ಜಾರೆಯು (ಪ). 5 -ಗಾನಿ (ಉ). 6 ಠಕ್ಕರಂತಿಹರು (ಪ).

೫೧ 1 ಕಾಳ (ಉ 1385, ಪ 789). 2 + ವು (ಕಿ ಉ ಪ). 3 ತುಂ (ಪ). 4 + ಯು (ಕಿ ಉ ಪ). 5 ಚುಚಿ (ಕಿ), (ಸ್ವೀ.ಪಾ., ಉ), (ಉ*a* 1259). 6 -ರಾ (ಉ*a*). 7 ಗಾಳಿ ಬೇಡೆಂದ (ಉ ಪ).

* (ಸಂ. ಸೇ.)

[1]ಕಾಶಿ[1] [2]ಕಂಚಡಿ ಯಾಕೆ[2] [3]ಭಾಸುರ[3] [4]ಜಡೆ ಯಾಕೆ[4]
[5][ಕೇಶವ ಕಿತ್ತುಕೊಳಲ್ಯಾಕೆ][5] | [6]ತ್ರೈಮಲ[6]
[7]ದಾಶೆ[7] ಬಿಡದನಕ ಸರ್ವಜ್ಞ ೫೨
[ಜಡಿ 633

ಹಲವು ಮಕ್ಕಳ ತಂದೆ [1]ತಲೆಯಲ್ಲಿ ಕೊಟ್ಟವಗೆ[1]
ಸಲೆ[2]ಗ[2]ಳಿಗೆ ಜಾಪ[3]ವರಿವನ[3] | ಹೆಂಡತಿಗೆ
ಮೊಲೆಯಿಲ್ಲ [4][ನೋಡ][4] ಸರ್ವಜ್ಞ ೫೩
[ಜಾವ 649

ಜೊಳ್ಳು [1]ಮನುಜರು[1] ಸುಳ್ಳು ಸಂಸಾರದೊಳು
ಮ[2]ಳ್ಳಿ[2]ಡಿದು ಮಾಯೆಯೆಂಬಪ್ಪಳ | [3]ಬಲೆಯೊಳು[3]
ಹೊ[4]ಳ್ಳಾ[4]ಡುತಿಹರು ಸರ್ವಜ್ಞ ೫೪
ಜೊಳ್ಳು 659

[1]ಅಗ್ಗದ ಅರಳುಂಟು[1] ಡೊಗ್ಗೆ ಮಜ್ಜಿಗೆಯುಂಟು
ಹೆಗ್ಗ[2][ಳ್ಳದ][2] ಕಾಯಿ ಮೆಲಲುಂಟು | ಮೂಡ ನಾ-
ಡೆಗ್ಗೆನ್ನಬಹುದೆ ಸರ್ವಜ್ಞ ೫೫
ಡೊಗ್ಗೆ 674

ಈಚ[1]ಲ[1] ಮರಹೀನ ನೀಚ[2]ರ[2] ನೆರೆಹೀನ
ನೋಚಿ[3]ದ[3] ಹೆಣ್ಣು ತರಹೀನ ಮನೆಯೊ[4]ಳು[4]
ಪೇಚಾಟ ಹೀನ ಸರ್ವಜ್ಞ ೫೬
[ತರಹೀನ 695

---

೫೨ 1 ಕಾಶಿ (ಉ 573), ಕಾಸೆ (ಪ 200). 2 ಕಂಚಡಿಯೇಕೆ (ಉ), ಕಚ್ಚುಟವೇಕೆ (ಪ). 3 ಆಸುರದ (ಉ ಪ). 4 ಜಡಿ–(ಕಿ), ಜಡೆಯೇಕೆ (ಉ). 5 ಕೇಶಕಿತ್ತಿಕೊಳ್ಳಲು ಯಾಕೆ (ಕಿ), ಕೇಶವನು ಕಿತ್ತಿಕೊಳಲೇಕೆ (ಉ), ಕೇಶವ ಕಿತ್ತುಕೊಳಲೇಕೆ (ಪ). 6 +ದ (ಕಿ ಉ), ಅಱುವಿಲ್ಲ (ಪ). 7 ಅಶೆ (ಕಿ ಉ).

೫೩ 1 –ಜುಟ್ಟವಗೆ (ಉ 2039), ತಲೆಯೊಳವನಿಗೆ ಕೊಟ್ಟು (ಪ 469). 2 –ಘೇ–(ಪ). 3 –ವರಿವವನ (ಪ). ನೋಡ (ಉ. ಸ್ತ್ರೀ. ಪಾ), ನೋಡು (ಪ).

೫೪ 1 +ತಂವು (ಕಿ ಉ 343). 2 ಳ್ಳಿ (ಉ). 3 ಬಲೆಯೊಳಗೆ (ಉ). 4 ಳ್ಳ (ಉ). [ಇದು ಪ.ದಲ್ಲಿಲ್ಲ].

೫೫ 1 ಅಗ್ಗ ಸುಗ್ಗಿಗಳುಂಟು (ಉ 1609). 2 ಳದ (ಕಿ ಉ). [ಇದು ಪ.ದಲ್ಲಿಲ್ಲ].

೫೬ 1 ಲದ (ಕಿ), ಲಾ (ಉ*a* 1582). 2 ರದ (ಕಿ), ರಾ (ಉ*a*). 3 ದಾ (ಉ*a*). 4 ಳಗೆ (ಕಿ ಉ 1737). [ಇದು ಪ.ದಲ್ಲಿಲ್ಲ].

ಕ್ರೀಡೆಯಲಿ ಬಾಲತ್ವ ಪ್ರೌಢಿಯಲಿ ತರುಣತ್ವ
ಗಾಢಚಿಂತೆಯಲಿ ವೃದ್ಧತ್ವ | [1]ದಿಂ[1] ಸುಡು
ಗಾಡಿಗೆಡೆಯಹರು ಸರ್ವಜ್ಞ ೫೭
[ತರುಣತ್ವ 696

[1]ತಿಗುಳರ ಗೆಣೆಗಿಂದ[1] [2]ಬಗುಳುವ ಶುನಿ[2]ಲೇಸು
ಮುಗುಳಿಯ ಮರದ [3]ನೆರಳಿಂದ[3] | ನುಂಗುವ
ನೆಗಳು [4]ಲೇಸು[4] ಸರ್ವಜ್ಞ ೫೮
[ತಿಗುಳ 715

ಕೆಟ್ಟ [1]ಹಾಲಿಂದ ಹುಳಿಯಿಟ್ಟೆರ್ದ ತಿಳಿ[1]ಲೇಸು
ಕೆಟ್ಟ [2]ಹಾರ್ವಿತಿಯ[2] ಬದುಕಿನ್ದ | [3]ಸೂಳೆಯ[3]
ನೆಟ್ಟ[4]ನೆ[4] ಲೇಸು ಸರ್ವಜ್ಞ ೫೯
[ತಿಳಿ (4) 723

ಆನೆ ತಾ ತುಡುಗಾಗೆ ಜ್ಞಾನಿ ಮೂರ್ಖನುಮಾಗೆ
ಭೂನಾಥ ಜಾರ[1]ನಾದರೆ[1] | ಮಾಣಿಪುದು
ಮಾನವರಿಗಳವೆ ಸರ್ವಜ್ಞ ೬೦
[ತುಡುಗ 727

ಬಂಡು ಹೆಂಡತಿಯಾಗಿ ತುಂಡೊಬ್ಬ ಸೊಸೆಯಾಗಿ
ಕಂಡಲ್ಲಿ [1]ತಿರಗೋ[1] ಮಗನಾದ[2]ರೆ | ಮನೆಗೆ[2]
ದಂಡ [3]ತಪ್ಪದು[3] ಸರ್ವಜ್ಞ ೬೧
[ತುಂಡು 729

---

೫೭ 1 ಗಳಿ (ಕಿ), ದಿಂದ (ಉ 1176), ದಿಂ (ಉ 1290 ಸ್ವೀ. ಪಾ.). [ಇದು ಪ.ದಲ್ಲಿಲ್ಲ].

೫೮ 1 ತಿಗುಳ ಜನ ಗೆಣೆಗಿಂದ (ಕಿ), –ಗೆಣೆಯಿಂದ (ಉ 1386), –ಕೆಳೆಯಿಂದ (ಪ 772). 2 ಬೊಗಳುವ–(ಉ), –ನಾಯಿ (ಪ). 3 ನೆರಳಿನಿಂದ (ಕಿ), ನೆಳಲಿಂದೆ (ಪ). [ಸ್ವೀ. ಪಾ. ಉ : ನೆರಳಿಂದ].

೫೯ 1 ಹಾಲಿಂದಲತಿ ಕಷ್ಟದಂಬಲಿ (ಪ 749). 2 ಹಾರುವನ (ಉ 1000). 3 ಸೂಳೆಯು (ಕಿ), ಹೊಲೆಯನು (ಉ), ಸೂಳೆವಾಳೆ (ಪ). 4 ನೇ (ಉ).

೬೦ 1 ನಾಗಿಹರೆ (ಉ 698). [ಇದು ಪ.ದಲ್ಲಿಲ್ಲ].

೬೧ 1 ಹರಿವ (ಉ 1755). 2 ರಾ ಮನೆಗೆ (ಉ). 3 ತಪ್ಪುವದೆ (ಉ). [ಇದು ಪ.ದಲ್ಲಿಲ್ಲ].

ಮಾ[1]ತು[1] ಬಲ್ಲಾತಂಗೆ [2]ಮಾತೊಂದು[2] ಮಾಣಿ[3]ಕ[3]
[4]ಮಾತುಗಳರಿಯದಧಮರಿಗೆ[4] | ಮಾಣಿ[5]ಕ[5]
ತೂತು ಬಿದ್ದಂತೆ ಸರ್ವಜ್ಞ ೬೨

[ತೂತು 737 ಬಲ್ಲ 1090 ಬೀಳು 1128 ಮಾತು 1235

ತೆಂಗಿಗೂ [1]ದೇವಗೂ[1] ಹಂಗ ಮಾಡಲೆಬೇಕು
ತೆಂಗಿನ [2]ಮೊದಲಿಗೆ[2] ನೀರೆರೆಯೆ | [3]ಕಡೆಯಲಿ[3]
[4]ಹಿಂಗದೀವಂತೆ[4] ಸರ್ವಜ್ಞ ೬೩

[ತೆಂಗು 741

ಬಂಧನವ ಮಾಡಿ[1]ವರೂ[1] ಸಂವಜ್ಞಾನಿಯೆ ಲೇಸು
ಹೊಂದಿ ಸಾಸಿರವ [2]ಕೊಡುತಿರಲು[2] | ಕರ್ಮಿಯ
ದಂದುಗವೆ ಬೇಡ ಸರ್ವಜ್ಞ ೬೪

[ದಂದುಗ 773

*ಆ ದೇವ ಈ ದೇವ ಮಾದೇವನೆನಬೇಡ
ಆ ದೇವರ ದೇವ ಭುವನ[ದ] ಪ್ರಾಣಿಗಳಿ-
ಗಾದವನೆ ದೇವ ಸರ್ವಜ್ಞ ೬೫

[ದೇವ 804

ಧಾತು [1]ಏಳ[ದು] ಕಲೆತು[1] ಭೂತ ಪಂಚಕವಾಗಿ
ಓತು ದೇಹವನು [2]ಧರಿಸಿರ್ಪ[2] | [3]ಮನುಜಗೆ[3]
ಜಾತಿ ಎತ್ತಣದು ಸರ್ವಜ್ಞ ೬೬

[ಧಾತು 824

---

೬೨ 1 ತ (ಕಿ). 2 ಮತ್ತೊಂದು (ಕಿ). 3–5 ಕವು (ಕಿ ಉ 1353). 4 –ದ ಅಧಮರಿಗೆ (ಕಿ), ಮಾತ ತಾನರಿಯದಧಮಂಗೆ (ಉ). [ಇದು ಪ.ದಲ್ಲಿಲ್ಲ].

೬೩ 1 ಹಿರಿಯರಿಗೆ (ಉ 1226, ಪ 253). 2 ಮೊದಲಿಂಗೆ (ಉ), ಮೊದಲ್ಗೆ (ಪ) [ತೆಂಗ ಪೊದಲಿಗೆ? ಸೂ.ಪಾ]. 3 ತುದಿಯಲ್ಲಿ (ಉ). 4 ಹಿಂಗದೇ ಕೊಡುಗು (ಪ).

೬೪ 1 ದಡು (ಪ). 2 ಕೊಟ್ಟರೂ (ಉ 430).

೬೫ ಉತ್ತಂಗಿಯವರಲ್ಲಿ ಪಾಠಭೇದವಿಲ್ಲ.

* ಆ ದೇವನೀದೇವನೂ ದೇವನೆನಬೇಡ
[ಮೂ]ದೇವ ಜಗದೇವ ಪ್ರಾಣಿಗಳ
ಕಾದವನೆ ದೇವ ಪರಮಾರ್ಥ (252)

[ಪ. ಪದ್ಯದ ಎರಡನೆಯ ಸಾಲಿನ ಛಂದಸ್ಸು ಕೆಟ್ಟಿದೆ.]

೬೬ 1 ಏಳನು ಕಲಿತು (ಕಿ), —ಕಲೆತು (ಉ 975) (ಸ್ವೀ. ಪಾ.). 2 ಧರಿಸಿರ್ದ (ಉ). 3 ಮನುಜನ್ಗೆ (ಉ). [ಈ ಪದ್ಯ ಪ.ದಲ್ಲಿಲ್ಲ].

ಅರಸೊಲಿದು [1]ನ[ಡೆ]ಸಿದರೆ[1] ಸಿರಿಯಕ್ಕು [2]ದೆಸೆಯಕ್ಕು[2]
ಕರಿ ತುರಗ ಬಲವು ಪಿರಿದಕ್ಕು । ಮುನಿದರೆ
[3]ಕರನಾಶವಕ್ಕು[3] ಸರ್ವಜ್ಞ ೬೭

[ನಡಿಸು 835 ಮುನಿ 1270

ನಡೆ[1][ಯೋ][1]ದೊಂ[1a][ದೇ][1a] ಭೂಮಿ
ಕುಡಿ[2][ಯೋ][2]ದೊಂ[2a][ದೇ][2a] ನೀರು
[3]ಸುಡುವಗ್ನಿ ಒಂ[ದೇ] ಇರುತಿರೆ । ಕುಲಗೋತ್ರ[3]
[4]ನಡುವೆ ಎತ್ತಣದು[4] ಸರ್ವಜ್ಞ ೬೮

[ನಡುವೆ 836

ಸತ್ಯ [1]ಸದ್ಗುಣ[1] ತೀರ್ಥ [2]ಉತ್ತಮರ ನಡೆ[2] ತೀರ್ಥ
[3]ಸತ್ಯರ[3] ಸಂಗವದು ತೀರ್ಥ । ಹರಿವ ನೀ-
ರೆತ್ತ[4]ಣ[4] ತೀರ್ಥ ಸರ್ವಜ್ಞ ೬೯

[ನಡೆ 837 ಸತ್ಯ 1493

[1]ನಂಬಿ[ಕೆ]ಯುಳ್ಳವ[1] [2]ಕೊಂಬನು ಸಾಲವ[2]
[3]ನಂಬಿ[ಕೆ]ಕೆಟ್ಟ[3] ಬಳಿಕ । [4]ಬೆಂದಾವಿಗೆಯ[4]
ಕುಂಭದಂತಿಹನು ಸರ್ವಜ್ಞ ೭೦

[ನಂಬಿಕೆ 841 ನಂಬುಗೆ 861

---

೬೭ 1 ನಡಿಸಿದರೆ (ಕಿ), ಕೂತೆರ್ಗಡೆ (ಪ 549). 2 ಜಸವಕ್ಕು (ಉ 732 ಪ). 3 ಕರಿ[ವ]ರಿಯಕ್ಕು (ಪ).

೬೮ 1–2 ಯೊ 1*a* -2*a* ದೆ (ಕಿ), 1ವು (ಉ 972 ಪ 523). 3 ಸುಡುವೊಡೆ ಕಿಚ್ಚು ಉರಿ ಒಂದೆ ಜಗನೆಲ್ಲ (ಪ). 4 ಜಡಗೊಂಬುತಿದೆಕೊ (ಪ).

೬೯ 1 –ರ ನುಡಿ (ಉ 800, ಪ 255). 2 ನಿತ್ಯರ ನಡೆ (ಉ), ಮತ್ತೆ ಜಂಗಮು (ಪ). 3 ಉತ್ತಮರ (ಉ ಪ). 4 ಣದು (ಉ).

[ಟಿಪ್ಪಣಿ: "ಜಂಗಮು ಪದ ವಿರ್ತ್ ಅಥವಾ ಉತ್ತಂಗಿ ಇವರ ಪಾಠಗಳಲ್ಲಿ ಕಾಣದಾಗಿರುವುದಲ್ಲ ಆಶ್ಚರ್ಯ. ಶೈವ ಪಾಠಗಳಲ್ಲೆ ಅದು ಇಲ್ಲದಿರುವುದು ಆಶ್ಚರ್ಯ" (ಪರಮಾರ್ಥ ಪುಟ 103). ವಿರ್ತ್ ಮತ್ತು ಕಿ. ಪಾಠವೆ ಮೂಲದ್ದಾಗಿದ್ದು, ಪ. ಪಾಠವೇ ಆವೇಲಿನದಾಗಿರುವಂತಿದೆ. (ಸಂ.)]

೭೦ 1 ನಂಬಿಗೆಯುಳ್ಳವನು (ಕಿ), ನಂಬಿಕೆಯು ಉಳ್ಳನಕ (ಉ 1408), ನಂಬುಗೆಯುಳ್ಳನಕ (ಪ 903). 2 ಕೊಂಬುವನು (ಕಿ), ಕೊಂಬುವುದು ಸಾಲವನು (ಉ), ಕೊಂಬುದು ಸಾಲವನು (ಪ). 3 ನಂಬಿಕೆಯು ಕೆಟ್ಟ (ಉ), ನಂಬುಗೆಗೆಟ್ಟ (ಪ). 4 ಬೆಂದಡವಿಯ (ಪ). 5 ಕಂಬದಂತಿಹುದು (ಪ).

ಆಡಿ [1]ಹುಸಿಯಲು[1] ಹೊಲ್ಲ ಕೂಡಿ ತಪ್ಪಲು ಹೊಲ್ಲ
[2]ಕಾಡುವ ನೆಂಟ[2] ಬ[3]ರ[3]ಹೊಲ್ಲ | [4]ಮಾನಿನಿಗೆ[4]
[5]ನಾಡ ಮಾತು[5] ಹೊಲ್ಲ ಸರ್ವಜ್ಞ ೭೧
[ನಾಡು 854

ಯಾತ[1]ರ[1] [2]ಹೂವೇನು[2] ನಾತ[3]ರೆ[3] ಸಾಲ[4]ದೆ[4]
ಜಾತಿ ವಿಜಾತಿ [5]ಎ[5]ನಬೇಡ | ದೇವನೊಲಿ-
ದಾತನೆ ಜಾತ ಸರ್ವಜ್ಞ ೭೨
[ನಾಜಿ, 859, ಹೂ 1672

ಕಣ್ಣು [1]ಮನ ನಾಲಿಗೆ[1] ತನ್ನ[2]ವೆಂ[2]ದೆನಬೇಡ
ಅನ್ಯರು ಕೊಂದರೆನಬೇಡ | ಇವು ಮೂರು
[3]ತನ್ನ ಕೊಲ್ಲುವುವು[3] ಸರ್ವಜ್ಞ ೭೩
[ನಾಲಿಗೆ 860

ಇಚ್ಛೆ[1]ಯ[ನ]ರ[1]ದಿತ್ತ ನುಚ್ಚೊಂದು ಮಾಣಿ[2]ಕ[2]
[3]ಇಚ್ಛೆ[3] [4]ತೀರಿದ[4] ಬಳಿಕಿತ್ತ | ಮಾಣಿ[5]ಕ[5]
[6]ನುಚ್ಚಿಗೂ[6] ಕಷ್ಟ ಸರ್ವಜ್ಞ ೭೪
[ನುಚ್ಚು 894

[1]ಕೋಪವೆಂಬುದು ಪಾಪದ[1] ನೆಲೆಗಟ್ಟು
ಕೂಪದೊಳು ನೇಣು ಹರಿದಂತೆ | [2]ನರಕಕೆ[2]
ಕೋಪಿ [3]ತಾನಿ[3]ಳಿವ ಸರ್ವಜ್ಞ ೭೫
[ನೆಲೆ 907

---

೭೧ 1 ಅಳುಪಲು (ಪ 860). 2 ಬೇಡದ ನಂಟು (ಪ). 3 ತರ (ಪ). 4 ಸಟೆಯು ತಾ (ಉ 1178), ದನಿಹೀನ (ಉ*a* 1244 ಪ). 5 ನಾಡುವದೆ (ಉ), ಹಾಡಿದರೆ (ಪ).

೭೨ 1 ರದು (ಉ 976). 2 ಹೂವು ಏನು (ಕಿ). 3 ರದೇ (ಕಿ ಉ). 4 ದೇ (ಉ). 5 ಯೆ (ಉ). [ಇದು ಪ.ದಲ್ಲಿಲ್ಲ.]

೭೩ 1 —ನಾಲಿಗೆಯು (ಕಿ), ನಾಲಿಗೆ ಮನವು (ಉ 1282), ನಾಲಗೆ ಮನವು (ಪ 821). 2 ದೆಂ (ಕಿ ಉ). 3 ತನ್ನನೇ ಕೊಲುಗು (ಪ).

೭೪ 1 ಯುಂ (ಕಿ), ಯುನು ಅ (ಉ 639). (ಸ್ವೀ ಪಾ) ಯುನರಿ (ಪ 379). 2 ಕವು (ಕಿ ಉ ಪ). 3 + ಯು (ಕಿ ಪ), + ಯೆಡು (ಉ). 5 ತೀರ್ದ (ಕಿ ಉ), ತೀದ (ಪ). 6 ನುಚ್ಚಿನಿಂ (ಪ), ನುಚ್ಚಿನಿಂದತ್ತ (ಉ*a* 559).

೭೫ 1 —ಕೇಳಿ ಪಾಪದ (ಕಿ ಉ 529), ಪಾಪವೆಂಬುದಕೆ ತಿಳಿ ಕೋಪವೇ (ಪ 236). 2 ನರಕದೊಳು (ಉ). 3 ತಾನ್ ಇ (ಕಿ).

[1]ಚಂದನವ ಕರಗಿಸೆ[1] [2]ನೊಂದು[2] ಪರಿಮಳವಕ್ಕು
ಸಂದರಿವನರಿದ [3]ತತ್ಪುರುಷ | ರೆನಿಪರು[3]
[4][ನೊಂದು][4] ಸೈರಿಪರು ಸರ್ವಜ್ಞ ೭೬

[ನೊ 913

ಏರಿ ಮೇಲಣ ಪಂಜು ನೀರೊ[1]ಳು[1] ಉರಿವಂತೆ
ನಾರಿಯ[2]ರೊಲವು[2] ತನಗೆಂಬ | ಮರು[3]ಳಂಗೆ[3]
ಮಾರಿ [4]ಹೊಡೆದಂತೆ[4] ಸರ್ವಜ್ಞ ೭೭

[ಪಂಜು 924

ಒಲ್ಲೆನೆಂ[1]ಬುವ[1] ಮಾತು ಬಲ್ಲಿತಾಗಿಯೆ [2]ಇರಲು[2]
ತಲ್ಲಣ[3]ನಿಲ್ಲ[3] [4]ದೇವರಿತ್ತ[4] | [5]ಪಡಿ ತಾನಿ-
ದ್ದಲ್ಲಿಗೇ ಬಕ್ಕು[5] ಸರ್ವಜ್ಞ ೭೮

[ಪಡಿ (4) 429

[1]ಅನ್ನವ ಹಾಕು[1]ವುದು ನನ್ನಿ[2]ಯು[2] ನು[3]ಡಿವುದು[3]
ತನ್ನಂತೆ ಪರರ [4]ಬಗೆದಡೆ[4] [5]ಕೈಲಾಸ[5]
[6]ಬಿನ್ನಣವಕ್ಕು[6] ಸರ್ವಜ್ಞ ೭೯

[ಪರ 942

---

೭೬ 1 ಚಂದನವು ಕಾರಗಿಲು (ಪ 234), —ಕರಗಿಸಲು (ಕಿ, ಉ 404). 2 ಬೆಂದು (ಉ). 3 ಸತ್ಪುರುಷರೆನಿಸಿಹರು (ಉ), ಹಿರಿಯರುಗಳಾದವರು (ಪ). 4 (ಸ್ವೀ. ಪಾ. ಉ).

೭೭ 1 ಳಗೆ (ಕಿ. ಉ 1761. ಪ 628). 2 ರೊಲುವೊ (ಉ.ಪ). 3 ಳಗೆ (ಪ) 4 ಹಿಡಿದಿಹುದು (ಉ), ಹಿಡಿದಿಹುದೆ (ಪ).

೭೮ 1 ಬಾ (ಪ 212). 2 ನಿಲ್ಲಿ (ಪ). 3 ವಿಲ್ಲ (ಪ). 5 ದೇವ್ರಿತ್ತ (ಕಿ), ಶಿವನಿತ್ತ (ಪ). 5 ಪಡಿಯು ಮಿ|ರ್ದಲ್ಲಿಗೇ ಬಹುದು (ಪ).

[ಟಿಪ್ಪಣಿ: ಈ ಪದ್ಯ ಉತ್ತರಂಗಿಯಲ್ಲಿ ಕಂಡುಬರಲಿಲ್ಲ. ಕಿ. ಪಾಠ ವಿರ್ತ (923) ಪಾಠವಂತಿರುವುದು ಗಮನಾರ್ಹ. 'ದೇವರು' 'ಶಿವ'ನಾದನೋ 'ಶಿವ' 'ದೇವರು' ಆದನೋ?]

೭೯ 1 -ವನು-(ಕಿ ಉ), -ನಿಕ್ಕು (ಪ 333). 2 ಯುನು (ಕಿ ಉ 603). 3 ಡಿಯುವು (ಕಿ ಉ). 4 ಬಗೆವುದು (ಪ). 5 ಸ್ವರ್ಗ ತಾ (ಪ). 6 ಬಿನ್ನಾಣ-(ಉ), ಬಿನ್ನಾಣವಲ್ಲ (ಪ).

[1]ಒಸೆದೆಂಟು[1] ದಿಕ್ಕಿನಲಿ [2]ಮಿಸುನಿಗಿಣಿಲುಗಿಂಡಿ[2]
ಹುಸಿದು ಮಾ[3]ಡುವನ[3] [4]ಪೂಜೆ[4] |.[5]ಬೋಗಾರ[5]
[6]ಪಸರವಿಟ್ಟಂತೆ[6] ಸರ್ವಜ್ಞ ೮೦

[ಪಸರ 962

[1]ತಾಪದಲಿ[1] ಸಂಸಾರಕೂಪದಲಿ ಬಿದ್ದವ[2]ರ[2]
[3]ಕೂಪದಿಂ ಪಾರುಮಾಡುವ | ಗುರುಕರುಣ[3]
ಸೋಪಾನ [4]ಕಂಡ್ಯಾ[4] ಸರ್ವಜ್ಞ ೮೧

[ಪಾರು 975

*ಕಪಲೆ[1]ಯು[1] ಗೋಧಿ[2]ಯು[2] ಮಡಿಕುದ್ದು ಬೆಳೆದರೂ
ಸುಡಬೇಕು ನಾ[3]ಡನೆಂದ[3]ವನ | ಬಾಯೊಳಗೆ
ಪುಡಿಗಡುಬು [4]ಬೀಳ್ಗೆ[4] ಸರ್ವಜ್ಞ ೮೨

[ಪುಡಿ 991

ಬಡವನೊಳ್ಳೆಯ ಮಾತ ನುಡಿದರಲ್ಲೆಂಬರು
ಪೊಡವೀಶ [1]ಜೊಲ್ಲಿನೊಡನೆ[1] ತಾ | [2]ಕೂಗಿದರೆ[2]
ಕಡು [3]ಮೆಚ್ಚುತಿಹರು[3] ಸರ್ವಜ್ಞ ೮೩

[ಪೇಚ 1015

---

೮೦ 1 ಎಸೆಸೆ ಟು (ಉ 170 ಪ 138). 2 –ಗಿಣ್ಣಲು–(ಉ), ಮಿಸುಪ ಗಿಣ್ಣಲು ನೂಜು (ಪ). 3 ಮಾಡುವವನ (ಕಿ) 4 ಶಿವಪೂಜೆ (ಉ ಪ). 5 ಕಂಚುಗಟಿ (ಪ). 6 ಹಸರವಿಟ್ಟಂತೆ (ಉ), ಹಸರದಂತಕ್ಕು (ಪ).

[ಇಲ್ಲಿಯೂ 'ಶಿವಪೂಜೆ' ಗಮನಾರ್ಹ. ಛಂದಸ್ಸಿನ ದೃಷ್ಟಿಯಿಂದ ಉ, ಪ. ಪಾಠ ಗ್ರಾಹ್ಯ.]

೮೧ 1 ತಾಪದ (ಪ 44). 2 ರು (ಉ 97 ಪ). 3 ಆಪತ್ತನುಳಿದು ಪೊರಮಡಲು ಗುರುಪಾದ (ಉ ಪ). 4 –ವಯ್ಯ (ಉ), ಕಂಡ (ಪ). [ಕಿ ಮತ್ತು ವಿರ್ಥ (858)ರಲ್ಲಿ ಪಾಠೈಕ್ಯ ಗಮನಾರ್ಹ.]

೮೨ 1–2 ಯುನು (ಕಿ). 3 ದೆಂಪ (ಕಿ). 4 ಬೀಳ್ಗ (ಉ 1620).

[ಈ ಪದ್ಯ ಪ.ದಲ್ಲಿಲ್ಲ. ಕಿ.ನಲ್ಲಿ 'ಬೆಳವಲ ನಾಡೊಳ್' ಎಂಬ ಮಾತು ಪದ್ಯದ ಮೊದಲಲ್ಲಿ ವಿವರಣೆಯಾಗಿ ಬಂದಿದೆ].

೮೩ 1 ಪೊಳ್ಳುಗೆಡೆದರೂ (ಉ 1266), ಬಳ್ಳುಗೆಡೆದೊಡೆ (ಪ 571). 2 ಕೈವಾರಿ (ಉ), ಹೊಗಳುತ (ಪ). 3 ನಗುತಲಿಹರು (ಉ). ಜಾಣನೆಂಬರು (ಪ). [ಕಿ.ಪಾಠ ಪೂರ್ತಿಯಾಗಿ ವಿರ್ಥ ಪಾಠ (810)]

[1]ಪ್ರಸ್ತಾವ[1] [2]ನುಡಿಯೆ[2] ಪ್ರಶಸ್ತವಾಗಿರಬೇಕು
[3]ಪ್ರಸ್ತಾವ[3] ತಪ್ಪಿ ನುಡಿದರೆ । [4]ದೇವಾಂಗ[4]
[5]ದುಸ್ತು ಬಿದ್ದಂತೆ[5] ಸರ್ವಜ್ಞ ೮೪

[ಪ್ರಸ್ತಾವ 1050

ಕೊಟ್ಟಾತ ಬರಡಾದ ಬಟ್ಟಾತ ಹಯನಾದ
ಕೊಟ್ಟವಳ [1]ಪಡೆವೆನೆನುವಾತ । ತಾ ನೊದಲಿ[1]
ಬಟ್ಟಬಯಲಾದ ಸರ್ವಜ್ಞ ೮೫

[ಬಟ್ಟ 1066

ಹೊತ್ತಾರೆ [1]ಬಯ್ಗಿಗೆ[1] ಮತ್ತೆ [2]ಬಾ [ಎನ್ನುತ][2]
ಹೊತ್ತನೆ ಕೊಂದು [3]ಹುಸಿವವ । ನಿಂದಲು[3]
[4]ಸತ್ತಾತ ಲೇಸು[4] ಸರ್ವಜ್ಞ ೮೬

[ಬಯ್ಗು 1079

ಜ್ಞಾನವುಳ್ಳವರೊಡಲು ಭಾನುಮಂಡಲದಂತೆ
ಜ್ಞಾನವಿಲ್ಲದ[1]ರ[1] [2]ಬರಿಯೊಡಲು[2] [3]ಅಗಸರ[3]
[4]ಬಾನೆಯಂತಕ್ಕು[4] ಸರ್ವಜ್ಞ ೮೭

[ಬಜಿ³ 1084

ಸೀತ ಧಾತುಗಳುಂಟು ಬಾತಿಹವು ಕುಕ್ಷಿಗಳು
[1]ಪಾತರ(ವು)[1] ಮರದಿ ತಿರಿದುಂಬ । ನಾಡಿಗೆ
[2]ಯಾತಕೆ[2] ಬಹನು ಸರ್ವಜ್ಞ ೮೮

[ಬಾಯಿ 1105

---

೮೪ 1 + 3 ಪ್ರಸ್ತವನು (ಉ 1339), ಪ್ರಸ್ತವ (ಪ 809). 2 ನುಡಿಯಲ್ (ಕಿ), ನುಡಿಯೆ (ಉ ಸ್ವೀ.ಪಾ.), ನುಡಿದರೆ (ಪ) 4 ಹೊತ್ತೇಱಿ (ಪ). 5 ಕಿಚ್ಚುಕಾದಂತೆ (ಪ).

["ಹೊತ್ತೇರಿ ಕಿಚ್ಚುಕಾದಂತೆ" ಎಂಬ ಮಾತು ಕಿ. ಪದ್ಯಗಳಲ್ಲಿರುವುದನ್ನು ಗಮನಿಸಿ.]

೮೫ 1 ಗುಣವ ಪಡೆವನಿನಿಪಾತ ನೆಱೆ (ಪ 712).

[ಕಿ.ಪಾಠ ಪೂರ್ತಿಯಾಗಿ ಉ.ಪಾಠದಂತೆಯೇ ಇದೆ. ಈ ಪದ್ಯ ಸೂಳೆಯ ಸಹವಾಸಕ್ಕೆ ಸಂಬಂಧಪಟ್ಟದ್ದು.]

೮೬ 1 ಬಯ್ಗಿಂಗೆ (ಕಿ ಉ 662), ಬಯ್ಗಿಗೆ (ಪ 374) (ಸ್ವೀ. ಪಾ.). 2 ಬಾರೆಂದೆನುತ (ಕಿ), ಬಾ ಎಂದೆನುತ (ಉ 662), ಬಾ ಎನ್ನುತ್ತ(ಪ). 3 ಹುಸಿಯುವನಿಗಿಂದಲು (ಉ), ಹುಸಿವನಿಂದಾಚೊಂದು (ಪ). 4 ಸತ್ತ ಹೆಣ (ಪ).

೮೭ 1 ನ (ಉ 427, ಪ 160). 2 ಬಱಿಯೊಡಲು (ಕಿ), ಬರಿಕಾಯ (ಪ). 3 ಹಾಳೂರ (ಉ ಪ) 4 ಸ್ಮಶಾನದಂತಿಕ್ಕು (ಉ), ಶ್ವಾನದಂತಿಹುದು (ಪ).

೮೮ 1 ಪಾತಕರು (ಉ 1722). 2 ಏತಕ್ಕೆ (ಉ). [ಈ ಪದ್ಯ ಪ.ದಲ್ಲಿಲ್ಲ].

[1]ಹಾಸು ಇಲ್ಲದ[1] ನಿದ್ರೆ [2]ಪೂಸು ಇಲ್ಲದ[2] [3]ಮೀಯು[3]
[4]ಬಾಸೆಯಿಲ್ಲದನ[4] [5]ಗೆಳೆತನ[5] | ಮೋಟ[6]ಕಯ್[6]
[7]ಬೀಸಿ ಕರೆದಂತೆ[7] ಸರ್ವಜ್ಞ ೮೯

[ಬಾಸೆ 1109 ಮೋಟ 1310 ಹಾಸು 1653

ಬಿದಿರೆ ಅಂದಣ[1]ವಕ್ಕು[1] ಬಿದಿರೆ ಸತ್ತಿಗೆಯಕ್ಕು
[2]ಬಿದಿರಿಂದ ಸಕಲ ಪದವಕ್ಕು[2] | [3]ಲೋಕದಿ[3]
[4]ಬಿದಿರವವ ಕೆಟ್ಟ[4] ಸರ್ವಜ್ಞ ೯೦

[ಬಿದುರು 1117

[1]ಬೆಂಡಿರದೆ[1] ಮುಳುಗಿ[2]ದರು[2] ಗುಂಡೆದ್ದು ತೇಲಿ[3]ದರು[3]
ಬಂಡಿಯು ನೊಗ[4]ವು[4] [5]ಚಿ[ಗು]ತರು[5] | ಸಾಲಿ[6]ಗ[6]
[7]ಕೊಂಡದ್ದು ಕೊಡನು[7] ಸರ್ವಜ್ಞ ೯೧

[ಬೆಂಡು 1137 ಸಾಲಿಗ 1548

ಆಳುತೇಳು[1]ತ[1] ಬೆರಳು ಜಾ[2]ಳಿ[2] ಮಿಡುಕುವ ಬಾಯಿ
ಮೇಳ[3]ದೊಳ[3] [4]ತೊಡಕ[4] [5]ಬಿಡದವನ | ಜಪವದು[5]
ಹಾಳುಮನೆಯಂತೆ ಸರ್ವಜ್ಞ ೯೨

[ಬೆರಳು 1141

---

೮೯ 1 ಹಾಸಿಲ್ಲದಾ (ಪ 866). ಹಾಸು ಇಲ್ಲದ (ಉ 1503, ಸ್ವೀ. ಪಾ.). 2 ಪೂಸಲಿಲ್ಲದ (ಪ), ಪೂಸು ಇಲ್ಲದ (ಉ ಸ್ವೀ.ಪಾ.). 3 ಮೀಹ (ಉ ಪ). 4 ಭಾಷೆಯರಿಯದಳ (ಉ), ಆಸೆಯಿಲ್ಲದನ (ಪ). 5 +ವು (ಉ), ಮನೆವಾರ್ತೆ (ಪ). 6 ಕೆಯ್ (ಕಿ), ಕೈ (ಉ). 7 ಬೀಸಿದಂತಕ್ಕು (ಪ).

೯೦ 1 –ಮಕ್ಕು (ಪ 344). 2 ಬಿದಿರೆ ತಾ ಕೊಡಗು ಪರಪದವ (ಪ). 3 ಲೋಕದೊಳು (ಉ 669 ಪ). 4 ಬೆದರಿದವ ಕೆಟ್ಟ (ಉ), ಬಿದಿರದಿರೆ ಕೆಡಗು (ಪ).

೯೧ ಬೆಂಡಡ್ಡಿ (ಪ 899). 2 : 3 ದರೆ (ಪ). 4 —ನು (ಪ). [ಮೂಲಪಾಠ 'ನೊಗ' ಇದ್ದೀತು]. 5 ಚಿಗತರು (ಕಿ), ಚಿಗಿತರೂ (ಉ 1397), ಚಿಗಿದರೆ (ಪ). 6 ಗನು (ಕಿ ಉ ಪ). 7 ಕೊಂಡುದ ಕೊಡುವ (ಪ). [ಕೊಂಡದ್ದು ಬಿಡನು—ಸೂ.ಪಾ.).

೯೨ 1 ವ (ಪ 140). 2 ಳು (ಪ). 3 ದೊಳು (ಉ 173), ದಳ (ಪ). 4 ತೊಡಚಿ (ಪ). 5 —ಜಪವದುವೆ (ಉ), ಬಿಡದ ಮನದವನ ಜಪ (ಪ).

ಕುದುರೆ[1]ಯಾ[1] ಚದುರೆ[2]ಯಾ[2] ಹದಿರೆರ[3]ಡೂ ಒಂವಯ್ಯ[3]
ಚತುರನೇರಿದರೆ ಕುಣಿ[4]ವದು[4] | ಬೆಳ್ವಾಳ
ಬಿದಿರ ಹಾಕುವುದು ಸರ್ವಜ್ಞ ೯೩

[ಬಿದಿರು (1) 1118 ಬೆಳ್ (2) 1143

ಈಶತ್ವ[1]ಮಿಲ್ಲದೆ ನೀನೀಶನೆಂತಾದೆ[1]
[2]ಈಶ[ನ]ನೀಶ[2]ನೆನಬೇಡ | [3]ಲೋಕಕೆ[3] ವಾ–
[4]ನೇ[4]ಶನೆ ಈಶ ಸರ್ವಜ್ಞ ೯೪

[ಬೇಡ (2) 1148

[1]ಹಣಕೊಂದು ವೀ[1]ಸ [2]ಇಪ್ಪಣಕೊಂದು[2] [3]ಬೇಳೆ[3]
[4]ತ್ರಿಣಯನ ಮುಕುಟವಾದರೂ | ಅಕಸಾಲೆ[4]
ಟೊಣೆಯದೆ ಬಿಡನು ಸರ್ವಜ್ಞ ೯೫

[ಬೇಳೆ (1) 1152

[1]ಬೊಮ್ಮ[1] ನಿರ್ಮಿಪನೆಂಬ ದುರ್ಮತಿಯೆ [2]ನೀ[2] ಕೇಳು
[3]ಬೊಮ್ಮನ[3] ಸತಿಗೆ ಮೂಗಿಲ್ಲ | [4]ಆ ಮೂಗ[4]
ನಿರ್ಮಿಸ[5]ನೇಕೆ[5] ಸರ್ವಜ್ಞ ೯೬

[ಬೊಮ್ಮ 1155

---

೯೩ 1+2 ಯು (ಉ 1767, ಪ 642). 3 —ಡುವೊಂದಯ್ಯ (ಕಿ), —ಡೂ ಒಂದೆ (ಪ). 4 ಯುವುದು (ಉ).

೯೪ 1 ವಿಲ್ಲದಲೆ ಈಶ್ವರನು ಎನಿಸಿಹನೆ (ಉ 1225), ವಿಲ್ಲದಲೆ ಈಶ್ವರನು ಎಂತಾದೆ (ಉ*a* 1116). 2 ಈಶನೀಶ (ಕಿ), ಈಶನಾನೀಶ (ಉ), ಈಶನಂ ಈಶ (ಉ*a*). 3 ಜಗದಿ (ಉ). 4 ನೀ (ಉ). [ಈ ಪದ್ಯ ಪ.ದಲ್ಲಿಲ್ಲ].

೯೫ 1 ಹಣಕ್ಕೊನ್ದಿೀಸವ್ (ಕಿ), ಹಣವಿಗೊಂದೀಸ (ಉ 1411), ಹಣವಿಂಗೆ ವೀಸ (ಪ 906). 2 ವಿಪ್ಪಣಕೊಂದು (ಉ), ವಿಪ್ಪಣವಿಂಗೆ (ಪ). 3 ಬೇಳೆಯು (ಕಿ), ಬೇಳೆಯುನು (ಉ). 4 ತ್ರಿಣಯನನ ಮುಕುಟದೊಳಗಿರಲಕ್ಕಸಾಲೆ (ಪ).

೯೬ 1 ಬ್ರಹ್ಮ (ಪ 68). 2 ನೀಂ (ಪ). 3 ಬ್ರಹ್ಮನಾ (ಪ), ಬೊಮ್ಮನಾ (ಉ*a* 172). 4 —ವಾ ಮೂಗ (ಉ 211). 5 ನದೇಕೆ (ಉ).

ಒಳ್ಳೆ[1]ಯ[1] [2]ಮಾತಿಗೂ[2] ಉಳ್ಳೊಡವೆ [3]ಬಿಡೆನೆಂದು[3]
[4]ಬೊಳ್ಳಿಟ್ಟು[4] ಹುಸಿದು ಸಾಲವ । [ತಾ] ನುಂಗಿ
ಇಲ್ಲೆ[5]ನುತಿಹನು[5] ಸರ್ವಜ್ಞ ೯೭

[ಬೊಳ್ಳು 1155

[1]ಮುಟ್ಟೆಯ ಮಣ್ಣನ್ನು[1] ಇಟ್ಟು [2]ತಾ[2] ನೊಸ[3]ಲೊಳು[3]
ನೆಟ್ಟ[4]ನೆ[4] ಸ್ವರ್ಗಪಡೆವರೆ । ಸಾಣೆಕಲ್
ಕೆಟ್ಟ ಕೇಡೇನು ಸರ್ವಜ್ಞ ೯೮

[ಮುಟ್ಟೆ 1189 ಸಾಣೆ 1538

*ಹೇಳಿದ ಮಾತ ಕೇಳದ ಮಡದಿ ಮಕ್ಕಳ
ಹೇಳಿಕೆಯ ಬಾಳಿಗಿಂತಲೂ । ಮನೆಬಿಟ್ಟು
[ಬಾಳ್ಹೋದು] ಲೇಸು ಸರ್ವಜ್ಞ ೯೯

[ಮಡದಿ 1190

ತನ್ನ ತಾನರಿ[1]ವನ[1] ಮುನ್ನ ಹೊದ್ದದು ಮಾಯೆ
ಉನ್ನತ[2]ವಪ್ಪ[2] ಗಜವೇ[3]ರೆ[3] । ಬಪ್ಪವ[4]ನು[4]
[5]ಕುನ್ನಿಗಂಜುವನೆ[5] ಸರ್ವಜ್ಞ ೧೦೦

[ಮಾಯೆ 1241 ಹೊದ್ದು 1691

---

೯೭ 1 ಯಾ (ಉ*a* 1272). 2 ಮಾತಿಂಗೆ (ಉ 1399). 3 ಕೊಡೆನೆಂದು (ಉ), ಬಿಡನೆಂದು (ಕಿ), ಜಿಡೆನೆಂದು (ಉ*a* ಸ್ವೀ ಪಾ॰). 4 +ಬೊಗಳಿ (ಉ). 5 ನುತಲಿಹನು (ಉ), ನ್ನುತಿಹನು (ಉ*a*). [ಇದು ಪ.ದಲ್ಲಿಲ್ಲ].

೯೮ 1 ಮುಟ್ಟೆ ಶ್ರೀಗಂಧವನು (ಉ 924), ಮುಟ್ಟೆಯನು ಮಣ್ಣನು (ಪ 1516). 2 ತಾಂ (ಕಿ), (ಸ್ವೀ.ಪಾ. ಉ ಪ). 3 ಲೊಳಗೆ (ಕಿ ಉ ಪ). 4 ನೆಯೆ (ಉ).

೯೯ ಕಿಟ್ಟೆಲ್ ಪಾಠ ದುಷ್ಟವಾಗಿದೆ; ಇಲ್ಲಿ ಅದರಲ್ಲಿಯ ಮಾತುಗಳನ್ನೆ ಬಳಸಿಕೊಂಡು ಪುನರ್ಯೋಜಿಸಿ ಕೊಟ್ಟಿದೆ. ಕಿಟ್ಟೆಲ್ ಪಾಠ:

ಹೇಳಿದ ಮಾತಂ ಕೇಳದೆ, ಏಳಿಗೆಯಿಂದೋಜಿಗೆಟ್ಟ
ಮಡದೀ ಮಕ್ಕಳ ಆಳಿಕೆ ಬಾಳಿಕೆಗಿಂತಲು
ಬೋಳಾಗಿಯು ಮನೆಯು ಬಿಟ್ಟು ಹೋಹುದು ಲೇಸು
[ಈ ಪದ್ಯ ಉತ್ತರಂಗಿಯಲ್ಲಾಗಲಿ ಪರಮಾರ್ಥದಲ್ಲಾಗಲಿ ಇಲ್ಲ]

೧೦೦ 1 ವನ (ಕಿ), ದಂಗೆ (ಉ 365), ದವನ (ಪ 170). 2 ದೊಳಿಪ್ಪ (ಉ), ಮುಪ್ಪ (ಪ). 3 —ರಿ (ಉ ಪ). 4 ನ (ಉ). 5 ಕುನ್ನಿ ಕಚ್ಚುವುದೆ (ಉ).

[1]ಕಂಡದ್ದನಾಡೆ[1] ಭೂಮಂಡ[2]ಲಿ[2] ಮುನಿ[3]ವುದು[3]
ಕೊಂಡಾಡುತಿ[4]ಚ್ಛೆ[4] [5]ನುಡಿದರೆ[5] । ಜಗವೆಲ್ಲ
ಮುಂಡಾಡು[6]ತಿಹು[6] ಸರ್ವಜ್ಞ ೧೦೧

[ಮುಂಡು 1265

ಮುತ್ತು [1]ಮುದುಕಿಗ್ಯಾಕೆ[1] ತೊತ್ತೇಕೆ ಗುರುಗಳಿಗೆ
ಬತ್ತಿದ ಕೆರೆಗೆ [2]ತೆರಿಗ್ಯಾಕೆ[2] । [3]ಶ್ರವಣಗೆ[3]
[4]ಮಿಥ್ಯ[ತಾನ್ಯಾ]ಕೆ[4] ಸರ್ವಜ್ಞ ೧೦೨

[ಮುತ್ತು 1267

[1]ಎಂತಪ್ಪನಾದರೂ[1] ಮಂತ್ರಿಯ ಹಗೆ ಹೊಲ್ಲ
ಎಂತ[2]ಕ್ಕು ಅರಸು[2] ಮುನಿ[3]ದರೆ[3] । ಆ ಮಂತ್ರಿ
ಅಂತಕನಕ್ಕು ಸರ್ವಜ್ಞ ೧೦೩

[ಮುನಿ 1270 ಹೊಲ್ಲ 1698

ಮಂತ್ರಿ[1]ಯು[1] ಹಗೆ [2]ನೃಪಕಾಂತೆಯು[2] [3]ಸವಿಮಾತು[3]
ಮಂತ್ರವಿಲ್ಲದ[4]ನ[4] [5]ಗೆಳೆತನ[5] । [6]ತನ್ನನ್ನು[6]
[7]ಮುಂತೆ ಕೊಲ್ಲುವವು[7] ಸರ್ವಜ್ಞ ೧೦೪

[ಮುಂತೆ 1271

---

೧೦೧ 1 ಕಂಡುದನು ಆಡೆ (ಉ 1247), ಕಂಡುದ ನುಡಿಯೆ (ಪ 566). 2 ಲವು (ಕಿ ಉ). ಯುವುದು (ಉ). 4 ಚ್ಛೆಯು (ಪ). 5 ನುಡಿದಿಹರೆ (ಉ). 6 ತಿಕ್ಕು (ಪ).

೧೦೨ 1 —ಏಕೆ (ಉ 1015), ಮೂಕುತಿಯೇಕೆ (ಪ 592). 2 ಮಿಂಗನೇಕೆ (ಉ), ಮೃಗವೇಕೆ (ಪ). 3 ಶ್ರವಣರಿಂಗೆ (ಕಿ), ಸ— (ಪ). 4 ಮಿಥ್ಯತನವೇಕೆ (ಕಿ), —ತಾನೇಕೆ (ಪ).

೧೦೩ 1 ಎಂತರಸು ಒಲಿದರೂ (ಉ 738 ಪ 557). 2 —ಕ್ಕುಮರಸು (ಕಿ), —ಕ್ಕೆ ಅರಸು (ಪ). 3 —ದಿಹರೆ (ಉ).

೧೦೪ 1 ಯೂ (ಕಿ), 2 ನೃಪನ ಕಾಂತಿಯೂ (ಕಿ 1271), —ಕಾಂತೆಯೂ (ಕಿ 1532), ನೃಪನ— (ಉ 739, ಪ 559). 3 ಸಮಗೋಷ್ಠಿ (ಉ ಪ). 4 —ರ (ಪ). 5 ಒಡನಾಟ (ಉ ಪ). 6 ಇವು ತನ್ನ (ಉ ಪ). 7 ಅಂತ್ಯ ಕಾಲಕ್ಕೆ (ಉ), ಅಂತ್ಯಗಾಲಕ್ಕೆ (ಪ).

[1]ಬೇಡದೆ[1] ಮುನ್ನೀವ [2]ರೂಢಿಯೊಳುತ್ತಮನು[2]
ಬೇಡಿವಡೀವ ಮಧ್ಯ[3][ಮ][3] । [4]ಅಧಮನು[4]
[5]ಬೇಡಿದಡೀಯ[5] ಸರ್ವಜ್ಞ ೧೦೫

[ಮುನ್ನ 1272

ಸಿದ್ಧರಿಗೆ ಯೋಗ[1]ವ[1] ಬುದ್ಧಿವಂತಗೆ ಮತಿಯ
[2]ಬಿದ್ದಿದ್ದಡವಿಗೆ[2] ಕಿಚ್ಚನು । [3]ಮುಳು[3]ವೊನೆ
ತಿದ್ದಿ[4]ದರಾ[4]ರು ಸರ್ವಜ್ಞ ೧೦೬

[ಮುಳ್ಳು 1280

[1]ಅಕ್ಕಿಯಿಂವಲೆ[1] ತೆಂಗು [2]ಮೆಕ್ಕೆಯಿಂ ಕಣಕ ಜಾ[2]–
[3]ನಕ್ಕಿಯಿಂ ಲಂಕೆ[3] ಕೆಡುವಂತೆ । ದುರ್ಬುದ್ಧಿ
[4]ಹೊಕ್ಕಲ್ಲಿ ಕೇಡು[4] ಸರ್ವಜ್ಞ ೧೦೭

[ಮೆಕ್ಕೆ 1288

[ಟಿಪ್ಪಣಿ: ಇಲ್ಲಿ ಉ ಪ ಪಾಠಗಳ ಸಾಮ್ಯ ಗಮನಾರ್ಹ. ತುಸ ವ್ಯತ್ಯಾಸವುಳ್ಳ– "ಮಂತ್ರವಿಲ್ಲದನೊಡನಾಟವಿವು ತನ್ನ । ಅಂತ ಕಾಲಕ್ಕೆ" ಎಂಬ ವಿರ್ತನ (ವಿರ್ತ್ F 802 : ನೋಡಿ ಪ. 559ರ ಪಾಠಾಂತರಗಳು) ಪಾಠಕ್ಕೂ ಕಿ. ಪಾಠಕ್ಕೂ ಸಾಮ್ಯ ಇಲ್ಲದಿರುವುದೂ ಅಷ್ಟೇ ಗಮನಾರ್ಹ. ಅನೇಕ ಕಡೆ ಕಿ. ಪಾಠಕ್ಕೂ ವಿರ್ತ್ F ಪಾಠಕ್ಕೂ ಸಾಮ್ಯ ಇದ್ದು ಇಲ್ಲಿ ಇಲ್ಲದಿರುವುದನ್ನು ನೋಡಿದರೆ ಕಿಟೆಲ್ ತನ್ನ ಕೋಶದ ಪ್ರಯೋಗಗಳ ಆಯ್ಕೆಗೆ ವಿರ್ತ್ F ಮುದ್ರಣವನ್ನಲ್ಲದೆ ಬೇರೆಯ ಹಸ್ತಪ್ರತಿಯ ಪಾಠವನ್ನೂ ನೋಡಿದ್ದಾರೆ ಎಂದು ಊಹಿಸಬಹುದು. ಅಲ್ಲದೆ ಆ ಹಸ್ತಪ್ರತಿಯ ಪಾಠ ಪ.ದ ಪಾಠಕ್ಕಿಂತ ಭಿನ್ನ ಎನ್ನುವುದೂ ವ್ಯಕ್ತಪಡುತ್ತದೆ. ಪ. ಶಾಖೆಯ ಪಾಠಪಷ್ಟೆ ಇಲ್ಲವೆ ಅದಕ್ಕಿಂತ ಪ್ರಾಚೀನವಾದ ಶಾಖೆಯ ಪಾಠ ಒಂದಾದರೂ ಇದ್ದಿರಬೇಕೆಂಬುದು ಸುವ್ಯಕ್ತ. ಉತ್ತಂಗಿ ತಮ್ಮ ಬೇರೆ ಬೇರೆ ಮುದ್ರಣಗಳಲ್ಲಿ ಬೇರೆ ಬೇರೆ ಪಾಠಗಳನ್ನು ಅವಲಂಬಿಸಿ ಪಾಠಪರಿಷ್ಕರಣ ಮಾಡಿಕೊಂಡಿರುತ್ತಾರೆ. ಉತ್ತಂಗಿಯವರ ಮುದ್ರಣಗಳು ಪಾಠಸಂಕುಲತೆಯನ್ನು ಪ್ರತಿಬಿಂಬಿಸುವ ಒಂದು ಮಿಶ್ರಪಾಠ.

೧೦೫ 1 ಬೇಡುವ (ಉ 636), —ದಾ (ಉ*a* 557). 2 —ಳಗುತ್ತಮನು (ಕಿ), ಸಾಡಿನೊಳಗುತ್ತಮನು (ಉ, ಉ*a*). 3 ನೇ (ಕಿ). 4 ಅಧಮ ತಾ (ಕಿ), ನಧಮ ತಾ (ಉ). 5 —ಡೀಯಂ (ಕಿ), ಬೇಡಲೀಯಂಡನು (ಉ, ಉ*a*). [ಇದು ಪ.ದಲ್ಲಿಲ್ಲ.]

೧೦೬ 1 —ವನು (ಕಿ ಉ 1478). 2 ಬಿದ್ದ ಅಡವಿಯ (ಉ). 3 ಮುಳ್ಳು (ಕಿ). 4 ದವರಾ (ಕಿ ಉ).

೧೦೭ 1 ಅಕ್ಕಿಯಿಂ (ಉ 872 ಪ 840). 2 ಜಾನಕ್ಕಿಯಿಂ ಲಂಕೆಯು (ಉ), –ಲಂಕೆಯು (ಪ), (ಜಾನಕ್ಕಿ=ಜಾನಕಿ). 3 ಮೆಕ್ಕಿಯಿಂ ಕಣಿಕ (ಉ ಪ). 4 ಹೊಕ್ಕವಂ ಕೆಡುವ (ಪ). [ಕಿ. ಪಾಠ ವಿರ್ತ್ F ಪಾಠ (940) ಹೆಚ್ಚು ಕಡಮೆ ಒಂದೇ.]

ಒಲೆಗುಂಡ[1]ನೊಬ್ಬನೇ[1] [2]ಮೆಲಬಹುದು ಎಂದರೂ[2]
ಮೆಲಬಹುದೆಂದು [3]ಎನಬೇಕು[3] । ಮೂರ್ಖ[4]ನ[4]
ಗೆಲ[5]ಬಾರ[5]ದಯ್ಯ ಸರ್ವಜ್ಞ ೧೦೮

[ಮೆಲು 1293

ಮೇರು[1]ವಿಗೆ[1]ಣೆಯಿಲ್ಲ ಧಾ[2]ರಿ[2]ಣಿಗೆ ಪಡಿಯಿಲ್ಲ
*ಕಾರಣಿಕರಪ್ಪ ಹಿರಿಯರ । ಸಂಸ[3]ರ್ಗ[3]–
[4]ವಾರಿಂದಲಧಿಕ[4] ಸರ್ವಜ್ಞ* ೧೦೯

[1296

[1]ಮೊಗೆ ನೀರಿನೊಳಗೊಂದು[1] [2]ನೆಗಳಾಡಿದಂದಿಗೆ[2]
[3]ತಗುಣೆ[3] ಹೆಬ್ಬುಲಿಯ ಹಿಡಿದಂದು । [4]ಹೆಣ್ಣಿನ[4]
ಬಗೆಯ ನಂಬುವುದು ಸರ್ವಜ್ಞ ೧೧೦

[ಮೊಗೆ 1302

ಚಿತ್ತವೃತ್ತಿಯನರಿದು ಹತ್ತೆವಿಡಿದೋ[1]ಲಯ್ಸು[1]
ಚಿತ್ತ[2]ವ[2] ಪಡೆದು [3]ಮುದವೇರೆ[3] । ಮೊಲ [4]ನಾಯ[4]
ಹತ್ತಿದಂತಕ್ಕು ಸರ್ವಜ್ಞ ೧೧೧

[ಮೊಲ 1307

[1]ನಾರಿಯ ಗಂಡ[1] [2]ಬೇಲೂರಿಗೆ[2] [3]ಹೋದರೆ[3]
[4]ಆರಿದೋಗರಕೆ ಮೊಸರಿಕ್ಕಿ । ಕಾಗೆಗೆ
ತೋರಿ ಕೊಟ್ಟಂತೆ[4] ಸರ್ವಜ್ಞ ೧೧೨

[ಮೊಸರ್ 1307

---

೧೦೮ 1 ನೊಬ್ಬನೆ (ಉ 1034), ನೊಬ್ಬನು (ಪ 894). 2 —ಎಂದಿಹರೆ (ಉ), ಮೆಲಲಹುದೆಂದರೆ (ಪ). 3 ಎಂಬುವನೆ ಜಾಣ (ಉ). 4 ರನು (ಪ). 5 ಲಾಗ (ಉ).

೧೦೯ 1 ವಿಂಗೆ (ಕಿ). 2 ರು (ಕಿ). 3 –ರ್ಗಂ (ಕಿ). 4 ಆರಿಂದಂ ಅಧಿಕಂ(ಕಿ), ವಾರಿಧಿಯಿಂದಧಿಕ(ಪ 268). * ತಾರಕನಿಂದ ಹಿತರಿಲ್ಲ ದೈವತಾ। ಬೇರೊಬ್ಬನಿಲ್ಲ–(ಉ1519).

೧೧೦ 1 ಮೊಗೆಯ ನೀರೊಳಗೊಂದು (ಉ 1769, ಪ 626). 2 ನೆಗಳು ಆಡಿದ ರಂದು (ಉ). 3 ತಿಗಣೆ (ಪ). 4 ಹೆಂಗುಸಿನ (ಪ).

೧೧೧ 1 ಲಯಿಸು (ಉ 731), ಲೈಸು (ಪ 548). 2 ವನ (ಉ ಪ). 3 ಮುದ ವಾಗೆ (ಉ ಪ). 4 ನಾಯಿಾ (ಕಿ), (ಸ್ವೀ. ಪಾ.) (ಉ ಪ).

೧೧೨ 1 ನಾರಿಯುಳ –(ಕಿ. 'ನಾರಿಯುಳ' i. e. ನಾರಿಯು–ಎಂದು ಕಿ. ಸೂಚನೆ). –ನಲ್ಲ (ಉ 1871), ನಾರಿಯು ನಲ್ಲನು (ಪ 765). 2 ತಾ ಬೇಲೂರ್ಗೆ (ಕಿ), ಊರಿಂಗೆ (ಉ), ಊರಿಗೆ (ಪ). 3 –ರೇ (ಕಿ), ಹೋಗಿಹರೆ (ಉ ಉ$_{a}$), ಹೋಹಲ್ಲಿ(ಪ). 4 ಎರಡು–ಮೂರನೆಯ ಪಂಕ್ತಿಗಳು ಉ, ಪ.ಗಳಲ್ಲಿ ಪೂರ್ತಿಯಾಗಿ ಬೇರೆಯ ಸಮಾನ ಪಾಠ ಹೊಂದಿದೆ :

ಸತ್ತುಹೋದರೆ ನಿನ[1]ಗೆತ್ತಣ[1] ಮೋಕ್ಷ[2]ವಯ್[2]
ಸತ್ತುಹೋಗ[3]ದಲೆ[3] ಜೀವವಿರೆ । ಮೋಕ್ಷದ
ಗೊತ್ತು [4]ತಿಳಿ[ಯೆಂದ][4] ಸರ್ವಜ್ಞ ೧೧೩

[ಮೋಕ್ಷ 1309 ಸ್ನಾಯ್ 1544

[1]ಏತದ ಗಣೆ ಚಿಗುತು[1] [2]ಕಾತು[2] ಫಲವಾದಂದು
ಹೋತು [3]ಹೆಬ್ಬುಲಿಯನಿರಿದಂದು[3] । [4]ಹೆಣ್ಣಿನ[4]
[5]ಮಾತ[ನು] ನೆಚ್ಚು[5] ಸರ್ವಜ್ಞ ೧೧೪

[ಯಾತ 1319

ಭಕ್ತಿಯಿಲ್ಲದ ಶಿಷ್ಯ[1]ಗೊತ್ತುಗೆ[ಗೊ?]ಟ್ಟು[1]ಪದೇಶ
ಬತ್ತಿದ ಕೆರೆಯು [2]ಬಯಲಲ್ಲಿ[2] । ರಾಜಾನ್ನ
ಬಿತ್ತಿ ಬೆಳೆದಂತೆ ಸರ್ವಜ್ಞ ೧೧೫

[ರಾಜಾನ್ನ 1337

ಸೊಡರು ಲಂಚವ ಕೊಂಡು ಕೊಡುವುದೊ[1]ಚ್ಚತ[1] ಬೆಳಗ
ಪೊಡವಿಗೆ ಸೂರ್ಯ ಬೆಳ[2][ಗೀವೊಲು] । ಲಂಚವ[2]
ಹಿಡಿಯ[3]ದವ[3] ಧರ್ಮಿ ಸರ್ವಜ್ಞ ೧೧೬

[ಲಂಚ 1354

"ನಾರಿ ಸಂಬಳಿಗೆ [+ಯು, ಪ] ಮರೆದಲ್ಲಿ । ಕನ್ನದ ಸೂರೆ ಹೋಗಿ[ಯಿ, ಪ]ತ್ತು."

ಟಿಪ್ಪಣಿ: ಕಿ. ಪಾಠದ 'ಬೇಲೂರಿಗೆ' (ಬೇರೂರ್ಗೆ) ಎಂಬುದು 'ಬೇರೂರಿಗೆ' (ಬೇರೂರ್ಗೆ) ಎಂದು ಇದ್ದಿರಬಹುದು. ಗಂಡ ಪರಸ್ಥಳಕ್ಕೆ ಹೋಗಿದ್ದಾಗ ಹೆಂಡತಿ ಬೇರೆ ಯುವನ ಪಾಲಾಗುವ ಸಂಭವವನ್ನು ಕಿ. ಪಾಠ ಮನೋಜ್ಞವಾಗಿ ಹೇಳಿದೆ. ಉ ಪ ಪಾಠಗಳಲ್ಲಿ, "ಕನ್ನದ" ಎಂಬುದು "ಅನ್ನದ" ಎಂದು ಇದ್ದಿರಬಹುದು. 'ಸಂಬಳ' ಎಂದರೆ ಪ್ರಾಚೀನಾರ್ಥ 'ಬುತ್ತಿ' (ಪಾಥೇಯ), 'ಬುತ್ತಿಯ ಅನ್ನ.' 'ಸಂಬಳಿಗೆ' (ಸಂಪುಟಿಕಾ ಪದದ ತದ್ಭವ) ಎಂದರೆ ಚಿಕ್ಕ ಪ್ರಮಾಣದ ಬುತ್ತಿ. 'ಕನ್ನಡ' ಪದದ ಮೂಲಪಾಠವನ್ನು 'ಅನ್ನದ' ಎಂದು ಗ್ರಹಿಸಿದರೆ ಅರ್ಥಸಾಮಂಜಸ್ಯ ಕೂಡಿಬರುವುದನ್ನು ಗಮನಿಸಬಹುದು.

೧೧೩ 1 ಗೆತ್ತಣದು (ಕಿ ಉ 464). 2 —ಮಯ್ (ಕಿ). 3 —ದತಿ (ಕಿ ಉ). 4 ತಿಳಿ (ಕಿ), ತಿಳಿಯೆಂದ (ಉ, ಸ್ವೀ.ಪಾ.).

೧೧೪ ಯಾತ ಗಣೆಯುದು (ಕಿ), ಯೇತದ ಗಣೆ ಚಿಗಿತು (ಉ 1770), ಏತದ ಗಳೆ ಚಿಗಿತು (ಪ 630). 2 ಪೂತು (ಪ). 3 ನಿರಿವಂದು (ಕಿ), ಮದಕರಿಯು-(ಪ). 4 ನಾರಿಯರ (ಪ). 5 ಮಾತ-(ಕಿ), ಮಾತ ನಂಬುವುದು (ಉ ಪ).

೧೧೫ 1 ಗೊತ್ತಿಕೊಟ್ಟು (ಉ 76, ಪ 56). 2 ಬಯ್ಲಲ್ಲಿ (ಕಿ). 3 ರಾಜನವ (ಪ).

೧೧೬ 1 ಪ್ಪಚ (ಉ 1317), ಪ್ಪಚ್ಚ (ಪ 761). 2 —ಗೀವೊಲ್—(ಕಿ), —ಗೀವೊಲ್ಲಂಚವ (ಉ), —ಗೀವ ಲಂಚವ (ಪ). 3 ನವ (ಪ). [ಕಿ ಉ ವಿರ್ಶ ಪಾಠಗಳು ಸಮ].

ಬಟ್ಟೆ[1]ಯು[1] ಕ[2]ಲ್ಲಿ[2]ಗೆ ಒಟ್ಟೆ ಪತ್ರೆಯನಿಟ್ಟು
ಕಟ್ಟಿದ [[3]ಲಿಂಗ ಮಡಿ[3]]ಯಾಗಿ । ಶರಣೆಂಬ
ಭ್ರಷ್ಟ[4]ರ[4] ನೋಡು ಸರ್ವಜ್ಞ ೧೧೭
[ಲಿಂಗ 1360

ಸುಣ್ಣವಿಲ್ಲವ [1]ವೀಳ್ಯ[1] ಬಣ್ಣವಿಲ್ಲದ ಮದುವೆ
ಹೆಣ್ಣಿಲ್ಲದವನ ಸಂಸಾರ । ಮಳ[2]ಲೊಳು[2]
ಎಣ್ಣೆ ಹೊ[3]ಯ್ದಂತೆ[3] ಸರ್ವಜ್ಞ ೧೧೮
[ವೀಳ್ಯಯ 1425 ಸಂಸಾರ 1478 ಹೆಣ್ಣು 1679

ದಾಸಿ[1]ಯು[1] [2]ಹೊಗುವಗೆ[2] ವೀಸ ಹತ್ತದು ಕೈಗೆ
ಹೇಸಿ [3]ತೊಲಗುವಳು ಜಯಲಕ್ಷ್ಮಿ[3] । ಆಯುಷ್ಯ
ನಾಶವಾಗುವುದು ಸರ್ವಜ್ಞ ೧೧೯
[ವೀಸ 1425

[1]ಬೂದಿಯೊಳು ಹುದುಗಿಸಿ ವೇದಿಸಿ ಮರೆಮಾಡಿ[1]
[2]ಕಾದಿರ್ದ ಚಿನ್ನದೊಳು[2] ಬೆರಸಿ । [ಮರೆಹಂಚ[3]][3]
ಊದು[4]ತ[4] ಟೊಣೆವ ಸರ್ವಜ್ಞ ೧೨೦
[ವೇದಿಸು 1430

ಕಟ್ಟಲೂ ಬಿಡಲೂ ಶಿವ । ಬಟ್ಟ[1]ಲ[1] ಕದ್ದ[2]ನೆ[2]
*ಕಟ್ಟಲೂ ಬೇಡ ಬಿಡಬೇಡ । [3]ಕಣ್ಮನವ[3]
ಕಟ್ಟಿದರೆ ಸಾಕು* ಸರ್ವಜ್ಞ ೧೨೧
[ಶಿವ 1458

---

೧೧೭ 1 ಯಾ (ಕಿ), 2 ಲ್ಲಿಂ (ಉ202). 3 ಲಿಂಗವರ್ ಅಡಿ (ಕಿ). 4 ರಾ (ಕಿ) ರನು (ಉ). [ಇದು ಪ.ದಲ್ಲಿಲ್ಲ.]

೧೧೮ 1 ವೀಳ್ಯ (ಕಿ), ವೀಳೆ (ಉ 1684). 2 ಲೊಳಗೆ (ಉ). 3 ಯಿಂದಂತೆ (ಉ). [ಈ ಪದ್ಯ ಪ.ದಲ್ಲಿಲ್ಲ].

೧೧೯ 1 ಯನು (ಕಿ). 2 ಹೋಗುವಗೆ (ಕಿ ಉ 1817), ಹೋಹಂಗೆ (ಪ 637). 3 ತೊಲಗುವುದು ಮಾಲಕುಮಿ (ಪ).

೧೨೦ 1 —ಹುದುಗಿಸುತ ವೇದಿಸುತ— (ಉ 1414), ಬೂದಿಯಲಿಟ್ಟಿಲೊಳು ಊದಿಕಿಸು-ತಾರೆಗಳ ಪ 907). 2 ಕಾರಿರ್ದ—(ಉ), ಸೋದಿಸುವ ಚಿನ್ನಕವ (ಪ). 3 ಒರೆಪಟ್ಟ (ಉ); (ಸ್ವೀ ಪಾ·) ಪಾಜಿ[3]ಹಂಚ (ಪ). (ಕಿ.ನಲ್ಲಿ ಈ ಪದ ಲುಪ್ತ). 4 ತಲೆ (ಉ), ತೆ (ಪ).

೧೨೧ 1 ಲವ (ಕಿ, ಉ 187 ಪ 132). 2 ನೇ (ಉ ಪ). 3 ಕಣ್ಣುಮನ (ಉ).

* ಕಟ್ಟಿರ್ದ ಲಿಂಗವ ಭಜಿಸದೊಡೆ–ಆ ಲಿಂಗ
ಬಿಟ್ಟಿಹುದವನ ಪರಮಾರ್ಥ

[ಕಿ ಉ ಪಿರ್ತ್ ಪಾಠಗಳು ಒಂದೇ ರೀತಿ. ಈ ಪಾಠಗಳಲ್ಲಿ ಲಿಂಗನಿಷ್ಠೆ ಇಲ್ಲ. ಪ ಪಾಠದಲ್ಲಿ ಲಿಂಗನಿಷ್ಠೆ ಸ್ಪಷ್ಟ.]

ಅರಿತಂಗೆ ಅ[1]ರು[1]ವತ್ತು ಮ[2]ರೆ[2]ತಂಗೆ ಮೂವತ್ತು
ಬರೆವಂಗೆ ರಾಜ್ಯ ಸರಿಪಾಲು । [3]ಬ್ರಾಹ್ಮಣ[3]
ಬರೆಯದೆ ಕೆಟ್ಟ ಸರ್ವಜ್ಞ ೧೨೨

[ಸಂ 1524

ಉಪ್ಪು ಸಪ್ಪ[1]ಗೆ[1]ಯಕ್ಕು ಕರ್ಪೂ[2]ರ[2] ಕರಿದಕ್ಕು
[3]ಸರ್ಪಗೆ[3] ಬಾಲವೆರಡಕ್ಕು । [4]ಶ್ರವಣರು[4]
[5]ತಪ್ಪಾಡಿದಂದು[5] ಸರ್ವಜ್ಞ ೧೨೩

[ಸಪ್ಪಗೆ 1505

ಅರಿ[1]ವಿರದಿರೆ[1] ಹೊಲ್ಲ [2]ಕರಿ[2] ಬೆದರಲು ಹೊಲ್ಲ
ಅರಿಯದೂ[3]ರೊಳಗೆ ಇರ[3]ಹೊಲ್ಲ । ದೊರೆಗಳಿಗೆ
ಸರಿಮಾತು ಹೊಲ್ಲ ಸರ್ವಜ್ಞ ೧೨೪

[ಸಂ 1524

ಅರಿಯದ[1]ರೊಡನಾಟ[1] [2]ಸರಿರಾಜ್ಯವಾಳ್ವುದಕಿಂ-
ದರಿಕೆ[2] [3]ಯುಳ್ಳವರ ಒಡ[3]ನಾಡಿ । [4]ಆವಾಗ[4]
ಸೆರೆಯಿಹುದೆ ಲೇಸು ಸರ್ವಜ್ಞ ೧೨೫

[ಸಂ 1525

ಸತ್ಯ[1]ವನರಿತರೆ[1] ಸತ್ತ ಹಾಗಿರಬೇಕು
ಸತ್ಯವ[2]ನರಿತೂ[2] ಉಸುರಿದರೆ । ಸತ್ತವರಿ-
ಗತ್ತ ಹಾಗಕ್ಕು ಸರ್ವಜ್ಞ ೧೨೬

[ಸಾಯ್ 1544

---

೧೨೨ 1 ರ (ಕಿ ಉ 985). 2 ರ (ಕಿ ಉ). 3 ಹಾರುವನು (ಉ). [ಈ ಪದ್ಯ ಪ.ದಲ್ಲಿಲ್ಲ].

೧೨೩ 1 ನೆ (ಉ 1017 ಪ 588). 2 ರವು (ಉ). 3 ಸರ್ಪನಿಗೆ (ಉ), ಸರ್ಪಂಗೆ (ಪ). 4 ಶ್ರವಣ ತಾ (ಉ). 5 ತಪ್ಪಿ ನುಡಿದಂದು (ಪ).

೧೨೪ 1 ವು ಇರದಿರೆ (ಕಿ). 2 ಕರಿಯು (ಕಿ ಉ 723). 3 ರೊಳಗಿರ (ಕಿ) ; (ಸ್ವೀ. ಪಾ. ಉ).

೧೨೫ 1 ದವವರೊಡನಾಟ (ಕಿ), ವರೊಡನಾಡಿ (ಉ 804 ಪ 265). 2 ಸರಿಯಾಳುವದಕಿಂದ ಅರಿಕೆ (ಉ 804), ಸರಿರಾಜ್ಯವಾಳ್ಕಿನ್ದ ಅರಿಕೆ (ಕಿ), ನೆರೆರಾಜ್ಯನಾಳುವು(ದೆ) ಅರಿಕೆ (ಪ). 3 ಯುವರೊಡ (ಕಿ). 4 ಅಗಲು (ಉ), ಯಾವಗಂ (ಪ).

೧೨೬ 1 ನ್ನರಿದರೇ (ಕಿ), ಸತ್ಯವನು ಅರಿದಿಹರೆ (ಉ 387). 2 ನರಿದುಂ (ಕಿ). -ನು ಅರಿದು ಗಳಹಿದರೆ (ಉ(. [ಈ ಪದ್ಯ ಪ.ದಲ್ಲಿಲ್ಲ].

ಸತ್ತು ಹುಟ್ಟುವರೆಂಬ ಮಿಥ್ಯ[1]ದ[1] ನುಡಿಯೇಕೆ
[2]ಬಿತ್ತಿದ[2] ಬೀಜ ಬೆಳೆವಂತೆ | [3]ಗಿಡ ತಾನು[3]
ಸತ್ತು ಹುಟ್ಟುವುದೆ ಸರ್ವಜ್ಞ ೧೨೭

[ಸಾಯ್ 1544

ಊ[1]ರಿಗೆ[1] ದಾರಿ[2]ಯನಾರು[2] ತೋರಿದ[3]ಡೇನು[3]
[4]ಸಾರಾಯದ ನಿಜವ ತೋರುವ[4] | [5]ಗುರು [ತಾನು]
ಯಾರಾದಡೇನು[5] ಸರ್ವಜ್ಞ ೧೨೮

[ಸಾರಾಯ 1546

ಸಾಲ[1]ವ[1] ತರುವಾಗ ಹಾಲು ಬೋನುಂಡಂತೆ
ಸಾಲಿ[2]ಗ[2] ಬಂದು ಕೇಳಿದರೆ | ಕುಂಡೆಗೆ
ಚೇಳು ಕಡಿದಂತೆ ಸರ್ವಜ್ಞ ೧೨೯

[ಸಾಲಿಗ 1548

ಸಾಲ[1]ವ[1] ಕೊಂಬಾಗ [2]ಹಾಲೋಗರುಂಡಂತೆ[2]
[3]ಸಾಲಿಗ ಬಂದು ಎಳೆವಾಗ | ಕಿಬ್ಬದಿಯ[3]
[4]ಕೀಲು ಮುರಿದಂತೆ[4] ಸರ್ವಜ್ಞ ೧೩೦

[ಸಾಲಿಗ 1548

---

೧೨೭ 1 ದಾ (ಕಿ). 2 ಬಿತ್ತಿದರೆ (ಕಿ ಉ ಪ). 3 ವೃಕ್ಷ ತಾ (ಉ 353 ಪ 179).

೧೨೮ 1 ರಿಂಗೆ (ಕಿ ಉ 38). 2 ಯನು ಯಾರು (ಕಿ), ಯನು ಆರು (ಉ). 3 ರೇನು (ಪ 40). 4 ಸಾರಾಯಮಪ್ಪ ಮತವನರುಹಿಸುವ (ಪ). 5 ಗುರುವು—(ಕಿ), ಗುರು| ವಾರಾದೊಡೇನು (ಪ), ಗುರುತಾನಾರಾ—(ಉ). [ಕಿ. ಮತ್ತು ವಿರ್ಶ (856) ಪಾಠ ಒಂದೇ ಬಗೆ.]

೧೨೯ 1 ವನು (ಕಿ, ಉ 1390). 2 ಗನು (ಕಿ ಉ).

೧೩೦ 1 ವನು (ಕಿ). 2 ಹಾಲು ಹಣ್ಣುಂಡಂತೆ (ಉ 1391), ಹಾಲುಕೂಳುಂಬಂತೆ (ಪ 898). 3 ಸಾಲವ ಮರಳಿ ಕೊಡುವಾಗ ಕಿಬ್ಬರಿಯ (ಪ). 4 ಕೀ(ಕೋ?)ಲು ಕೊಂಡಂತೆ (ಪ).

ಟಿಪ್ಪಣಿ: ೧೨೯–೧೩೦ ಈ ಎರಡು ಪದ್ಯಗಳೂ ಒಂದೇ ಆಗಿದ್ದು "ಕುಂಡೆಗೆ ಚೇಳು ಕಡಿದಂತೆ" ಎಂಬ ಉಪಮಾನ ಸೇರಿಕೊಂಡಾಗ ಎರಡು ಪದ್ಯಗಳಾಗಿ ರೂಢಿಗೆ ಬಂದಿರಬೇಕು. ೧೩೦ನೆಯ ಪದ್ಯದ ಪಾಠವೇ ಮೊದಲಿನ ಏಕೈಕ ಪಾಠ ಆಗಿದ್ದಿರಬೇಕು.

ಸಾ[1]ವಿಗೆ[1] [2]ಸಮ್ಮತಿಗಾ[2]ವುದಂತರವಯ್ಯ
ಸಾವು [3]ಸಮ್ಮತಿಯೊಳ[ಗ]ಲ್ಲ[3] | ಕೋಪ[4]ವ[4]
[5]ತಾವುದೇ[5] ಸಮ್ಮತಿ ಸರ್ವಜ್ಞ ೧೩೧

[ಸಾವು 1550

ಕುದುರೆಯನ್ನೇರ*[ದ] ಕದನವ ಜಯಿಸ*[ದ]
[1]ಸುದತಿಯರೊಲುಮೆಯರಿಯದ[1] | ಅರಸು ತಾ
[2]ಸಿದಿಗೆಯ ಹೆಣನು[2] ಸರ್ವಜ್ಞ ೧೩೨

[ಸಿದುಗು 1556

ತೋರುವ ಕುಲಗಿರಿ[1]ಯೇರಿ[1] ತಪದೊ[2][ಳಿ]ರ್ದು[2]
[3]ಬೇರೊಂದು ಪದ[ವನೆಣಿ]ಸಿದರೆ[3] | ಬೆಳೆದ ಹೊಲ
ಸೂರೆಹೋದಂತೆ ಸರ್ವಜ್ಞ ೧೩೩

[ಸೂರೆ 1584

[1]ಎಲ್ಲರೂ ಹಿರಿಯರು[1] [2]ಬಲ್ಲ ಗರುವರುಗಳು[2]
[3]ನಲ್ಲಳು ಮುಂದೆ[3] ಸುಳಿದರೆ | ಲೋಕ[4]ದೊ-
ಳೊಲ್ಲದರಾರು[4] ಸರ್ವಜ್ಞ ೧೩೪

[ಸುಟಿ 1580

---

೧೩೧ 1 ವಿಂಗೆ (ಕಿ ಉ 511 ಪ 235). 2 ಸಮಂತಿಂಗೆ ಆ-(ಉ), ಸಮಂತೆಗೆ ಆ-(ಪ). 3 ಸಮ್ಮತಿಯೊಳಲ್ಲ (ಕಿ), ತಾ ಸಮತೆಗಳವಲ್ಲ (ಉ), ಸಮಂತೆಯೊಳಗಲ್ಲ (ಪ). 4 ವನು (ಉ). 5 ಕಾವುದೇ (ಪ) [ತಾವುದೆ = ತವಿಸುವುದೆ (ಕಿ)]. [ಕಿರ್ಟೆ-ಕಿ. ಪಾಠಗಳು ಒಂದೇ ರೀತಿ. ಕಿರ್ಟೆ (893) Complaisance keeps down anger ಎಂದು ವ್ಯಾಖ್ಯಾನಿಸಿದ್ದಾನೆ. ನೋಡಿ : ಪ. 94 ಪುಟ].

೧೩೨ 1 ಸುದತಿಯರ ಒಲುಮೆ ಅರಿಯದ (ಉ 752), ಸುದತಿಯರ ಒಲುಮೆಯರಿಯದ (ಪ 574). 2 ಸಿದಿಗೆ ಹೆಣದಂತೆ (ಕಿ), (ಸ್ವೀ.ಪಾ.) ಸಿದಿಗೆಯ ಹೆಣನು (ಉ ಪ).

* –ದೆ (ಕಿ).

೧೩೩ 1 ಯ ನೇರಿ (ಉ 579), ಯ ಮಾಜಿ (ಪ 329). 2 –ದೊಳಗಿರ್ದು (ಕಿ ಉ ಪ). 3 –ಪದವೆನಿಸಿದರೆ (ಕಿ), ಬೇರೊಂದ ಮನವು ನೆನೆದಿಹರೆ (ಉ), ಬೇಜೊಂದ ಮನವೆಣಿಸಿದರೆ (ಪ).

[ಟಿಪ್ಪಣಿ: 'ತೋರುವ ಕುಲಗಿರಿ' ಎಂಬಲ್ಲಿ 'ತೋರುವ' ಪದ 'ತೋರ' (= ದೊಡ್ಡ) ಎಂದು ಇದ್ದಿರಬಹುದೆ?]

೧೩೪ 1 –ಹಿರಿಯರೂ (ಕಿ), ಎಲ್ಲವರು ಹಿರಿಯವರು (ಉ 1273), ಎಲ್ಲ ಹಿರಿಯರುಗಳು (ಪ 277). 2 –ಗುರುವರುಗಳು (ಕಿ), ಬಲ್ಲವರು ಗರುವರರು! (ಉ). 3 ನಲ್ಲಳುರೆ (ಉ). 4 ದೊಳಗೆ ಒಲ್ಲದವರಾರು (ಕಿ), ದೊಳ ಗೊಲ್ಲದವರಾರು (ಉ ಪ).

